ಸೋಮವಾರ, ಜೂನ್ 10, 2024 | ₹ 7.00
www.prajavani.net
prajavani.net prajavani prajavani prajavani
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಟೆರಿನಾಗೆ ಡಬಲ್ಸ್ ಪ್ರಶಸ್ತಿ

ಅಮೆರಿಕದ ಕೊಕೊ ಗಾಫ್ ಅವರು ಜೆಕ್ ಗಣರಾಜ್ಯದ ಕಟೆರಿನಾ ಸಿನಿಯಾಕೋವಾ ಅವರೊಂದಿಗೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚೊಚ್ಚಲ ಡಬಲ್ಸ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು




OM SHREE GURU BASAVALINGAYA NAMAHA
HIREMATH SAMSTHAN VIDYAPEETH TRUST(R), BHALKI
SHRI CHANNABASAVESHWAR GURUKUL
RESIDENTIAL PU SCIENCE COLLEGE, KARDYAL
TQ. BHALKI - DIST. BIDAR - KARNATAKA
GURUKUL MAKES A LANDMARK VICTORY IN NEET-2024
CONGRATULATIONS
SANJANA MARKS-691
KIRANKUMAR MARKS-685
ARYAN MARKS-680
VERENDRA MARKS-675
VARDHAN MARKS-671
SAKSHI MARKS-671
RAM MARKS-671
ABHISHEK MARKS-667
ABHINAV MARKS-665
SANTOSHI MARKS-665
ADINATH MARKS-665
AKASH MARKS-665
VARUN MARKS-665
ADITY MARKS-660
ANAGHA MARKS-656
SUMEET MARKS-655
PRAJWAL MARKS-648
VAISHNAVI MARKS-644
AVINASH MARKS-642
AKSHATA MARKS-641
BHARAT MARKS-640
SANDHYA MARKS-635
POOJA MARKS-630
ADARSH MARKS-629
VISHAL MARKS-628
SPOORTHI MARKS-627
MANJUNATH MARKS-625
TANUSHREE MARKS-621
PRAGATI MARKS-621
HARSHITHA MARKS-619
YUVARAJ MARKS-618
ADITYA MARKS-618
SNEHA MARKS-618
DEEPAK MARKS-616
ASPIYA MARKS-615
MAHESH MARKS-615
BHUMIKA MARKS-614
SHIVANAGU MARKS-613
OMNAGESH MARKS-612
SHESHANK MARKS-609
PRAGATI MARKS-608
RAMYA MARKS-607
BASAVAPRASAD MARKS-605
SAKSHI MARKS-605
VAIBHAVI MARKS-605
SHRUTI MARKS-605
RAKSHITA MARKS-603
PRATHVIRAJ MARKS-603
SHASHANK MARKS-603
NANADKUMAR MARKS-603
ANUPAMAJYOTHI MARKS-602
PRAJWAL MARKS-602
SNEHA MARKS-601
ADITYA MARKS-601
MD. SIDDIK MARKS-600
ADARSHKUMAR MARKS-600
BASAVARAJ MARKS-600
SONALI MARKS-600
GIRIRAJ MARKS-600
SOUMYA MARKS-600
SANGANABASAVA MARKS-599
SNEHAL MARKS-597
PRARTHANA MARKS-596
SAINATH MARKS-595
SHANTIPRIYA MARKS-595
SHANKAR MARKS-595
PRABHU MARKS-593
SHARANABASAVA MARKS-592
BALBHEEM MARKS-592
NISHA MARKS-592
DEEPAK MARKS-591
ANISH MARKS-591
NIRANJAN MARKS-590
ANUJ MARKS-590
CHIDRUP MARKS-589
AISHWARYA MARKS-588
SACHIN MARKS-588
VISHNU MARKS-586
VEERESH MARKS-585
AMBIKA MARKS-585
VISHNUKANTH MARKS-583
SANDESH MARKS-583
SONY MARKS-583
NANDINI MARKS-583
SHREYASH MARKS-582
RAGHAVENDRA MARKS-582
ANAND MARKS-580
NISARGA MARKS-578
SATYAKKA MARKS-576
PRAVEENKUMAR MARKS-570
SHIVAM MARKS-569
SHRUSHTI MARKS-569
KARUNASAGAR MARKS-568
VEERENDRA MARKS-567
DNYANESHWAR MARKS-567
SHIVAKUMAR MARKS-566
SHRISHANT MARKS-565
SUMIT MARKS-564
DEVYANI MARKS-564
KRISHNA MARKS-564
GURUKUL NEET 2024 RESULT ANALYSIS
670+ MARKS 07 STUDENTS
650+ MARKS 16 STUDENTS
625+ MARKS 27 STUDENTS
600+ MARKS 60 STUDENTS
550+ MARKS 187 STUDENTS
500+ MARKS 232 STUDENTS
ADMISSIONS OPEN FOR
NEET (REPEATERS)
LONG TERM BATCH-2024-25
8147740402, 9482955660, 7353304503
Website : www.cbgurukul.in

ಸೋಮವಾರ, ಜೂನ್ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 161 | ಪುಟ 16 • www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೆಲುವಿನ ಸಂಭ್ರಮ

ನ್ಯೂಯಾರ್ಕ್‌ನಲ್ಲಿ ಭಾನುವಾರ ನಡೆದ ಪಾಕಿಸ್ತಾನ ವಿರುದ್ಧದ ಟ್ವೆಂಟಿ–20 ಪಂದ್ಯದ ವೇಳೆ ಭಾರತದ ಅಭಿಮಾನಿಗಳ ಸಂಭ್ರಮ. ಈ ಪಂದ್ಯದಲ್ಲಿ ಭಾರತ 6 ರನ್‌ಗಳಿಂದ ಗೆದ್ದಿತು



ಲೋಕಸಭೆ ಫಲಿತಾಂಶ: ಬೂತ್ ಮಟ್ಟದ ಪರಿಶೀಲನೆ- ಕಾಂಗ್ರೆಸ್ 7

ಮುಳುಗಡೆಯಾಗಿದ್ದ ಸೇತುವೆ ದಾಟುತ್ತಿದ್ದಾಗ ಅವಘಡ

ಶಕ್ತಿ ಯೋಜನೆ ರದ್ದು ಮಾಡಲ್ಲ: ಸಚಿವ 4

ನದಿಗೆ ಬಿದ್ದ ಟ್ರ್ಯಾಕ್ಟರ್: 9 ಜನರ ರಕ್ಷಣೆ 4

ಮೋದಿ ಸಂಪುಟ								
72	30	5	36	24	11	43	39	23
ಒಟ್ಟು ಸಚಿವರು	ಸಂಪುಟ ದರ್ಜೆ ಸಚಿವರು	ಸ್ವತಂತ್ರ ಉಸ್ತುವಾರಿ ಹೊಂದಿರುವ ರಾಜ್ಯ ಸಚಿವರು	ರಾಜ್ಯ ಸಚಿವರು	ಸಂಪುಟದಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯ	ಮಿತ್ರಪಕ್ಷಗಳ ಸದಸ್ಯರಿಗೆ ಸಂಪುಟದಲ್ಲಿ ಸ್ಥಾನ	ಸಚಿವರು ಮೂರು ಅಥವಾ ಹೆಚ್ಚಿನ ಬಾರಿಗೆ ಸಂಸತ್ತಿನ ಸದಸ್ಯರಾಗಿದ್ದಾರೆ	ಸಚಿವರು ಈ ಮೊದಲು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದರು	ಸಂಸದರು ಈ ಹಿಂದೆ ರಾಜ್ಯಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದರು

ಜೆ.ಪಿ. ನಡ್ಡಾ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ನಾಲ್ಕು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಅವರು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ.

ಕರ್ನಾಟಕದಿಂದ ನಿರ್ಮಲಾ, ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಸೋಮಣ್ಣ, ಶೋಭಾಗೆ ಅವಕಾಶ • ಮಿತ್ರ ಪಕ್ಷಗಳ 11 ಮಂದಿಗೆ ಸಚಿವ ಸ್ಥಾನ

ಮೋದಿ 3.0: ‘ಮೈತ್ರಿ’ ಸಂಪುಟಕ್ಕೆ 72 ಗರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಹಿಂದಿನ ಪೂರ್ಣ ಬಹುಮತದ ಸರ್ಕಾರಗಳಿಗೆ ಹೋಲಿಸಿದರೆ ಎನ್‌ಡಿಎ ಮಿತ್ರ ಪಕ್ಷಗಳು ಹೆಚ್ಚಿನ ಪ್ರಾತಿನಿಧ್ಯ ಹೊಂದಿರುವ ಸಂಪುಟದ ‘ಭಾರ’ ಹೊತ್ತು ನರೇಂದ್ರ ಮೋದಿ ಅವರು ಭಾರತದ ಪ್ರಧಾನಿಯಾಗಿ ತಮ್ಮ ಸತತ ಮೂರನೇ ಇನ್ನಿಂಗ್ಸ್ ಅನ್ನು ಭಾನುವಾರ ಆರಂಭಿಸಿದರು. ಈ ಮೂಲಕ ಪ್ರಧಾನಿಯಾಗಿ ಜವಾಹರ್ ಲಾಲ್ ನೆಹರೂ ಅವರು ‘ಹ್ಯಾಟ್ರಿಕ್’ ಸಾಧನೆಯನ್ನು ಸರಿಗಟ್ಟಿದರು.

ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ರಾತ್ರಿ ನಡೆದ ಅದ್ದೂರಿ ಸಮಾರಂಭದಲ್ಲಿ ದೇಶ ವಿದೇಶದ ಗಣ್ಯರ ಸಮ್ಮುಖದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೋದಿ ಹಾಗೂ ಸಂಪುಟದ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು.

17ನೇ ಲೋಕಸಭೆಯಲ್ಲಿ ಬಿಜೆಪಿಗೆ ಭರ್ಜರಿ ಬಹುಮತ ಸಿಕ್ಕಿದ್ದರಿಂದ ಮಿತ್ರ ಪಕ್ಷಗಳಿಗೆ ಐದು ಸಚಿವ ಸ್ಥಾನಗಳನ್ನಷ್ಟೇ ನೀಡಲಾಗಿತ್ತು. ಈ ಸಲ ಕಮಲ ಪಾಳಯಕ್ಕೆ ಬಹುಮತ ಸಿಕ್ಕಿಲ್ಲ. ಇದರಿಂದಾಗಿ, ಮೋದಿ ಸಂಪುಟದಲ್ಲಿ ಮಿತ್ರ ಪಕ್ಷಗಳ ಸದಸ್ಯರ ಸಂಖ್ಯೆ 11ಕ್ಕೆ ಏರಿದೆ. ಸಂಪುಟದಲ್ಲಿ ಹಿರಿಯರಿಗೆ ಹಾಗೂ ಹೊಸಬರಿಗೆ ಅವಕಾಶ ನೀಡುವ ಮೂಲಕ ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನ ನಡೆಸಲಾಗಿದೆ. ಜತೆಗೆ, ಹಿಂದಿ ಸೀಮೆಯ ರಾಜ್ಯಗಳಿಗೆ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ. ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ನಾಲ್ವರನ್ನು ಸೇರಿಸಿಕೊಳ್ಳಲಾಗಿದೆ. ಆದರೆ, ಮುಸ್ಲಿಂ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿಲ್ಲ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಯು 64 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿತ್ತು. ಕಳೆದ ಬಾರಿ ರಾಜ್ಯದ 12 ಸಚಿವರು ಇದ್ದರು. ಈ ಸಲ ಕಮಲ ಪಾಳಯ ಗೆದ್ದಿರುವುದು 33 ಕ್ಷೇತ್ರಗಳಲ್ಲಿ. ಈ ಬಾರಿ ರಾಜ್ಯದ ಒಂಬತ್ತು ಸಂಸದರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ಹೊಸ ತಂಡವನ್ನು ಆಯ್ಕೆ ಮಾಡುವಾಗ ಮೋದಿ ಅವರು ಕಳೆದ ಸರ್ಕಾರದಲ್ಲಿ ಭದ್ರತೆಗೆ ಸಂಬಂಧಿಸಿದ ಸಂಪುಟ ಸಮಿತಿಯ ಭಾಗವಾಗಿದ್ದ ಪ್ರಮುಖ ನಾಲ್ವರು ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್, ಎಸ್.ಜೈಶಂಕರ್ ಮೇಲೆ ಮತ್ತೆ ನಂಬಿಕೆ ಇಟ್ಟರು. ನಾಗ್ಪುರದ ಸಂಸದ ನಿತಿನ್ ಗಡ್ಕರಿ ಹಾಗೂ ಮುಂಬೈ ಉತ್ತರದಿಂದ ತನ್ನ ಚೊಚ್ಚಲ ಲೋಕಸಭಾ ಚುನಾವಣೆಯಲ್ಲಿ ಗೆದ್ದ ರಾಜ್ಯಸಭೆ ಸದನದ ನಾಯಕ ಪೀಯೂಷ್ ಗೋಯಲ್ ಅವರಂತಹ ‘ಪ್ರಭಾವಿ’ಗಳನ್ನು ಹಾಗೆಯೇ ಉಳಿಸಿಕೊಂಡರು.

7ನೇ ಪುಟ ನೋಡಿ



ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಭಾನುವಾರ ನಡೆದ ಸಂಪುಟ ರಚನೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಸಂಸದರಾದ ರಾಜನಾಥ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ, ಜೆ.ಪಿ.ನಡ್ಡಾ, ಶಿವರಾಜ ಸಿಂಗ್ ಚೌಹಾಣ್ ಹಾಗೂ ನಿರ್ಮಲಾ ಸೀತಾರಾಮನ್ ಸೇರಿದಂತೆ ಇತರ ಮುಖಂಡರನ್ನು ಅಭಿನಂದಿಸಿದರು —ಪಿಟಿಐ ಚಿತ್ರ

ಬ್ರಾಹ್ಮಣರು, ಒಕ್ಕಲಿಗರಿಗೆ ಮಣೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಹೊಸ ಸರ್ಕಾರದಲ್ಲಿ ರಾಜ್ಯಕ್ಕೆ ಐದು ಸಚಿವ ಸ್ಥಾನಗಳನ್ನು ನೀಡಿದ್ದರೂ ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ಸಮತೋಲನಕ್ಕೆ ಆದ್ಯತೆ ನೀಡಿಲ್ಲ. ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಬೆನ್ನಿಗೆ ನಿಂತ ಒಕ್ಕಲಿಗರು ಮತ್ತು ಲಿಂಗಾಯತರಿಗೆ ಮಣೆ ಹಾಕಿರುವ ಎನ್‌ಡಿಎ, ಬ್ರಾಹ್ಮಣರಿಗೆ ಸಂಪುಟ ದರ್ಜೆಯ ಎರಡು ಸ್ಥಾನಗಳ ಕೊಡುಗೆ ನೀಡಿದೆ. ಆದರೆ, ದಲಿತರು ಮತ್ತು ಹಿಂದುಳಿದ ವರ್ಗಗಳನ್ನು ಸಂಪುಟದಿಂದ ದೂರ ಇರಿಸಿದೆ.

ರಾಜ್ಯದ ಕೋಟಾದಲ್ಲಿ ಮೂವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ದೊರಕಿದ್ದರೆ, ಇಬ್ಬರಿಗೆ ರಾಜ್ಯ ಸಚಿವ ದರ್ಜೆ ನೀಡಲಾಗಿದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗುತ್ತಿರುವ ಬಿಜೆಪಿಯ ನಿರ್ಮಲಾ ಸೀತಾರಾಮನ್ ಅವರಿಗೆ ಮತ್ತೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡಲಾಗಿದೆ. ಪ್ರಲ್ಹಾದ ಜೋಶಿ ಅವರನ್ನೂ ಮುಂದುವರಿಸಲಾಗಿದೆ. ಇಬ್ಬರೂ ಬ್ರಾಹ್ಮಣರು. ಮಿತ್ರಪಕ್ಷ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಅವರಿಗೂ ಸಂಪುಟ ದರ್ಜೆ ಸಚಿವ ಸ್ಥಾನ ದೊರಕಿದೆ. ಅವರು ಒಕ್ಕಲಿಗ ಸಮುದಾಯದವರಾಗಿದ್ದು, ಮೂರೂ ಸಂಪುಟ ದರ್ಜೆ ಸಚಿವ ಸ್ಥಾನಗಳು ಪ್ರಬಲ ವರ್ಗಗಳ ಪಾಲಾಗಿವೆ.

ಹಿಂದಿನ ಅವಧಿಯಲ್ಲಿ ರಾಜ್ಯ ಸಚಿವೆಯಾಗಿದ್ದ ಒಕ್ಕಲಿಗ ಸಮುದಾಯದ ಶೋಭಾ ಕರಂದ್ಲಾಜೆ ಅವರನ್ನು ಮತ್ತೊಂದು ಅವಧಿಗೆ ಮುಂದುವರಿಸಲಾಗಿದೆ. ಅವರೊಂದಿಗೆ ಲಿಂಗಾಯತ ಸಮುದಾಯದ ವಿ. ಸೋಮಣ್ಣ ಅವರಿಗೂ ರಾಜ್ಯ ಸಚಿವ ಸ್ಥಾನ ನೀಡಲಾಗಿದೆ. ರಾಜ್ಯ ಸಚಿವರ ಎರಡೂ ಸ್ಥಾನಗಳಿಗೂ ಪ್ರಬಲ ಸಮುದಾಯಗಳಿಗೇ ಬಿಜೆಪಿ ಮಣೆ ಹಾಕಿದೆ.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಬೆನ್ನಿಗೆ ಬಲವಾಗಿ ನಿಂತಿದ್ದವು. ಅದರ ಜತೆಯಲ್ಲೇ ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳು ಬಿಜೆಪಿ ಬೆಂಬಲಕ್ಕೆ ನಿಂತಿದ್ದವು. ಬಿಲ್ಲವ–ಈಡಿಗ ಮತದಾರರ ಸಂಖ್ಯೆ ಹೆಚ್ಚಿರುವ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ದೊಡ್ಡ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಪರಿಶಿಷ್ಟ ಜಾತಿಯ ಎಡಗೈ ಸಮುದಾಯಗಳೂ ಬಿಜೆಪಿ ಬೆನ್ನಿಗೆ ಬಲವಾಗಿ ನಿಂತಿದ್ದವು. ಹೀಗಾಗಿ ಹಿಂದುಳಿದ ವರ್ಗಗಳು ಮತ್ತು ದಲಿತರಿಗೆ ಕೇಂದ್ರ ಸಂಪುಟದಲ್ಲಿ ಪ್ರಾತಿನಿಧ್ಯ ದೊರಕಬಹುದು ಎಂಬ ನಿರೀಕ್ಷೆ ಇತ್ತು.

7ನೇ ಪುಟ ನೋಡಿ

ಬಿಳಿ ಕುರ್ತಾ, ನೀಲಿ ಜಾಕೆಟ್

- ಸತತ ಮೂರನೆಯ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ಬಿಳಿ ಬಣ್ಣದ ಕುರ್ತಾ, ನೀಲಿ ಬಣ್ಣದ ಜಾಕೆಟ್ ಧರಿಸಿದ್ದರು
- ಪ್ರಮಾಣ ವಚನ ಸ್ವೀಕರಿಸುವ ಮುನ್ನ ನರೇಂದ್ರ ಮೋದಿ ಅವರು ಬೆಳಿಗ್ಗೆ ರಾಜ್‌ಘಾಟ್‌ಗೆ ಭೇಟಿ ನೀಡಿ, ಮಹಾತ್ಮ ಗಾಂಧಿ ಅವರ ಸ್ಮಾರಕದಲ್ಲಿ ನಮನ ಸಲ್ಲಿಸಿದರು. ನಂತರ, ಮಾಜಿ ಪ್ರಧಾನಿ, ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಸ್ಮಾರಕ ‘ಸದೈವ್ ಅಟಲ್’ ಮತ್ತು ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ತೆರಳಿ ಅವರು ನಮನ ಸಲ್ಲಿಸಿದರು
- ಚಲನಚಿತ್ರ ನಟರಾದ ಶಾರುಕ್ ಖಾನ್, ಅನಿಲ್ ಕಪೂರ್, ರಜನಿಕಾಂತ್, ಅಕ್ಷಯ್ ಕುಮಾರ್, ರವೀನಾ ಟಂಡನ್, ಅನುಪಮ್ ಖೇರ್, ಕೈಗಾರಿಕೋದ್ಯಮಿಗಳಾದ ಮುಖೇಶ್ ಅಂಬಾನಿ, ಗೌತಮ್ ಅದಾನಿ ಭಾಗವಹಿಸಿದ್ದರು.
- ಲೋಕಸಭೆಯ ಅತ್ಯಂತ ಶ್ರೀಮಂತ ಸದಸ್ಯ ಪೆಮ್ಮಸಾನಿ ಚಂದ್ರಶೇಖರ್ ರಾಜ್ಯ ಖಾತೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಇವರ ಘೋಷಿತ ಆಸ್ತಿಯ ಮೌಲ್ಯ ₹5,700 ಕೋಟಿ

ನೂತನ ಸಚಿವರ ಪರಿಚಯ 6,9

ಸಂಪುಟ ದರ್ಜೆಗೆ ಎನ್‌ಸಿಪಿ ಪಟ್ಟು

ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಸಂಪುಟ ದರ್ಜೆಯ ಸ್ಥಾನ ಬೇಕು ಎಂದು ಪಟ್ಟು ಹಿಡಿದಿರುವ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ, ರಾಜ್ಯ ದರ್ಜೆಯ ಸಚಿವ (ಸ್ವತಂತ್ರ ನಿರ್ವಹಣೆ) ಸ್ಥಾನವನ್ನು ಒಪ್ಪದೆ ಇರಲು ಭಾನುವಾರ ತೀರ್ಮಾನಿಸಿದೆ.

ಆದರೆ, ಈ ವಿಷಯವನ್ನು ಇನ್ನಷ್ಟು ವಿಷಮಗೊಳಿಸದೆ ಇರಲು ಬಿಜೆಪಿ ಹಾಗೂ ಎನ್‌ಸಿಪಿ ತೀರ್ಮಾನಿಸಿವೆ. ಭಾನುವಾರ ನಡೆದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಎನ್‌ಸಿಪಿ ಪ್ರತಿನಿಧಿಗಳು ಭಾಗಿಯಾಗಿದ್ದರು. ಅಲ್ಲದೆ, ಇನ್ನೂ ಕೆಲವು ದಿನಗಳವರೆಗೆ ಕಾಯಲು ಸಿದ್ಧವಿರುವುದಾಗಿ ಎನ್‌ಸಿಪಿ ಹೇಳಿದೆ. ಇತ್ತ ಬಿಜೆಪಿಯು ಎನ್‌ಸಿಪಿ ವಿಚಾರವಾಗಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿರುವುದಾಗಿ ತಿಳಿಸಿದೆ.

ಕೇಂದ್ರದಲ್ಲಿ ಸಚಿವ ಸ್ಥಾನ ಪಡೆಯಬೇಕಿದ್ದ ಎನ್‌ಸಿಪಿ ಪ್ರತಿನಿಧಿ ಪ್ರಫುಲ್ ಪಟೇಲ್ ಅವರು ಈಗಾಗಲೇ ಸಂಪುಟ ದರ್ಜೆಯ ಸಚಿವ ಸ್ಥಾನವನ್ನು ಹೊಂದಿದ್ದವರು. ಅವರು ಈಗ ಅದಕ್ಕಿಂತ ಕೆಳಹಂತದ ಸ್ಥಾನವನ್ನು ಒಪ್ಪುವುದಿಲ್ಲ ಎಂದು ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಅವರು ಬಿಜೆಪಿಯ ನಾಯಕರಿಗೆ ತಿಳಿಸಿದ್ದಾರೆ.

11ನೇ ಪುಟ ನೋಡಿ

ಒಳಪುಟಗಳಲ್ಲಿ

ಮುಂಬೈ: ತಪ್ಪಿದ ವಿಮಾನ ಅವಘಡ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ ಇಂಡಿಯಾ ವಿಮಾನವು ನಿರ್ಗಮನ ಹಂತದಲ್ಲಿ ಇರುವಾಗಲೇ, ಇಂಡಿಗೊ ವಿಮಾನವು ಅದೇ ರನ್‌ವೇನಲ್ಲಿ ಇಳಿದ ಪ್ರಕರಣ ಶನಿವಾರ ನಡೆದಿದೆ. ಈ ಸಂಬಂಧ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ತನಿಖೆ ಆರಂಭಿಸಿದೆ.

ಒಂದು ನಿಮಿಷದ ಅಂತರದಲ್ಲಿ ಈ ವಿಮಾನಗಳಿಗೆ ಹಾರಲು (ಟೇಕಾಫ್) ಮತ್ತು ಇಳಿಯಲು ಅನುಮತಿ ನೀಡಲಾಗಿದೆ. ಕೂದಲೆಳೆಯ ಅಂತರದಲ್ಲಿ ಭಾರಿ ದುರಂತ ಸಂಭವಿಸುವುದು ತಪ್ಪಿದ್ದು, ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಆ ದಿನ ಕಾರ್ಯ ನಿರ್ವಹಿಸಿದ್ದ ವಿಮಾನ ನಿಲ್ದಾಣದ ವಾಯು ಸಂಚಾರ ನಿಯಂತ್ರಣ (ಎಟಿಸಿ) ಘಟಕದ ಅಧಿಕಾರಿಯನ್ನು ಕರ್ತವ್ಯದ ಪಾಳಿಯಿಂದ ಬಿಡುಗಡೆಗೊಳಿಸಲಾಗಿದೆ’ ಎಂದು ಡಿಜಿಸಿಎ ತಿಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂಡಿಗೊ ಕಂಪನಿ ಕೂಡ ತನಿಖೆಗೆ ಮುಂದಾಗಿದೆ. ಏರ್ ಇಂಡಿಯಾಗೆ ಸೇರಿದ ವಿಮಾನವು ತಿರುವನಂತಪುರಕ್ಕೆ ತೆರಳುತ್ತಿತ್ತು.

ಈ ವಿಮಾನ ನಿಲ್ದಾಣದಲ್ಲಿ ಎರಡು ಕ್ರಾಸಿಂಗ್ ರನ್‌ವೇಗಳು ಹಾಗೂ ಒಂದು ಕಾರ್ಯಾಚರಣೆ ರನ್‌ವೇ ಇದೆ. ಈ ರನ್‌ವೇನಲ್ಲಿ ಪ್ರತಿ ಒಂದು ಗಂಟೆಗೆ 46 ವಿಮಾನಗಳು ಆಗಮಿಸುತ್ತವೆ ಮತ್ತು ನಿರ್ಗಮಿಸುತ್ತವೆ.

‘ಇಂದೋರ್‌ನಿಂದ ಬರುತ್ತಿದ್ದ ವಿಮಾನವು ಎಟಿಸಿ ಅಧಿಕಾರಿಯ ಸೂಚನೆಯ ಅನ್ವಯವೇ ಇಳಿದಿದೆ. ನಮಗೆ ಪ್ರಯಾಣಿಕರ ಸುರಕ್ಷತೆ ಮುಖ್ಯವಾಗಿದೆ. ಹಾಗಾಗಿ ಡಿಜಿಸಿಎಗೆ ವರದಿ ಸಲ್ಲಿಸಿದ್ದೇವೆ’ ಎಂದು ಇಂಡಿಗೊ ಕಂಪನಿ ತಿಳಿಸಿದೆ.

ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ನಿಯಮಾವಳಿ ಅನ್ವಯ, ಹಾರಾಟಕ್ಕೆ ಅನುಮತಿ ಪಡೆದ ವಿಮಾನವು ರನ್‌ವೇ ಹಂತವನ್ನು ಪೂರ್ಣಗೊಳಿಸಿದ ನಂತರವಷ್ಟೇ ಮತ್ತೊಂದು ವಿಮಾನವು ಆ ರನ್‌ವೇನಲ್ಲಿ ಇಳಿಯಲು ಅನುಮತಿ ನೀಡುವುದು ಎಟಿಸಿ ಅಧಿಕಾರಿಯ ಕರ್ತವ್ಯವಾಗಿದೆ.

ಆದರೆ, ಈ ಪ್ರಕರಣದಲ್ಲಿ ನಿಯಮಾವಳಿಗಳನ್ನು ಪಾಲಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಉಗ್ರರ ದಾಳಿ: 10 ಯಾತ್ರಿಕರ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ಸೊಂದರ ಮೇಲೆ ಭಾನುವಾರ ಸಂಜೆ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. 10 ಮಂದಿ ಮೃತಪಟ್ಟಿದ್ದು, 33 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈಷ್ಣೋದೇವಿ ದೇಗುಲದ ಬೇಸ್ ಕ್ಯಾಂಪ್‌ನಲ್ಲಿರುವ ಶಿವ ಖೋರಿ ದೇವಾಲಯಕ್ಕೆ ಯಾತ್ರಿಕರನ್ನು ಬಸ್ ಕರೆದೊಯ್ಯುತ್ತಿತ್ತು. ಜಮ್ಮುವಿನ ರಿಯಾಸಿ ಜಿಲ್ಲೆಯ ಪೋನಿ ಪ್ರದೇಶದ ತೇರ್ಯಾತ್ ಗ್ರಾಮದಲ್ಲಿ ಸಂಜೆ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

11ನೇ ಪುಟ ನೋಡಿ



ಜಮ್ಮು–ಕಾಶ್ಮೀರದಲ್ಲಿ ಉಗ್ರರ ದಾಳಿಗೆ ಸಿಲುಕಿದ ಬಸ್ ಕಂದಕಕ್ಕೆ ಉರುಳಿಬಿತ್ತು

ಶಿರಾಡಿಘಾಟ್‌ನಲ್ಲಿ ಧರೆಗುರುಳಿದ ಮರಗಳು

ರಭಸದ ಮಳೆ: ಕೆರೆಗಳು ಭರ್ತಿ

ಪ್ರಜಾವಾಣಿ ವಾರ್ತೆ

ಕಲಬುರಗಿ/ ಹಾಸನ: ಕಲಬುರಗಿ, ಹಾಸನ, ಕೊಡಗು ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆ ಭಾನುವಾರ ಮಳೆಯಾಗಿದೆ.

ಕಲಬುರಗಿ ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಭಾನುವಾರ ಜೋರು ಮಳೆಯಾಯಿತು. ಶನಿವಾರ ರಾತ್ರಿ ಸುರಿದ ಮಳೆಗೆ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಜೀರಹಳ್ಳಿ ಕೆರೆ ಭರ್ತಿಯಾಗಿದೆ. ಹೆಚ್ಚುವರಿ ನೀರು ರಭಸವಾಗಿ ಹೊರ ಹರಿದು ರಸ್ತೆಯೊಂದು ಕೊಚ್ಚಿಕೊಂಡು ಹೋಗಿದೆ. ಮುನ್ನೋಳಿ ಕೆರೆಯ ಒಡಲು ಸಹ ತುಂಬಿದೆ.

ಹಾಸನ ಜಿಲ್ಲೆಯಾದ್ಯಂತ ಗಾಳಿ ಸಹಿತ ಮಳೆ ಸುರಿಯಿತು. ಸಕಲೇಶಪುರ ತಾಲ್ಲೂಕಿನ ಶಿರಾಡಿ ಘಾಟ್‌ನಲ್ಲಿ ಧಾರಾಕಾರ ಮಳೆಯಿಂದ ಮರಗಳು ರಸ್ತೆಗೆ ಉರುಳುತ್ತಿದ್ದು, ಎಚ್ಚರಿಕೆಯಿಂದ ಸಂಚರಿಸುವಂತೆ ವಾಹನ ಸವಾರರಿಗೆ ತಾಲ್ಲೂಕು ಆಡಳಿತ ಸೂಚಿಸಿದೆ.

ಬೆಂಗಳೂರು-ಮಂಗಳೂರು ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿಘಾಟ್‌ನಲ್ಲಿ ಅಲ್ಲಲ್ಲಿ ಗಿಡಗಳು ರಸ್ತೆಗೆ ಅಡ್ಡಲಾಗಿ ಉರುಳಿವೆ. ಮಡಿಕೇರಿ, ನಾಪೋಕ್ಲು ಭಾಗದಲ್ಲಿ ಹೆಚ್ಚು ರಭಸದ ಮಳೆಯಾಯಿತು, ಸೋಮವಾರಪೇಟೆ, ವಿರಾಜಪೇಟೆ ಭಾಗದಲ್ಲಿ ಸಾಧಾರಣ ಮಳೆ ಬಿದ್ದಿತು. ಮೈಸೂರು ನಗರದಲ್ಲೂ ತುಂತುರು ಮಳೆಯಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮುಂಗಾರು ಮಳೆಯ ಜೋರಾಗಿ ಸುರಿಯುತ್ತಿದೆ; ಭಾನುವಾರ ಬಿಟ್ಟು ಬಿಟ್ಟು ಧಾರಾಕಾರ ಮಳೆಯಾಗಿದೆ. ಶನಿವಾರ ರಾತ್ರಿಯೂ ಜೋರು ಮಳೆ ಇತ್ತು. ಸೋಮವಾರವೂ ಜಿಲ್ಲೆಯಾದ್ಯಂತ ಗುಡುಗು ಸಿಡಿಲಿನಿಂದ ಕೂಡಿರುವ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಇದೇ 11ರಂದು ಮಳೆಯಾಗುವ ಮುನ್ಸೂಚನೆ ಇದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಗಾಳಿ ಸಹಿತ ಧಾರಾಕಾರ ಮಳೆ ಸುರಿಯುತ್ತಿದೆ. ಜಿಲ್ಲೆಯಾದ್ಯಂತ ಭಾನುವಾರವೂ ಸಾಧಾರಣ ಮಳೆಯಾಗಿದೆ. ರಾತ್ರಿ ವೇಳೆಗೆ ಮಳೆ ಬಿರುಸುಗೊಂಡಿದೆ.

ಏರಿಕೆಯಾದ ಒಳಹರಿವು: ಹೊಸಪೇಟೆ ನಗರ ಸಹಿತ ಜಿಲ್ಲೆಯ ವಿವಿಧ ಕಡೆಗಳಲ್ಲಿ ಭಾನುವಾರ ಸಾಧಾರಣ ಮಳೆಯಾಗಿದ್ದು, ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 2,750 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಜಲಾಶಯದಲ್ಲಿ ಸದ್ಯ 4.16 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಜೂನ್ 1ರಿಂದ ಜಲಾಶಯಕ್ಕೆ ಒಳಹರಿವು ಆರಂಭವಾಗಿತ್ತು. ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಚುರುಕುಗೊಂಡಿದೆ.



ಬೆಳಗಾವಿಯ ಮೂಡಲಗಿ ತಾಲ್ಲೂಕಿನ ಅವರಾದಿಯಲ್ಲಿ ಮುಳುಗಡೆಯಾದ ಸೇತುವೆಯಿಂದ ಟ್ರ್ಯಾಕ್ಟರ್ ಮಗುಚಿ ಬಿದ್ದಿದೆ

‘ಸ್ಫೂರ್ತಿಯ ನಡೆ’ಗೆ ಅನುದಾನ ಕೊರತೆ

ಯೋಜನೆ ಸ್ಥಗಿತ • ಗ್ರಾಮೀಣ ವಿದ್ಯಾರ್ಥಿಗಳಿಗಿಲ್ಲ ಸ್ಪೋಕನ್ ಇಂಗ್ಲಿಷ್, ವ್ಯಕ್ತಿತ್ವ ವಿಕಸನದ ತರಬೇತಿ

• ಖಲೀಲಅಹ್ಮದ ಶೇಖ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ‘ಸ್ಫೂರ್ತಿಯ ನಡೆ’ ಯೋಜನೆಗೆ 2023–24ನೇ ಸಾಲಿನಲ್ಲಿ ಅನುದಾನ ನಿಗದಿಪಡಿಸದ ಕಾರಣ ಯೋಜನೆ ಸ್ಥಗಿತಗೊಂಡಿದೆ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ‘ಸ್ಪೋಕನ್ ಇಂಗ್ಲಿಷ್ ಹಾಗೂ ವ್ಯಕ್ತಿತ್ವ ವಿಕಸನ’ ತರಬೇತಿಯಿಂದ ವಂಚಿತರಾಗಿದ್ದಾರೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 1,165 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು, ಅದರಲ್ಲಿ 84,432 ವಿದ್ಯಾರ್ಥಿಗಳು ದಾಖಲಾತಿ ಪಡೆದಿದ್ದಾರೆ.

ಈ ಪೈಕಿ ಗ್ರಾಮೀಣ ಪ್ರದೇಶದ ಹಾಗೂ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರ ಆತ್ಮವಿಶ್ವಾಸ ಹೆಚ್ಚಿಸುವ ಹಾಗೂ ಉದ್ಯೋಗಾವಕಾಶ ಪಡೆಯಲು ಅನುವು ಮಾಡಿಕೊಡುವ ಉದ್ದೇಶದಿಂದ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ 2022–23ರಲ್ಲಿ ‘ಸ್ಫೂರ್ತಿಯ ನಡೆ’ ಯೋಜನೆಯನ್ನು ಜಾರಿಗೊಳಿಸಿತ್ತು.

ಇದಕ್ಕಾಗಿ ₹5 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, ಈ ಬಾರಿ ಅನುದಾನ ನಿಗದಿಪಡಿಸದ ಕಾರಣ ಈ ಯೋಜನೆ ಸ್ಥಗಿತಗೊಂಡಿದೆ.

‘ಮೆಟ್ರಿಕ್‌ವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಸಂವಹನ ನಡೆಸಲು ಕಷ್ಟವಾಗುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಉದ್ಯೋಗ ಪಡೆಯಲು ಇಂಗ್ಲಿಷ್ ಭಾಷೆಯ ಜ್ಞಾನ, ವ್ಯಕ್ತಿತ್ವ ವಿಕಸನ ಅಗತ್ಯವಾಗಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ವಸತಿ ನಿಲಯಗಳಿಗೆ ದಾಖಲಾತಿ ಪಡೆಯುವ ಗ್ರಾಮೀಣ ವಿದ್ಯಾರ್ಥಿಗಳಿಗೆ ‘ಸ್ಪೋಕನ್ ಇಂಗ್ಲಿಷ್ ಮತ್ತು ವ್ಯಕ್ತಿತ್ವ ವಿಕಸನದ ತರಬೇತಿ’ ನೀಡುವ ಯೋಜನೆ ಜಾರಿಗೊಳಿಸಿತ್ತು’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ತಿಳಿಸಿದರು.

‘ಪ್ರತಿ ತಿಂಗಳು 15 ಸ್ಪೋಕನ್ ಇಂಗ್ಲಿಷ್ ಹಾಗೂ 4 ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ 1 ಗಂಟೆಯ ಅವಧಿ ತರಗತಿಗಳಿದ್ದವು. ಸ್ಪೋಕನ್ ಇಂಗ್ಲಿಷ್ ತರಬೇತಿ ನೀಡುವ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಿಗೆ 10 ತಿಂಗಳಿಗೆ ₹30 ಸಾವಿರ ಹಾಗೂ ವ್ಯಕ್ತಿತ್ವ ವಿಕಸನ ಬೋಧಿಸುವ ವಿಷಯ ತಜ್ಞರಿಗೆ ₹14 ಸಾವಿರ ಗೌರವಧನ ನಿಗದಿಪಡಿಸಲಾಗಿತ್ತು’ ಎಂದರು.

‘ವಿದ್ಯಾರ್ಥಿಸ್ನೇಹಿಯಾಗಿದ್ದ, ಈ ಯೋಜನೆಯನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವುದಕ್ಕಿಂತ ಮೊದಲೇ ಅನುದಾನದ ಕೊರತೆಯಿಂದ ನಿಲ್ಲಿಸಿರುವುದು, ನಮ್ಮಂತಹ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಬಹಳಷ್ಟು ನಷ್ಟವಾಗಿದೆ’ ಎಂದು ವಸತಿನಿಲಯದ ವಿದ್ಯಾರ್ಥಿಯೊಬ್ಬರು ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗಾಗಿ ಹಿಂದುಳಿದ ವರ್ಗಗಳ ಆಯುಕ್ತ ಕೆ.ಎ. ದಯಾನಂದ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

ಮುಖ್ಯಾಂಶಗಳು

- ಗ್ರಾಮೀಣ ವಿದ್ಯಾರ್ಥಿಗಳ ಇಂಗ್ಲಿಷ್ ಕಲಿಕೆ ಆಸಕ್ತಿಗೆ ತಣ್ಣೀರು
- ₹5 ಕೋಟಿ ಅನುದಾನ ಮೀಸಲಿಡಲಾಗಿತ್ತು
- ಇಂಗ್ಲಿಷ್ ಬೋಧಕರಿಗೆ ₹30,000 ಸಂಬಳ ನಿಗದಿಯಾಗಿತ್ತು



ತರಬೇತಿ ನೀಡುವ ವಿಷಯಗಳು

ಆರ್ಥಿಕ ಸಾಕ್ಷರತೆ ಮತ್ತು ಹೂಡಿಕೆ ಅವಕಾಶಗಳು, ನಾಗರಿಕ ಹಕ್ಕುಗಳು ಮತ್ತು ಜವಾಬ್ದಾರಿಗಳು, ಬೇಸಿಕ್ ಕಂಪ್ಯೂಟರ್ ಜ್ಞಾನ, ಕಾನೂನು ಸಾಕ್ಷರತೆ, ಪ್ರಾಥಮಿಕ ಚಿಕಿತ್ಸೆ ಆಹಾರ ಮತ್ತು ಪೋಷಣೆ, ಭಾರತ ಸಂವಿಧಾನ ಮತ್ತು ನಾಗರಿಕತೆ, ಸಾಮಾಜಿಕ ಮಾಧ್ಯಮ ನಿರ್ವಹಣೆ ಮತ್ತು ಅಂತರ್ಜಾಲ ಬಳಕೆ, ಉದ್ಯೋಗಾವಕಾಶಗಳು ಸೇರಿದಂತೆ 10 ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿತ್ತು.

ವೀರಲೋಕ: ದ್ವಿತೀಯ ವಾರ್ಷಿಕೋತ್ಸವ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಬುಕ್ಸ್ ನಗರದಲ್ಲಿ ಆಯೋಜಿಸಿದ್ದ ದ್ವಿತೀಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಐದು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಸಾಹಿತಿ ಜಯಂತ ಕಾಯ್ಕಿಣಿ ಅವರು ವೀರಲೋಕದ ನೂರನೇ ಕೃತಿಯಾದ ‘ಕವಚ’ ಕಾದಂಬರಿ, ಎಂ. ವೆಂಕಟಸ್ವಾಮಿ ಅವರ ‘ಜಗತ್ತಿನ ಭೀಕರ ಯುದ್ಧಗಳು’, ನೌಶಾದ್ ಜನ್ನತ್ ಅವರ ‘ಬೇವಾಚ್’, ಸಂಧ್ಯಾರಾಣಿ ಅವರ ‘ನಾತಿಚರಾಮಿ’ ಹಾಗೂ ಶೈಲೇಶ್ ಕುಮಾರ್ ಅವರ ‘ಸುಪ್ತ ಸಾಗರದಾಚೆ’ ಕೃತಿಗಳನ್ನು ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಜಯಂತ ಕಾಯ್ಕಿಣಿ, ‘ದಾಲ್ ತಡ್ಕಾ ದರ ಜಾಸ್ತಿಯಾದರೆ ನಾವು ಯಾರನ್ನೂ ಕೇಳುವುದಿಲ್ಲ. ಆದರೆ, ಕನ್ನಡದ ಪುಸ್ತಕಗಳ ಮುಖಬೆಲೆ ಐದು ರೂಪಾಯಿ ಜಾಸ್ತಿಯಾದರೂ ಓದುಗ ಪುಸ್ತಕ ಖರೀದಿಸಲು ಹಿಂದೆ ಮುಂದೆ ನೋಡುತ್ತಾನೆ. ಇಂತಹ ಪರಿಸ್ಥಿತಿಯಲ್ಲಿ ವೀರಲೋಕವು ಅಜ್ಞಾತ ಓದುಗರನ್ನೂ ತಲುಪಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ವೀರಲೋಕದ ಐದು ಮರುಮುದ್ರಿತ ಕೃತಿಗಳನ್ನೂ ಬಿಡುಗಡೆ ಮಾಡಲಾಯಿತು.

ಸುದ್ದಿ 2 ನಿಮಿಷ

ಮಾವು ಕೀಳಲು ಹೋದಾಗ ವಿದ್ಯುತ್ ತಗುಲಿ ವಿದ್ಯಾರ್ಥಿ ಸಾವು

ಹೊಸಕೋಟೆ: ಇಲ್ಲಿಯ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ ಭಾನುವಾರ ವಿದ್ಯಾರ್ಥಿಯೊಬ್ಬ ಮಾವು ಕೀಳಲು ಹೋಗಿ ವಿದ್ಯುತ್ ತಗುಲಿ ಮೃತಪಟ್ಟಿದ್ದಾನೆ.

ಸೂಲಿಬೆಲೆ ಹೋಬಳಿಯ ತಿಮ್ಮಪ್ಪನಹಳ್ಳಿಯ ಸಾಯಿಭುವನ್(13) ಮೃತ ವಿದ್ಯಾರ್ಥಿ. ಈತ 9ನೇ ತರಗತಿಯಲ್ಲಿ ಕಲಿಯುತ್ತಿದ್ದ.

ವಿದ್ಯಾರ್ಥಿನಿಲಯ ಕಟ್ಟಡದ ಮೇಲೆ ಬಟ್ಟೆ ಒಣಗಿಸುವ ವೇಳೆ ಪಕ್ಕದಲ್ಲಿದ್ದ ಮಾವಿನ ಮರದಲ್ಲಿದ್ದ ಮಾವಿನ ಹಣ್ಣು ಕೀಳಲು ಹೋಗಿದ್ದ. ಮಾವಿನ ಹಣ್ಣು ಕೀಳಲು ಬಳಸಿದ ಕಂಬಿಗೆ ಮರದ ಸಮೀಪ ಹಾದುಹೋಗಿದ್ದ 11 ಕೆ.ವಿ. ವಿದ್ಯುತ್ ತಗುಲಿ ಕಟ್ಟಡದಿಂದ ಕೆಳಗೆ ಬಿದ್ದಿದ್ದಾನೆ. ತಕ್ಷಣ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ.

ಆಸ್ಪತ್ರೆ ಬಳಿ ಮೃತ ಸಾಯಿಭುವನ್ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಘಟನೆಯ ಕುರಿತು ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿಲಯದ ಸಮೀಪವೇ 11 ಕೆ.ವಿ. ವಿದ್ಯುತ್ ತಂತಿ ಹಾಯ್ದುಹೋಗಿದೆ. ವಿದ್ಯಾರ್ಥಿನಿಲಯದ ವಾರ್ಡನ್, ಸಮಾಜ ಕಲ್ಯಾಣ ಇಲಾಖೆ ಮತ್ತು ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮ ಕೈಗೊಳ್ಳದೆ ಇರುವುದು ಈ ಘಟನೆಗೆ ಕಾರಣ ಎಂದು ಪೋಷಕರು ಆರೋಪಿಸಿದ್ದಾರೆ.



ಕಾಡಾನೆ ಓಡಿಸುವ ಕಾರ್ಯಾಚರಣೆ ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ

ಕನಕಪುರ: ಕಾಡಾನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆ ನಡೆಸುತ್ತಿರುವ ಸ್ಥಳಕ್ಕೆ ಜಿಲ್ಲಾಧಿಕಾರಿ ಅವಿನಾಶ್ ಮೆನನ್ ರಾಜೇಂದ್ರನ್ ಶನಿವಾರ ಭೇಟಿ ನೀಡಿ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದರು.

ಕಬ್ಬಾಳು ಅರಣ್ಯ ಪ್ರದೇಶದ ಹಲಸಿನಮರದ ದೊಡ್ಡಿ ಗ್ರಾಮದಲ್ಲಿ ಏಳು ಸಾಕಿದ ಆನೆಗಳ ಸಹಾಯದಿಂದ ಕಾಡಾನೆಗಳನ್ನು ಮುತ್ತತ್ತಿ ವನ್ಯಜೀವಿ ಅರಣ್ಯ ಪ್ರದೇಶಕ್ಕೆ ಓಡಿಸುವ ಕಾರ್ಯಾಚರಣೆ ನಡೆಯುತ್ತಿದೆ.

ದುಬಾರೆ ಆನೆ ಶಿಬಿರದಿಂದ ಏಳು ಸಾಕಾನೆಗಳೊಂದಿಗೆ ನುರಿತ ಮಾವುತರ ತಂಡ ಈ ಕಾರ್ಯಾಚರಣೆಗೆ ಬಂದಿದೆ. ಕಳೆದ 10 ದಿನಗಳಿಂದ ಕಾಡಾನೆ ಓಡಿಸುವ ಕಾರ್ಯಾಚರಣೆ ನಡೆಯುತ್ತಿದ್ದು, ಕಾವೇರಿ ವನ್ಯಜೀವಿ ಧಾಮಕ್ಕೆ ಆನೆಗಳನ್ನು ಓಡಿಸುವಲ್ಲಿ ತಂಡ ಯಶಸ್ವಿಯಾಗುತ್ತಿದೆ.

ಡಿಎಫ್‌ಒ ರಾಮಕೃಷ್ಣಪ್ಪ, ಎಸಿಎಫ್ ಗಣೇಶ್, ವಲಯ ಅರಣ್ಯ ಅಧಿಕಾರಿಗಳಾದ ಆಶಾ,ಕಿರಣ್ ಕುಮಾರ್, ಅರಣ್ಯ ಇಲಾಖೆ ಸಿಬ್ಬಂದಿ, ಮಾವುತರು ಉಪಸ್ಥಿತರಿದ್ದರು.

ಚಿತ್ರರಂಗಕ್ಕೆ ಸೌಲಭ್ಯ ಒದಗಿಸಲು ಬದ್ಧ: ಸಚಿವ

ಬೆಂಗಳೂರು: ‘ಸರ್ಕಾರ ಯಾವಾಗಲೂ ಚಿತ್ರರಂಗದ ಜೊತೆಗಿದ್ದು, ಸೌಲಭ್ಯ ಒದಗಿಸಲು ಬದ್ಧ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಭಾನುವಾರ ಕೆಎಫ್‌ಸಿಸಿ ಆವರಣದಲ್ಲಿ ಚಿತ್ರರಂಗದವರಿಗೆ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಬದಲಾದ ಜೀವನಶೈಲಿ, ಆಹಾರ ಶೈಲಿಯಿಂ ಚಿಕ್ಕ ವಯಸ್ಸಿನಲ್ಲೆ ರಕ್ತದೊತ್ತಡ, ಮಧುಮೇಹ ಬರುತ್ತಿದೆ. ಮಾಲಿನ್ಯದಿಂದಾಗಿ ಗಂಭೀರ ಆರೋಗ್ಯ ಸಮಸ್ಯೆಗಳು ತಲೆದೋರುತ್ತಿವೆ. ಇದರ ಬಗ್ಗೆ ಜಾಗೃತಿ ಅಗತ್ಯ. ಹೀಗಾಗಿ, ಪ್ರತಿ ವರ್ಷ ಇಂತಹ ಆರೋಗ್ಯ ಶಿಬಿರ ಆಯೋಜಿಸುವುದು ಅತ್ಯಗತ್ಯ’ ಎಂದು ತಿಳಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು, ‘ಚಿತ್ರರಂಗದ ಯಾವುದೇ ಸಮಸ್ಯೆಗಳಿದ್ದರೂ ಬನ್ನಿ. ಸಿ.ಎಂ ಅವರ ಜೊತೆ ಮಾತನಾಡಿ ಪರಿಹಾರ ಒದಗಿಸುತ್ತೇವೆ. ಸರ್ಕಾರ ಸದಾ ಚಿತ್ರರಂಗದ ಪರವಾಗಿದೆ’ ಎಂದರು.

ಚಿತ್ರರಂಗದಲ್ಲಿ ಸೇವೆ ಸಲ್ಲಿಸುವ ಕುಟುಂಬಗಳ ಆರೋಗ್ಯ ರಕ್ಷಣೆಗಾಗಿ ವಾಣಿಜ್ಯ ಮಂಡಳಿ ಹಾಗೂ ಖಾಸಗಿ ಆಸ್ಪತ್ರೆಗಳ ಸಹಯೋಗದೊಂದಿಗೆ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು. ನಟಿಯರಾದ ಪೂಜಾಗಾಂಧಿ, ರಾಗಿಣಿ ದ್ವಿವೇದಿ, ನೇಹಾ ಸಕ್ಸೇನಾ ಅತಿಥಿಗಳಾಗಿದ್ದರು.

ಚಿತ್ರನಟ, ನಟಿಯರು, ತಂತ್ರಜ್ಞರ ಕುಟುಂಬದ ಸದಸ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ. ಸುರೇಶ್, ಉಪಾಧ್ಯಕ್ಷರಾದ ಪ್ರಮೀಳಾ ಜೋಷಾಯ್, ವೆಂಕಟೇಶ್, ಎಂ.ನರಸಿಂಹಲು, ಗೌರವ ಕಾರ್ಯದರ್ಶಿಗಳಾದ ಭಾ.ಮ.ಗಿರೀಶ್, ಕರಿಸುಬ್ಬು, ಆರ್. ಸುಂದರರಾಜ್, ಖಜಾಂಚಿ ಜಯಸಿಂಹ ಮುಸುರಿ ಭಾಗವಹಿಸಿದ್ದರು.

ಮಾಸ್ತಿ ಹಿರಿಮೆಯ ನೆನಕೆ

ಬೆಂಗಳೂರು: ‘ಉತ್ತಮ ಆಡಳಿತಗಾರ ಆಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು, ಸಾಹಿತ್ಯಕ್ಕೂ ಆಡಳಿತದ ಹಿರಿಮೆ ನೀಡಿದ್ದರು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಸಾಪ ಇತ್ತೀಚೆಗೆ ಹಮ್ಮಿಕೊಂಡ ಮಾಸ್ತಿ ವೆಂಕಟೇಶ ಅಯ್ಯಂಗಾರರ 133ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಮಾಸ್ತಿ ಅವರು ‘ಜೀವನ ಪತ್ರಿಕೆ’ ನಡೆಸಿದ್ದರು. ಬರಹಗಾರರಿಗೆ ಬೆಂಬಲವಾಗಿದ್ದರು. ಪುಸ್ತಕ ಪ್ರಕಾಶನಕ್ಕೂ ಸಹಾಯ ಮಾಡಿದ್ದರು. ಇದರಿಂದ ಕನ್ನಡ ಸಾಹಿತ್ಯ ಬಹುಮುಖಿಯಾಗಿ ಬೆಳೆಯಲು ಸಾಧ್ಯವಾಯಿತು’ ಎಂದು ಹೇಳಿದರು.

‘ಕಸಾಪ ವಿಕೇಂದ್ರೀಕರಣವು ಅವರು ನೀಡಿದ ಪ್ರಮುಖ ಕೊಡುಗೆ. ಆರ್ಥಿಕ ಸೌಕರ್ಯವು ಸದಸ್ಯರ ಸಂಖ್ಯೆ ಅವಲಂಬಿಸಿರಬೇಕು ಎನ್ನುವ ನಿಯಮ ಮಾಡಿದ್ದರಿಂದ ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಳವಾಯಿತು. ಅವರ ಕಾಲದಲ್ಲಿ ಸದಸ್ಯರ ಸಂಖ್ಯೆ 2,500ಕ್ಕೆ ಏರಿತು. ಮಹಿಳಾ ಶಾಖೆ ಆರಂಭವಾಯಿತು. ಅವರು ಎಷ್ಟೇ ದೂರ ಪ್ರಯಾಣಿಸಿದರೂ ಪರಿಷತ್ತಿನಿಂದ ಪ್ರಯಾಣ ಭತ್ಯೆ ಪಡೆಯುತ್ತಿರಲಿಲ್ಲ. ಪರಿಷತ್ತಿಗೆ ಶಿಸ್ತು ಮತ್ತು ಮೌಲ್ಯಗಳನ್ನು ನೀಡಿದರು’ ಎಂದು ಸ್ಮರಿಸಿಕೊಂಡರು.

ಬಿಬಿಎಂಪಿ (ಹಣಕಾಸು ವಿಭಾಗ) ವಿಶೇಷ ಆಯುಕ್ತ ಶಿವಾನಂದ ಎಚ್. ಕಲಕೇರಿ, ಕಸಾಪ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ: ನ್ಯಾ. ಶಿವರಾಜ್ ವಿ. ಪಾಟೀಲ, ಪ್ರಶಸ್ತಿ ಪುರಸ್ಕೃತರು: ನ್ಯಾ.ಎಚ್. ಎನ್. ನಾಗಮೋಹನ ದಾಸ್, ಅಧ್ಯಕ್ಷತೆ: ರಾಜಪ್ಪ ದಳವಾಯಿ, ಮುಖ್ಯ ಅತಿಥಿ: ಪಿ.ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಜಾನಪದ ಗಾಯನ: ಹುರುಗಲವಾಡಿ ರಾಮಯ್ಯ ಮತ್ತು ತಂಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30



ನ್ಯಾ.ನಾಗಮೋಹನ ದಾಸ್

‘ಡಾ.ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ’ ಪ್ರದಾನ: ಜಿ. ರಾಮಕೃಷ್ಣ, ಪ್ರಶಸ್ತಿ ಪುರಸ್ಕೃತರು: ಶಿವಸ್ವಾಮಿ ಎಂ., ಪ್ರಶಸ್ತಿ ಪುರಸ್ಕೃತರ ಬಗ್ಗೆ ಮಾತು: ಎಂ.ಪ್ರಕಾಶಮೂರ್ತಿ, ಅಧ್ಯಕ್ಷತೆ: ಎಚ್. ದಂಡಪ್ಪ, ಆಶಯ ನುಡಿ: ಎ.ಎಸ್. ನಾಗರಾಜ ಸ್ವಾಮಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ. ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5

ಗಂಗಮ್ಮ ದೇವಿಯ ಜಾತ್ರೆ ಮತ್ತು ಹಸಿ ಕರಗದ ಮಹೋತ್ಸವ: ಕ್ಷೀರ ಕುಂಭ ಮೆರವಣಿಗೆ, ಕ್ಷೀರಾಭಿಷೇಕ, ಆಯೋಜನೆ ಹಾಗೂ ಸ್ಥಳ: ಗಂಗಮ್ಮ ದೇವಿ ದೇಗುಲ, ಮಲ್ಲೇಶ್ವರ, ಸಂಜೆ 5ರಿಂದ

ಮಹಾಭಾರತ ಗ್ರಂಥದ ವ್ಯಾಖ್ಯಾನ: ಕರಣಂವಾದಿರಾ ಜಾಚಾರ್ಯ, ಮಹಾಭಾರತ ಗ್ರಂಥದ ಮೆರವಣಿಗೆ: ವಿದ್ಯಾಧೀಶಾಚಾರ್ಯ ಗುತ್ತಲ್, ಆಯೋಜನೆ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 5.30

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ತಂತ್ರಜ್ಞಾನ ಅಳವಡಿಕೆಗೆ ಜಲಮಂಡಳಿ ಚರ್ಚೆ

ಬೆಂಗಳೂರು: ಸುಸ್ಥಿರ ನೀರು ನಿರ್ವಹಣೆ, ನೀರಿನ ಸಂಸ್ಕರಣೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆ ಹಾಗೂ ಬಯೋ ಸಿಎನ್‌ಜಿ ಕುರಿತಾದ ಸಹಭಾಗಿತ್ವದ ಬಗ್ಗೆ ಅಂತರರಾಷ್ಟ್ರೀಯ ಸಂಸ್ಥೆಗಳ ಜೊತೆ ಜಲಮಂಡಳಿ ಚರ್ಚೆ ಪ್ರಾರಂಭಿಸಿದೆ.

ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್‌ಪ್ರಸಾತ್ ಮನೋಹರ್ ಅವರು ವಿಶ್ವಸಂಸ್ಥೆ ಹವಾಮಾನ ಬದಲಾವಣೆ ಘಟಕದ ಸದಸ್ಯರ ಜೊತೆ ವೆಬಿನಾರ್ ಮೂಲಕ ಇತ್ತೀಚೆಗೆ ಸಭೆ ನಡೆಸಿದರು.

ಸುಸ್ಥಿರ ನೀರು ನಿರ್ವಹಣೆ, ತಂತ್ರಜ್ಞಾನಗಳ ಅಳವಡಿಕೆ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕ್ರಮವಹಿಸಲು ಡಿಸಿಎಂ ಡಿ.ಕೆ ಶಿವಕುಮಾರ್ ನಿರ್ದೇಶನ ನೀಡಿದ್ದ ಹಿನ್ನೆಲೆಯಲ್ಲಿ ಸಭೆಯು ನಡೆಯಿತು.



ಸೈಕ್ಲೊಥಾನ್ ವಿಶ್ವ ಬೈಸಿಕಲ್ ದಿನದ ಅಂಗವಾಗಿ ಭಾನುವಾರ ದಿ ಕೌನ್ಸಿಲ್ ಫಾರ್ ಆಕ್ಟೀವ್ ಮೊಬಿಲಿಟಿ ಸಂಸ್ಥೆಯು ‘ಪರಿಸರ ಉಳಿಸಿ, ಸಾರ್ವಜನಿಕ ಸಾರಿಗೆ ಬಳಸಿ’ ಜಾಗೃತಿಗಾಗಿ ಆಯೋಜಿಸಿದ್ದ ‘ಸೈಕ್ಲೊಥಾನ್’ನಲ್ಲಿ ಭಾಗವಹಿಸಿದ್ದ ಸೈಕ್ಲಿಸ್ಟ್‌ಗಳು –ಪ್ರಜಾವಾಣಿ ಚಿತ್ರ

‘ವಾರ್ಷಿಕ ಬ್ಯಾರಿ ಪ್ರಶಸ್ತಿ’ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ

‘ಸ್ನೇಹಭಾವದ ಬ್ಯಾರಿ ಸಮುದಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಭಾವದಿಂದ ಎಲ್ಲ ಭಾಷೆ, ಧರ್ಮದವರನ್ನು ಜೊತೆಯಲ್ಲಿ ಕರೆದೊಯ್ಯುವ ಗುಣ ಬ್ಯಾರಿ ಸಮುದಾಯಕ್ಕೆ ಇದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

‘ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷನ್’ ಭಾನುವಾರ ಹಮ್ಮಿಕೊಂಡಿದ್ದ ‘ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ವಾರ್ಷಿಕ ಬ್ಯಾರಿ ಪ್ರಶಸ್ತಿ ಪ್ರದಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಸ್ಲಿಮರು ಇತ್ತೀಚೆಗೆ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಮುಂದಿನ 10 ವರ್ಷಗಳಲ್ಲಿ ಶೈಕ್ಷಣಿಕವಾಗಿ ಈ ಸಮುದಾಯದಲ್ಲಿ ಭಾರಿ ಬದಲಾವಣೆ ಕಾಣಲಿದೆ. ಶಿಕ್ಷಣವೇ ನಮ್ಮ ಆಸ್ತಿ. ಬ್ಯಾರಿ ಭಾಷಿಕರು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ವಿವರಿಸಿದರು.

ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಮಾತನಾಡಿ, ‘ವೇಷಭೂಷಣದಲ್ಲಿ ಮಾತ್ರ ಮುಸ್ಲಿಮರಾಗಿ ಉಳಿದರೆ ಸಮುದಾಯಕ್ಕೆ ದೊಡ್ಡ ನಷ್ಟ. ಕುರಾನ್ ಒಂದು ಸಮುದಾಯಕ್ಕೆ ಸೀಮಿತವಾದ ಗ್ರಂಥವಲ್ಲ. ಕುರಾನ್ ಅಧ್ಯಯನ ಮಾಡಿ, ಮನುಷ್ಯ ಗುಣವನ್ನು ಅರಿಯಬೇಕು. ಅದನ್ನು ಇತರ ಸಮಾಜಗಳಿಗೂ ತಲುಪಿಸಬೇಕು’ ಎಂದು ಹೇಳಿದರು.

ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಂ. ಫಾರೂಕ್ ಮಾತನಾಡಿ, ‘ಸುಮಾರು 30 ವರ್ಷಗಳ ಹಿಂದೆ ಬ್ಯಾರಿ ಸಮುದಾಯದ ಹಿರಿಯ ನೇತಾರರು ಬೆಂಗಳೂರಿನಲ್ಲಿ ಹುಟ್ಟಿಹಾಕಿದ ಚಳವಳಿಯು ಇಂದು ನಾವು ಬ್ಯಾರಿಗಳು ಎಂದು ಹೆಮ್ಮೆಯಿಂದ ಹೇಳುವಂತಹ ವಾತಾವರಣವನ್ನು ಸೃಷ್ಟಿಸಿದೆ. ಒಂದು ಕಾಲದಲ್ಲಿ ಬ್ಯಾರಿ ಸಮುದಾಯ ಶಿಕ್ಷಣ, ರಾಜಕೀಯ, ಸಾಮಾಜಿಕ ರಂಗದಲ್ಲಿ ತೀರಾ ಹಿಂದುಳಿತ್ತು. ಇಂದು ಈ ಎಲ್ಲ ವಲಯಗಳಲ್ಲಿ ಮುನ್ನಡೆಯುತ್ತಿದೆ’ ಎಂದು ಶ್ಲಾಘಿಸಿದರು.

ಸಾಮಾಜಿಕ ಕಾರ್ಯಕರ್ತ ಬಡಿಲ ಹುಸೈನ್ ಅವರಿಗೆ ‘ವರ್ಷದ ಬ್ಯಾರಿ’ ಹಾಗೂ ಹೈನೋದ್ಯಮಿಗಳಾಗಿರುವ ತಾಯಿ–ಮಗಳು ಹರೇಕಳದ ಮೈಮುನಾ-ಮರ್ಜೀನಾ ಅವರಿಗೆ ‘ವರ್ಷದ ಬ್ಯಾರ್ದಿ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಗಳು ತಲಾ ₹50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ಇದೇ ವೇಳೆ ಬ್ಯಾರಿ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷನ್‌ನ ಸೈಯದ್ ಮಹಮ್ಮದ್ ಬ್ಯಾರಿ, ಮುಹಮ್ಮದ್ ಶರೀಫ್ ಟಿ.ಕೆ., ಬ್ಯಾರಿ ಸೌಹಾರ್ದ ಭವನದ ಮುಖ್ಯ ಆಡಳಿತಾಧಿಕಾರಿ ಅತ್ತೂರು ಚಾಯಬ್ಬ, ಪತ್ರಕರ್ತ ಬಿ.ಎಂ.ಹನೀಫ್ ಉಪಸ್ಥಿತರಿದ್ದರು.



‘ದಿ ಬ್ಯಾರಿ ವೆಲ್‌ಫೇರ್ ಅಸೋಸಿಯೇಷನ್’ ವತಿಯಿಂದ ಹೈನೋದ್ಯಮಿಗಳಾದ ಮಗಳು–ತಾಯಿ ಮರ್ಜೀನಾ–ಮೈಮುನಾ ಹರೇಕಳ ಅವರಿಗೆ ‘ವರ್ಷದ ಬ್ಯಾರ್ದಿ’ ಹಾಗೂ ಸಾಮಾಜಿಕ ಕಾರ್ಯಕರ್ತ ಬಡಿಲ ಹುಸೈನ್ ಅವರಿಗೆ ‘ವರ್ಷದ ಬ್ಯಾರಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಸೋಸಿಯೇಷನ್ ಟ್ರಸ್ಟಿ ತಸ್ಲೀಲ್, ಅಧ್ಯಕ್ಷ ಬಿ.ಎಂ.ಫಾರೂಕ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್. ಶಿಕ್ಷಣ ಸಚಿವ ಮಧು ಬಂಗಾರಪ್ಪ, ಬಿಲ್ಡಿಂಗ್ ಕಮಿಟಿ ಅಧ್ಯಕ್ಷ ಸಯ್ಯದ್ ಬ್ಯಾರಿ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಲೋಕಸಭಾ ಚುನಾವಣೆಯಲ್ಲಿ ಎಡವಿದ್ದೆಲ್ಲಿ ಎಂಬುದನ್ನು ತಿಳಿಯಲು ಯತ್ನ

‘ಬೂತ್ ಮಟ್ಟದಲ್ಲಿ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ಗಳನ್ನು ನಿರೀಕ್ಷಿಸಿದ್ದ ಕೆಲ ರಾಜ್ಯಗಳಲ್ಲಿ ಎಲ್ಲಿ ತಪ್ಪಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಲು, ಕಾಂಗ್ರೆಸ್ ಬೂತ್ ಮಟ್ಟದಲ್ಲಿ ಫಲಿತಾಂಶಗಳನ್ನು ಪರಿಶೀಲಿಸಲು ಮುಂದಾಗಿದೆ. ಈ ಮೂಲಕ ಅದು ಹೊಣೆಗಾರಿಕೆ ನಿಗದಿಪಡಿಸುವ ಮತ್ತು ಲೋಪಗಳನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರತವಾಗಿದೆ.

ಈ ಸಂಬಂಧ ಪಕ್ಷದ ಕೇಂದ್ರ ‘ವಾರ್ ರೂಮ್’, ದೇಶದಾದ್ಯಂತ ಬೂತ್ ಮಟ್ಟದ ಮತದಾನದ ವಿವರಗಳನ್ನು ಸಂಗ್ರಹಿಸುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

ಆಡಳಿತದಲ್ಲಿರುವ ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ನಿರೀಕ್ಷೆ ಪಕ್ಷಕ್ಕಿತ್ತು. ಆದರೆ ಎಲ್ಲಿ, ಯಾವ ತಪ್ಪು ಆಗಿದೆ ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿದೆ. ಹಾಗೆಯೇ ದೆಹಲಿ, ಮಧ್ಯಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಒಂದೊಂದು ಕ್ಷೇತ್ರವನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಇವುಗಳನ್ನೆಲ್ಲ ಪರಿಶೀಲಿಸಲಾಗುವುದು ಎಂದು ಅವರು ಹೇಳಿದ್ದಾರೆ.

ತನ್ನ ಶಕ್ತಿಗೆ ತಕ್ಕಂತೆ ವಿವಿಧ ರಾಜ್ಯಗಳಲ್ಲಿ ಏಕೆ ಗೆಲುವು ಪಡೆಯಲು ಸಾಧ್ಯವಾಗಲಿಲ್ಲ ಎಂಬುದನ್ನು ತಿಳಿದು ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಶೀಘ್ರವೇ ಸಭೆ ನಡೆಸಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದ್ದಾರೆ. ಈ ರಾಜ್ಯಗಳಲ್ಲಿನ ಸಮಸ್ಯೆ ಪರಿಶೀಲಿಸಲು ಖರ್ಗೆ ಅವರು ಶೀಘ್ರದಲ್ಲಿಯೇ ಸಮಿತಿ ರಚಿಸಲಿದ್ದಾರೆ.

ಅಭ್ಯರ್ಥಿ ಆಯ್ಕೆಯಲ್ಲಿ ಲೋಪ: ಮೊಯ್ಲಿ

ಅಭ್ಯರ್ಥಿಗಳ ತಪ್ಪು ಆಯ್ಕೆ ಮತ್ತು ಕಳಪೆ ತಂತ್ರಗಾರಿಕೆಯಿಂದಾಗಿ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಕಳಪೆ ಪ್ರದರ್ಶನ ನೀಡಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ ಭಾನುವಾರ ಹೇಳಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಕರ್ನಾಟಕದಲ್ಲಿ ಕಾಂಗ್ರೆಸ್ 28 ಸ್ಥಾನಗಳ ಪೈಕಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಬೇಕಿತ್ತು. ನಾವು ಉತ್ತಮ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿದ್ದರೆ ಜಯಭೇರಿ ಬಾರಿಸುತ್ತಿದ್ದೆವು. ನಾವು ನಿಷ್ಠಾವಂತ ಕಾರ್ಯಕರ್ತರನ್ನು ಪರಿಗಣಿಸಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಸ್ಥಳೀಯ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುವತ್ತ ಗಮನ ಹರಿಸಬೇಕು ಮತ್ತು ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಐದು ಗ್ಯಾರಂಟಿಗಳು ಪಕ್ಷದ ಪ್ರಣಾಳಿಕೆಯಲ್ಲಿ ಘೋಷಣೆಯಾದವು. ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆಯಾದ ಕಾರಣಕ್ಕೆ ಅದನ್ನು ನಿಲ್ಲಿಸಬಾರದು. ಅದನ್ನು ನಿಲ್ಲಿಸಿ ಮತದಾರರಿಗೆ ದ್ರೋಹ ಬಗೆಯಬಾರದು ಎಂದು ಅವರು ಕಿವಿಮಾತು ಹೇಳಿದರು.

ಅಪಘಾತ: ಮಕ್ಕಳು ಸೇರಿ 15 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಮಾಲೂರು: ಸೀತನಾಯಕನಹಳ್ಳಿ ಗ್ರಾಮದ ಬಳಿ ಭಾನುವಾರ ಟೆಂಪೊ ಟ್ರಾವೆಲರ್ (ಟಿ.ಟಿ) ಮತ್ತು ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಒಟ್ಟು 15 ಮಂದಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ನಾಗವಾರದ ಮಂಜುನಾಥ್ ತಮ್ಮ ಸಂಬಂಧಿಕರೊಂದಿಗೆ ತಾಲ್ಲೂಕಿನ ಮಿಣಸಂದ್ರ ಗ್ರಾಮಕ್ಕೆ ಸೀಮಂತ ಕಾರ್ಯಕ್ರಮಕ್ಕೆ ಟಿ.ಟಿಯಲ್ಲಿ ಬಂದಿದ್ದರು.

ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ಬೆಂಗಳೂರಿಗೆ ಹಿಂದಿರುಗುವಾಗ ಸೀತನಾಯಕನಹಳ್ಳಿ ಗೇಟ್ ಬಳಿ ಎದುರಿನಿಂದ ಬಂದ ಕಾರು ಡಿಕ್ಕಿ ಹೊಡೆದಿದೆ.

ಟಿ.ಟಿಯಲ್ಲಿದ್ದ ಮಮತಾ, ಗೌರಮ್ಮ, ರಾಧಮ್ಮ, ಯಶೋದಮ್ಮ, ಚಾಲಕ ಮಹಮ್ಮದ್ ಆಸಿಫ್ ಹಾಗೂ ಸಿಂಧೂ ಹಾಗೂ ಚಂದನ್ ಎಂಬ ಮಕ್ಕಳಿಗೆ ಗಾಯಗಳಾಗಿವೆ. ಕಾರಿನಲ್ಲಿದ್ದ ಮಿಣಸಂದ್ರ ಗ್ರಾಮದ ಲಕ್ಷ್ಮಮ್ಮ ಹಾಗೂ ವೆಂಕಟೇಶ್ ದಂಪತಿಗೆ ಗಾಯಗಳಾಗಿವೆ. ಉಳಿದವರ ಕೈ, ಕಾಲಿಗೆ ಗಾಯಗಳಾಗಿವೆ.

ಮಾಲೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹೊಸಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ದಬ್ಬಗೂಳೇಶ್ವರ ಜಾತ್ರಾ ಮಹೋತ್ಸವ

ಕನಕಪುರ: ತಾಲ್ಲೂಕಿನ ವೀರಯ್ಯನ ದೊಡ್ಡಿ ದಬ್ಬಗೂಳೇಶ್ವರಸ್ವಾಮಿ ಅಗ್ನಿ ಕೊಂಡೋತ್ಸವ ಸಮಾರಂಭ ಜೂನ್ 10 ಮತ್ತು 11ರಂದು ನಡೆಯಲಿದೆ.

ಸೋಮವಾರ ಸಂಜೆ 5ಕ್ಕೆ ಎಳವಾರ ಕಾರ್ಯಕ್ರಮ ನಡೆಯಲಿದೆ. ಮಂಗಳವಾರ ಬೆಳಿಗ್ಗೆ7ಕ್ಕೆ ಅಗ್ನಿಕೊಂಡೋತ್ಸವ ನಡೆಯಲಿದೆ. ನಂತರ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ 8ಕ್ಕೆ ದೇವರ ಮೆರವಣಿಗೆ ನಡೆಯಲಿದೆ.

ಮದ್ಯ ಅಕ್ರಮ ಮಾರಾಟ, ಡ್ರಗ್ಸ್ ಪೂರೈಕೆ ಆರೋಪ • ಮಾಲೀಕರು, ವ್ಯವಸ್ಥಾಪಕರಿಗೆ ಎಚ್ಚರಿಕೆ

ಬಾರ್, ಮದ್ಯದಂಗಡಿ ಮೇಲೆ ಎನ್‌ಸಿಬಿ ಕಣ್ಣು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ರಾಜ್ಯದ ಹಲವು ಬಾರ್ ಹಾಗೂ ಮದ್ಯದಂಗಡಿಗಳಲ್ಲಿ ಮಾದಕ ವಸ್ತುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಕೃತ್ಯದಲ್ಲಿ ಭಾಗಿಯಾಗುತ್ತಿರುವವರನ್ನು ಪತ್ತೆ ಮಾಡಲು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿದ್ದಾರೆ.

ಬೆಂಗಳೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಬೆಳಗಾವಿ ಹಾಗೂ ಇತರೆ ನಗರಗಳಲ್ಲಿರುವ ಕೆಲವು ಬಾರ್- ಮದ್ಯದಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಲಾಗುತ್ತಿದೆ. ಜೊತೆಗೆ, ವಿವಿಧ ಬಗೆಯ ಡ್ರಗ್ಸ್ ಮಾರಾಟ ಮಾಡುತ್ತಿರುವ ಮಾಹಿತಿಯನ್ನು ಎನ್‌ಸಿಬಿ ಕಲೆಹಾಕಿದೆ.

'21 ವರ್ಷದ ಒಳಗಿನವರಿಗೆ ಮದ್ಯಪಾನ ನಿಷೇಧಿಸಲಾಗಿದೆ. ಆದರೆ, ಬಹುತೇಕ ಬಾರ್ ಹಾಗೂ ಮದ್ಯದಂಗಡಿಗಳಲ್ಲಿ 21 ವರ್ಷ ವಯಸ್ಸಿನೊಳಗಿನ ಬಾಲಕರು, ಯುವಕ-ಯುವತಿಯರಿಗೆ ಅಕ್ರಮವಾಗಿ ಮದ್ಯ ಮಾರುತ್ತಿರುವ ಬಗ್ಗೆ ಹೆಚ್ಚಿನ ದೂರುಗಳು ಬಂದಿದೆ. ಇದರ ಜೊತೆಯಲ್ಲಿ, ಡ್ರಗ್ಸ್ ಸಹ ಪೂರೈಕೆ ಮಾಡುತ್ತಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಎನ್‌ಸಿಬಿ ಮೂಲಗಳು ಹೇಳಿವೆ.



ಬೆಂಗಳೂರು ರಾಜಾಜಿನಗರ ಬಳಿಯ ಬಾರ್‌ವೊಂದರ ಪ್ರವೇಶ ದ್ವಾರದಲ್ಲಿ ಎನ್‌ಸಿಬಿ ಅಧಿಕಾರಿಗಳು ಭಿತ್ತಿಪತ್ರ ಅಂಟಿಸಿರುವುದು

'ರಾಜ್ಯ ಸರ್ಕಾರದ ಅಬಕಾರಿ ಇಲಾಖೆಯಿಂದ ಅನುಮತಿ ಪಡೆದು ಬಾರ್ ಹಾಗೂ ಮದ್ಯದಂಗಡಿ ತೆರೆಯಲಾಗಿದೆ. ಆದರೆ, ಹಲವರು ನಿಯಮ ಪಾಲಿಸುತ್ತಿಲ್ಲ. ಇದರಿಂದಾಗಿ ಯುವಜನರು ದಿಕ್ಕು ತಪ್ಪುತ್ತಿದ್ದಾರೆ. ಹಲವರು, ಮದ್ಯವ್ಯಸನಿ ಹಾಗೂ ಡ್ರಗ್ಸ್ ವ್ಯಸನಿಗಳಾಗುತ್ತಿದ್ದಾರೆ. ಇಂಥ, ಮದ್ಯ ಅಕ್ರಮ ಮಾರಾಟ ಹಾಗೂ ಡ್ರಗ್ಸ್ ಮಾರಾಟ ಪತ್ತೆಗೆ ರಾಜ್ಯದಾದ್ಯಂತ ಕಾರ್ಯಾಚರಣೆ ಆರಂಭಿಸಲಾಗಿದೆ. ಸ್ಥಳೀಯ ಪೊಲೀಸರ ನೆರವು ಪಡೆಯಲಾಗುತ್ತಿದೆ' ಎಂದು ತಿಳಿಸಿವೆ.

ಮಾಲೀಕರು, ವ್ಯವಸ್ಥಾಪಕರಿಗೆ ಎಚ್ಚರಿಕೆ: ರಾಜ್ಯದ ಹಲವು ಬಾರ್ ಹಾಗೂ ಮದ್ಯದಂಗಡಿಗಳಿಗೆ ಎನ್‌ಸಿಬಿಯ ವಿಶೇಷ ತಂಡಗಳು ಭೇಟಿ ನೀಡುತ್ತಿವೆ. ನಿಯಮಗಳ ಬಗ್ಗೆ ಮಾಲೀಕರು, ವ್ಯವಸ್ಥಾಪಕರು ಹಾಗೂ ಸಿಬ್ಬಂದಿಗೆ ತಿಳಿಸುತ್ತಿವೆ. ನಿಯಮ ಮೀರಿದರೆ, ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ನೀಡುತ್ತಿವೆ.

'ಮದ್ಯ ಅಕ್ರಮವಾಗಿ ಮಾರುತ್ತಿರುವ ಹಾಗೂ ಡ್ರಗ್ಸ್ ಪೂರೈಸುತ್ತಿರುವ ಬಗ್ಗೆ ಸಾರ್ವಜನಿಕರು ನೀಡಿರುವ ಮಾಹಿತಿ ಆಧಾರದಲ್ಲಿ ಕೆಲ ಬಾರ್ ಹಾಗೂ ಮದ್ಯದಂಗಡಿಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಆದರೆ, ಕೃತ್ಯಕ್ಕೆ ಸಂಬಂಧಪಟ್ಟಂತೆ ಸದ್ಯಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

'ಡ್ರಗ್ಸ್ ತೆಗೆದುಕೊಳ್ಳುವುದು, ಮಾರುವುದು ಹಾಗೂ ಸಾಗಿಸುವುದು ಕಾನೂನು ಬಾಹಿರ. ಇಂಥ ಕೃತ್ಯದಲ್ಲಿ ತೊಡಗಿದವರಿಗೆ ಕಠಿಣ ಶಿಕ್ಷೆ ಹಾಗೂ ಹೆಚ್ಚಿನ ದಂಡ ವಿಧಿಸಲು ಅವಕಾಶವಿದೆ' ಎಂಬ ಬರಹವುಳ್ಳ ಪೋಸ್ಟರ್‌ಗಳನ್ನು ಬಾರ್ ಹಾಗೂ ಮದ್ಯದಂಗಡಿ ಎದುರು ಅಂಟಿಸಲಾಗಿದೆ. '21 ವರ್ಷ ವಯಸ್ಸಿನೊಳಗಿನವರಿಗೆ ಮದ್ಯಪಾನ ನಿಷೇಧಿಸಲಾಗಿದೆ' ಎಂಬ ಬರಹವುಳ್ಳ ಭಿತ್ತಿಪತ್ರಗಳನ್ನೂ ಹಚ್ಚಲಾಗಿದೆ' ಎಂದು ಮೂಲಗಳು ತಿಳಿಸಿವೆ.

24 ಗಂಟೆಯೂ ನಿಗಾ: 'ಬಾರ್ ಹಾಗೂ ಮದ್ಯದಂಗಡಿಯಲ್ಲಿ ಡ್ರಗ್ಸ್ ಮಾರುತ್ತಿರುವ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಲು ದಿನದ 24 ಗಂಟೆಯೂ ನಿಗಾ ವಹಿಸಲಾಗಿದೆ. ಸೂಕ್ತ ಪುರಾವೆಗಳು ದೊರೆಯುತ್ತಿದ್ದಂತೆ, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಏನಿದು ಎನ್‌ಸಿಬಿ ?

ದೇಶದಲ್ಲಿ ಡ್ರಗ್ಸ್ ಮಾರಾಟ ಹಾಗೂ ಸಾಗಣೆಯನ್ನು ತಡೆಗಟ್ಟಲು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ಸ್ಥಾಪಿಸಲಾಗಿದೆ. ಐಪಿಎಸ್ ಹಿರಿಯ ಅಧಿಕಾರಿ ನೇತೃತ್ವದಲ್ಲಿ ಎನ್‌ಸಿಬಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ದೇಶದ ಎಲ್ಲ ರಾಜ್ಯಗಳಲ್ಲಿ ಎನ್‌ಸಿಬಿ ಕಚೇರಿಗಳಿದ್ದು, ಆಯಾ ಕಚೇರಿ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗಳು ನಡೆಯುತ್ತಿವೆ.

'₹1,235 ಕೋಟಿ ಮೌಲ್ಯದ ಡ್ರಗ್ಸ್ ನಾಶ'

ದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸಿದ್ದ ಎನ್‌ಸಿಬಿ ಅಧಿಕಾರಿಗಳು, ಆರೋಪಿಗಳಿಂದ ಜಪ್ತಿ ಮಾಡಿದ್ದ ₹1,235 ಕೋಟಿ ಮೌಲ್ಯದ 9,300 ಕೆ.ಜಿ ಮಾದಕ ವಸ್ತುವನ್ನು (ಡ್ರಗ್ಸ್) ಇತ್ತೀಚೆಗಷ್ಟೇ ನಾಶಪಡಿಸಿದ್ದಾರೆ.

'ಹಲವು ರಾಜ್ಯಗಳಲ್ಲಿ ಸ್ಥಳೀಯ ಪೊಲೀಸರ ಜೊತೆಯಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿಗಳಿಂದ ₹1,235 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ನ್ಯಾಯಾಲಯದ ಅನುಮತಿ ಪಡೆದು ಎಲ್ಲ ಡ್ರಗ್ಸ್ ನಾಶಪಡಿಸಲಾಗಿದೆ' ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

ಡ್ರಗ್ಸ್ ಬಗ್ಗೆ ಮಾಹಿತಿ ನೀಡಿ

ಇ-ಮೇಲ್: blzu_ncb@nic.in ಹಾಗೂ ddge_ncb@nic.in

ಸುದ್ದಿ 2 ನಿಮಿಷ

ಕಂಗನಾ ಪ್ರಕರಣ: ಮಹಿಳಾ ಕಾನ್‌ಸ್ಟೆಬಲ್ ಬೆಂಬಲಿಸಿ ರ‍್ಯಾಲಿ

ಚಂಡೀಗಢ (ಪಿಟಿಐ): ಸಂಸದರಾಗಿ ಚುನಾಯಿತರಾಗಿರುವ ಕಂಗನಾ ರನೌತ್ ಅವರಿಗೆ ಬಾರಿಸಿದ ಸಿಐಎಸ್‌ಎಫ್ ಮಹಿಳಾ ಕಾನ್‌ಸ್ಟೆಬಲ್ ಪರವಾಗಿ ರೈತ ಸಂಘಟನೆಗಳು ಮೊಹಾಲಿಯಲ್ಲಿ ರ‍್ಯಾಲಿ ನಡೆಸಿದವು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಗಳೂ ಈ ರ‍್ಯಾಲಿಯಲ್ಲಿ ಭಾಗಿಯಾಗಿದ್ದವು. ರ‍್ಯಾಲಿಯ ಕಾರಣಕ್ಕೆ ಭದ್ರತಾ ಸಿಬ್ಬಂದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲಾಗಿತ್ತು.



ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ಆಗಬೇಕು ಎಂದು ರೈತ ನಾಯಕ ಸರವಣ ಸಿಂಗ್ ಪಂಡೇರ್ ಒತ್ತಾಯಿಸಿದರು. ಯಾವ ಕಾರಣಕ್ಕಾಗಿ ಹೀಗೆ ಆಯಿತು ಎಂಬುದನ್ನು ಪತ್ತೆ ಮಾಡಬೇಕು, ಮಹಿಳಾ ಕಾನ್‌ಸ್ಟೆಬಲ್ ಕುಲ್ವಿಂದರ್ ಕೌರ್ ಅವರಿಗೆ ಅನ್ಯಾಯ ಆಗಬಾರದು ಎಂದರು.

ಕಂಗನಾ ಅವರು ಪಂಜಾಬ್ ಜನರನ್ನು ಉದ್ದೇಶಿಸಿ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದ ರೈತ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಐಟಿ ರಚನೆ: ಕಂಗನಾ ಅವರಿಗೆ ಸಿಐಎಸ್‌ಎಫ್ ಕಾನ್‌ಸ್ಟೆಬಲ್ ಹಲ್ಲೆ ಮಾಡಿದ ಪ್ರಕರಣದ ತನಿಖೆಗೆ ಮೂವರು ಸದಸ್ಯರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲಾಗಿದೆ. ಮೊಹಾಲಿ ಎಸ್‌ಪಿ ಹರ್ಬೀರ್ ಸಿಂಗ್ ಅತ್ವಾಲ್ ಅವರು ಈ ತಂಡದ ನೇತೃತ್ವ ವಹಿಸಿದ್ದಾರೆ. ಎಸ್‌ಐಟಿಯಲ್ಲಿ ಮಹಿಳಾ ಸದಸ್ಯರೊಬ್ಬರು ಇರಲಿದ್ದಾರೆ.

ಬಿಷ್ಣುಪುರ ಹತ್ಯೆ ಪ್ರಕರಣ ಆರೋಪಿ ಬಂಧನ

ಗುವಾಹತಿ: ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ನಾಲ್ಕು ಮಂದಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕುಕಿ ಬಂಡುಕೋರಗುಂಪಿಗೆ ಸೇರಿದ್ದಾನೆ ಎನ್ನಲಾದ ವ್ಯಕ್ತಿಯೊಬ್ಬನನ್ನು ಬಂಧಿಸಿದೆ.

ಕಳೆದ ವರ್ಷದ ಜನವರಿಯಲ್ಲಿ ಈ ಹತ್ಯೆ ನಡೆದಿತ್ತು. ಬಿಷ್ಣುಪುರ ಜಿಲ್ಲೆಯಲ್ಲಿ ಮೈತೇಯಿ ಸಮುದಾಯದವರು ಪ್ರಾಬಲ್ಯ ಹೊಂದಿದ್ದಾರೆ.

ಆರೋಪಿಯ ಹೆಸರು ಲುನ್‌ಮಿನ್‌ಸೆ ಕಿಪ್‌ಜೆನ್ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ. ಇವನನ್ನು ಗುವಾಹತಿಯ ಕೇಂದ್ರ ಕಾರಾಗೃಹದಲ್ಲಿ ಶನಿವಾರ ಬಂಧಿಸಲಾಗಿದೆ. ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಈತ ಜೈಲುಪಾಲಾಗಿದ್ದ.

2023ರ ಜನವರಿ 18ರಂದು ನಡೆದ ಹತ್ಯೆಗೆ ಸಂಬಂಧಿಸಿದಂತೆ ಆಗಿರುವ ಮೊದಲ ಬಂಧನ ಇದು ಎಂದು ಎನ್‌ಐಎ ಹೇಳಿದೆ. ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದ ಭಾಗವಾಗಿ ಈ ಹತ್ಯೆ ನಡೆದಿದೆ ಎಂದು ಎನ್‌ಐಎ ಹೇಳಿದೆ.

ಬೈಕ್ ಡಿಕ್ಕಿ: ವೃದ್ಧೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಾಯುವಿಹಾರಕ್ಕೆ ತೆರಳುತ್ತಿದ್ದ ವೃದ್ಧೆಯೊಬ್ಬರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಹೇರೋಹಳ್ಳಿ ನಿವಾಸಿ ಶಿವಮ್ಮ (66) ಮೃತಪಟ್ಟವರು.

'ಶನಿವಾರ ಬೆಳಿಗ್ಗೆ 8.45ಕ್ಕೆ ವಾಯುವಿಹಾರ ಮುಗಿಸಿ ಹೇರೋಹಳ್ಳಿ ಕೆರೆ ಬಳಿ ನಡೆದುಕೊಂಡು ಮನೆಗೆ ಹೋಗುತ್ತಿದ್ದರು. ಅದೇ ವೇಳೆ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಬಂದ ಬೈಕ್ ಸವಾರ, ನಿಯಂತ್ರಣ ತಪ್ಪಿ ಶಿವಮ್ಮ ಅವರಿಗೆ ಡಿಕ್ಕಿ ಹೊಡೆದ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಈ ಬಗ್ಗೆ ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಬೈಕ್ ಸವಾರ ಸುನಿಲ್ ಎಂಬಾತನನ್ನು ಬಂಧಿಸಿ, ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ' ಎಂದು ಹೇಳಿದರು.

ಕಿಟಕಿಗೆ ಅಳವಡಿಸಿದ್ದ ಕಬ್ಬಿಣದ ಗ್ರಿಲ್ ಕತ್ತರಿಸಿ ಕಳ್ಳತನ, ಇಬ್ಬರು ಆರೋಪಿಗಳ ಬಂಧನ

₹15 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಟಕಿಗೆ ಅಳವಡಿಸಿದ್ದ ಕಬ್ಬಿಣದ ಗ್ರಿಲ್ ಕತ್ತರಿಸಿ ಮನೆಗೆ ನುಗ್ಗಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಕಳತನ ಮಾಡುತ್ತಿದ್ದ, ಇಬ್ಬರು ಅಂತರ್ ರಾಜ್ಯ ಕಳ್ಳರನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹15 ಲಕ್ಷ ಮೌಲ್ಯದ 208 ಗ್ರಾಂ ಚಿನ್ನಾಭರಣ, ಒಂದು ಕೆ.ಜಿ. ಬೆಳ್ಳಿಯ ವಸ್ತುಗಳು ಸೇರಿದಂತೆ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಜ್ಞಾನಭಾರತಿಯ ಮಾರುತಿನಗರದ ನಿವಾಸಿ ಹಮೀದ್ ಖಾನ್ ಅಲಿಯಾಸ್ ಚೋರ್ ಹಮೀದ್ (57) ಮತ್ತು ಕಗ್ಗಲಿಪುರ ಮುಖ್ಯರಸ್ತೆಯ ಗುಡಿಮಾವು ನಿವಾಸಿ ಖಲೀಲ್-ಉಲ್ಲಾ-ಶರೀಫ್ ಅಲಿಯಾಸ್ ಚೋಟು (34) ಬಂಧಿತ ಆರೋಪಿಗಳು.

'ಕಳೆದ ತಿಂಗಳು ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬನಶಂಕರಿ 6ನೇ ಹಂತದ 2ನೇ ಬ್ಲಾಕ್‌ನಲ್ಲಿರುವ ಮನೆಯೊಂದರಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರು. ಈ ಬಗ್ಗೆ ದೂರು ದಾಖಲಾಗಿತ್ತು. ಮನೆಯ ಸುತ್ತಮುತ್ತಲಿನ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿ ಕೃತ್ಯ
- ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯ ಪರಿಶೀಲನೆಯಿಂದ ಆರೋಪಿಗಳ ಪತ್ತೆ
- ಜೈಲಿಗೂ ಹೋಗಿ ಬಂದಿದ್ದ ಆರೋಪಿಗಳು

ಅಪರಾಧ ಸುದ್ದಿ

'ನಗರದಲ್ಲಿನ ಬೀಗ ಹಾಕಿದ ಮನೆಗಳನ್ನು ಗುರಿಯಾಗಿಸಿಕೊಂಡು ರಾತ್ರಿ ವೇಳೆಯಲ್ಲಿ ಆರೋಪಿಗಳು ಕಳ್ಳತನ ಮಾಡುತ್ತಿದ್ದರು. ವೃತ್ತಿಪರ ಕಳ್ಳರಾಗಿರುವ ಇವರ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಜೈಲಿಗೂ ಹೋಗಿ ಬಂದಿದ್ದಾರೆ. ಕದ್ದ ಮಾಲನ್ನು ಪರಿಚಿತರ ಮೂಲಕ ಮಾರಿಕೊಂಡು, ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ಹೇಳಿದರು.

'ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿಯೂ ಮನೆಗಳ್ಳತನ ಮಾಡಿದ್ದ ಆರೋಪದ ಮೇಲೆ ಇವರನ್ನು ಬಂಧಿಸಲಾಗಿತ್ತು. ಜಾಮೀನು ಪಡೆದು ಹೊರಗೆ ಬಂದ ಬಳಿಕವೂ ಕಳ್ಳತನವನ್ನು ಮುಂದುವರೆಸಿದ್ದರು. ಆರೋಪಿಗಳ ಬಂಧನದ ನಂತರ ತಲಘಟ್ಟಪುರ ಮತ್ತು ಕುಂಬಳಗೋಡು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ತಲಾ ಒಂದು ಮನೆಗಳ್ಳತನ ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ಮಾಹಿತಿ ನೀಡಿದರು.



ಹಮೀದ್ ಖಾನ್



ಖಲೀಲ್–ಉಲ್ಲಾ–ಶರೀಫ್



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಚಿನ್ನ, ಬೆಳ್ಳಿಯ ಆಭರಣಗಳ ಹಾಗೂ ಬೈಕ್

ದರೋಡೆ: ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದರೋಡೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪುಲಕೇಶಿನಗರ ಠಾಣೆಯ ಪೊಲೀಸರು ಬಂಧಿಸಿದ್ದು, ಆರೋಪಿಗಳಿಂದ ₹60 ಸಾವಿರ ಮೌಲ್ಯದ ಒಂದು ದ್ವಿಚಕ್ರ ವಾಹನ ಹಾಗೂ ದರೋಡೆ ಮಾಡಿದ್ದ ಪರ್ಸ್ ಜಪ್ತಿ ಮಾಡಿಕೊಂಡಿದ್ದಾರೆ.

ಜೆ.ಸಿ. ನಗರದ ಮಹಮ್ಮದ್ ಜಬಿ (22) ಹಾಗೂ ಭಾರತಿನಗರದ ರೆಹಾನ್ (20) ಬಂಧಿತ ಆರೋಪಿಗಳು.

ಪುಲಕೇಶಿನಗರ ಹೇನ್ಸ್ ರಸ್ತೆಯ ಹರಿದ್ರ ಗಣಪತಿ ದೇವಸ್ಥಾನ ಬಳಿ ಭಾನುವಾರ ಬೆಳಿಗ್ಗೆ 8.45ಕ್ಕೆ ಬಾಗಲೂರು ಲೇಔಟ್ ನಿವಾಸಿಯೊಬ್ಬರ ಮೊಬೈಲ್, ಪರ್ಸ್ ಕಿತ್ತುಕೊಂಡಿದ್ದರು. ಬಳಿಕ ಮೊಬೈಲ್ ವಾಪಸ್ ಕೊಟ್ಟು, ಪರ್ಸ್‌ನೊಂದಿಗೆ ಪರಾರಿಯಾಗಿದ್ದರು. ಈ ಬಗ್ಗೆ ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಇಬ್ಬರೂ ಆರೋಪಿಗಳನ್ನು ಬಂಧಿಸಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.



ಮಹಮ್ಮದ್ ಜಬಿ



ರೆಹಾನ್

'ಮಹಮ್ಮದ್ ಜಬಿ ವಿರುದ್ಧ ಈಗಾಗಲೇ ಕಮರ್ಷಿಯಲ್ ಸ್ಟ್ರೀಟ್, ಎಚ್‌ಎಸ್‌ಆರ್ ಲೇಔಟ್, ಹೆಬ್ಬಾಳ, ಕೆ.ಆರ್. ಪುರ, ಸದಾಶಿವನಗರ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ, ದರೋಡೆ ಪ್ರಕರಣಗಳು ದಾಖಲಾಗಿವೆ. ಕೊಲೆ ಮತ್ತು ದರೋಡೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ನಗರ ಹೊರವಲಯದ ಕ್ಯಾತ್ಸಂದ್ರ ಟೋಲ್ ಬಳಿ ಭಾನುವಾರ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಪೊನ್ನುಸ್ವಾಮಿ (75) ಎಂಬುವವರು ಮೃತಪಟ್ಟಿದ್ದಾರೆ. ಪೊನ್ನುಸ್ವಾಮಿ ಮರಳೂರು ದಿಣ್ಣೆಯ ನಿವಾಸಿ.



ಬೆಂಗಳೂರು ಕಡೆಯಿಂದ ತುಮಕೂರಿಗೆ ಬರುವಾಗ ವಾಹನ ಡಿಕ್ಕಿಯಾಗಿದೆ.



ರಂಗ ಪ್ರವೇಶ

ಬೆಂಗಳೂರಿನ ಶ್ರೀಹರಿ ಖೋಡೆ ಪರ್ಫಾರ್ಮಿಂಗ್ ಆರ್ಟ್ಸ್ ಸಭಾಂಗಣದಲ್ಲಿ ಭಾನುವಾರ 'ಕಲಾನಿಧಿ ನೃತ್ಯ ಮಂದಿರಂ' ಆಯೋಜಿಸಿದ್ದ ರಂಗಪ್ರವೇಶ ಕಾರ್ಯಕ್ರಮದಲ್ಲಿ ಪ್ರಶಿತಾ ಶೆಟ್ಟಿ ಅವರು ಭರತನಾಟ್ಯ ಪ್ರದರ್ಶಿಸಿದರು

-ಪ್ರಜಾವಾಣಿ ಚಿತ್ರ/ ರಂಜು ಪಿ.

ಡೆಂಗಿ ಶಂಕೆ: ತಮ್ಮ ಸಾವು, ಅಣ್ಣನ ಆರೋಗ್ಯ ಗಂಭೀರ

ಪ್ರಜಾವಾಣಿ ವಾರ್ತೆ

ಹಾವೇರಿ: ತೀವ್ರ ಜ್ವರದಿಂದ ಬಳಲುತ್ತಿದ್ದ ಬಾಲಕ ಯಶವಂತ ಸಿದ್ಧಲಿಂಗೇಶ ಹುಂಡೇಕಾರ (8) ಎಂಬಾತ ಭಾನುವಾರ ಮೃತಪಟ್ಟಿದ್ದು, ಅವನ ಅಣ್ಣ ದಿನೇಶ್ (10) ಆರೋಗ್ಯ ಸ್ಥಿತಿಯೂ ಗಂಭೀರವಾಗಿದೆ.

ತಾಲ್ಲೂಕಿನ ಸಂಗೂರಿನ ಯಶವಂತ, ಸ್ಥಳೀಯ ಶಾಲೆಯೊಂದರಲ್ಲಿ 2ನೇ ತರಗತಿಯಲ್ಲಿ ಓದುತ್ತಿದ್ದು, ತೀವ್ರ ಜ್ವರದಿಂದ ಬಳಲುತ್ತಿದ್ದ ಬಾಲಕನನ್ನು ಜೂನ್ 5ರಂದು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಾಲಕನನ್ನು ಹುಬ್ಬಳ್ಳಿ ಕಿಮ್ಸ್‌ಗೆ ಇತ್ತೀಚೆಗಷ್ಟೇ ಸ್ಥಳಾಂತರ ಮಾಡಲಾಗಿತ್ತು.

'ಯಶವಂತ ಡೆಂಗಿ ಜ್ವರದಿಂದ ಬಳಲುತ್ತಿದ್ದನೆಂದು ವೈದ್ಯರು ಹೇಳಿದ್ದರು. ಅವನ ಆರೋಗ್ಯದಲ್ಲಿ ಭಾನುವಾರ ಏರುಪೇರಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿಯೇ ಆತ ತೀರಿಕೊಂಡಿದ್ದಾನೆ' ಎಂದು ಆತನ ಸಂಬಂಧಿಕರು ತಿಳಿಸಿದ್ದಾರೆ.

'ಯಶವಂತನ ಅಣ್ಣ ದಿನೇಶ್ ಕೂಡ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈತನ ಆರೋಗ್ಯವೂ ಸುಧಾರಿಸಿಲ್ಲ. ಜ್ವರವೂ ಕಡಿಮೆಯಾಗುತ್ತಿಲ್ಲ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಯಶವಂತ ಸಾವಿನ ಬಗ್ಗೆ ಪ್ರತಿಕ್ರಿಯಿಸಿದ ಕಿಮ್ಸ್ ನಿರ್ದೇಶಕ, 'ದಿನೇಶ್ ಡೆಂಗಿಯಿಂದ ಬಳಲುತ್ತಿರುವುದು ಪರೀಕ್ಷೆಯಿಂದ ದೃಢಪಟ್ಟಿದೆ. ಆದರೆ, ಯಶವಂತ ಡೆಂಗಿಯಿಂದ ಬಳಲುತ್ತಿದ್ದ ಬಗ್ಗೆ ಪರೀಕ್ಷೆ ವರದಿ ಇನ್ನಷ್ಟೆ ಬರಬೇಕಿದೆ' ಎಂದಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು, ವೃದ್ಧರೂ ತೀವ್ರ ಜ್ವರದಿಂದ ಬಳಲುತ್ತಿದ್ದಾರೆ.

ಎಂಜಿನಿಯರ್‌ಗೆ ₹41 ಲಕ್ಷ ವಂಚನೆ

ತುಮಕೂರು: 'ಆನ್‌ಲೈನ್ ಟ್ರೇಡಿಂಗ್ ಮೇಲೆ ಹಣ ಹೂಡಿಕೆ ಮಾಡಿ ದುಪ್ಪಟ್ಟು ಲಾಭ ಗಳಿಸಬಹುದು' ಎಂದು ನಂಬಿಸಿ ನಗರದ ಶಿರಾಗೇಟ್ ನಿವಾಸಿ, ಎಂಜಿನಿಯರ್ ಹನುಮಂತಪ್ಪ ಬಾರ್ಕಿ ಎಂಬುವರಿಗೆ ₹41.89 ಲಕ್ಷ ವಂಚಿಸಿದ್ದಾರೆ.

ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ 'ಟ್ರೇಡಿಂಗ್ ಮೇಲೆ ಹಣ ಹೂಡಿಕೆ ಮಾಡಿ ಲಾಭ ಪಡೆಯಬಹುದು' ಎಂಬ ಜಾಹೀರಾತು ನೋಡಿ ಅದರಲ್ಲಿದ್ದ ಲಿಂಕ್ ಕ್ಲಿಕ್ ಮಾಡಿದ್ದಾರೆ. ನಂತರ ಅವರನ್ನು 'ಗೋಲ್ಡನ್ ಫಿಂಗರ್ ಅಲಯನ್ಸ್ ಬ್ರಾಡ್ ಸೆಕ್ಯೂರಿಟಿಸ್' ಎಂಬ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ. ಸದರಿ ಗ್ರೂಪ್‌ನಲ್ಲಿ ಆನ್‌ಲೈನ್ ಟ್ರೇಡಿಂಗ್ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ರಸ್ತೆ ಗುಂಡಿ ಮುಚ್ಚಿ'

ಬಿಇಎಲ್ ಕುವೆಂಪು ವೃತ್ತದಿಂದ ಭದ್ರಪ್ಪ ಲೇಔಟ್‌ಗೆ ಹೋಗುವ ರಿಂಗ್ ರಸ್ತೆಯು ಗುಂಡಿಗಳಿಂದ ಕೂಡಿದೆ. ಕೆಲವೆಡೆ ಗುಂಡಿಗಳ ಗುರುತಿಗೆ ಚಪ್ಪಡಿ ಕಲ್ಲುಗಳನ್ನು ಅಡ್ಡಲಾಗಿ ಇರಿಸಿದ್ದಾರೆ. ಇದರಿಂದ, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಮಳೆ ಬಂದಾಗ ಗುಂಡಿಯಲ್ಲಿ ನೀರು ತುಂಬಿಕೊಂಡರೆ ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಆದ್ದರಿಂದ ಆದಷ್ಟು ಬೇಗ ಗುಂಡಿಗಳನ್ನು ಮುಚ್ಚಬೇಕು.

ಮುನಿರಾಜಣ್ಣ, ದೇವಿನಗರ



ಭದ್ರಪ್ಪ ಲೇಔಟ್‌ಗೆ ಹೋಗುವ ರಿಂಗ್ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

'ರಸ್ತೆಯಲ್ಲಿ ಕಟ್ಟಡ ಸಾಮಗ್ರಿ'

ವಿದ್ಯಾರಣ್ಯಪುರದ ಚಾಮುಂಡೇಶ್ವರಿ ಬಡಾವಣೆಯ 3ನೇ ಮುಖ್ಯರಸ್ತೆಯ 9ನೇ ಅಡ್ಡರಸ್ತೆಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿ ನಡೆಸುತ್ತಿರುವವರು ರಸ್ತೆಯಲ್ಲಿಯೇ ಜಲ್ಲಿಕಲ್ಲು ಹಾಗೂ ನಿರ್ಮಾಣ ಸಾಮಗ್ರಿಗಳನ್ನು ಶೇಖರಿಸಿ ಇಟ್ಟಿದ್ದಾರೆ. ಇದರಿಂದ ವಾಹನ ಚಾಲಕರಿಗೆ, ಪಾದಚಾರಿಗಳಿಗೆ, ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ತೊಂದರೆಯಾಗುತ್ತಿದೆ. ಕಟ್ಟಡ ಮಾಲೀಕರಿಗೆ ತಿಳಿಹೇಳಿದರೂ ಪ್ರಯೋಜನವಾಗಿಲ್ಲ. ಬಿಬಿಎಂಪಿ ಈ ಬಗ್ಗೆ ಕ್ರಮವಹಿಸಿ, ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ತೆರವುಗೊಳಿಸಬೇಕು. ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು.

ಕೆ. ವಿಠ್ಠಲದಾಸ್ ಭಟ್, ಚಾಮುಂಡೇಶ್ವರಿ ಬಡಾವಣೆ



ಚಾಮುಂಡೇಶ್ವರಿ ಬಡಾವಣೆಯಲ್ಲಿ ರಸ್ತೆಯಲ್ಲಿಯೇ ಕಟ್ಟಡ ಸಾಮಗ್ರಿ ಹಾಕಿರುವುದು

'ನೀರು ಸೋರಿಕೆ ತಡೆಗಟ್ಟಿ'

ಹೆಬ್ಬಾಳಕ್ಕೆ ಹೊಂದಿಕೊಂಡಿರುವ ಕೆಂಪಾಪುರದ ಚಿರಂಜೀವಿ ಲೇಔಟ್ ಮುಖ್ಯರಸ್ತೆ ವೃತ್ತದ ಬಳಿ ಪೈಪ್ ಒಡೆದು ಹತ್ತಾರು ದಿನಗಳಿಂದ ನೀರು ಸೋರಿಕೆಯಾಗುತ್ತಿದೆ. ಇದರಿಂದಾಗಿ ಇಡೀ ವೃತ್ತವು ನೀರಿನಿಂದ ಆವೃತವಾಗಿದೆ . ಈ ಪ್ರದೇಶಕ್ಕೆ ಮುಂಜಾನೆ ನಾಲ್ಕು ಗಂಟೆಯಿಂದ ಏಳು ಗಂಟೆಯ ಅವಧಿಯಲ್ಲಿ ನೀರು ಪೂರೈಕೆಯಾಗುತ್ತದೆ. ಈ ವೇಳೆ ಭಾರಿ ಪ್ರಮಾಣದಲ್ಲಿ ನೀರು ಸೋರಿಕೆಯಾಗುತ್ತಿದೆ. ರಸ್ತೆಯ ಗುಂಡಿಗಳಲ್ಲಿಯೂ ನೀರು ಆವರಿಸಿಕೊಳ್ಳಲಿದ್ದು, ವಾಹನ ಸವಾರಿ ಕಷ್ಟವಾಗಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಸಾಗಲು ಸಮಸ್ಯೆ ಎದುರಿಸುತ್ತಿದ್ದು, ಬಿದ್ದು ಗಾಯಗೊಂಡ ಘಟನೆಗಳು ಸಂಭವಿಸಿವೆ. ಕುಡಿಯುವ ನೀರು ಪೋಲಾಗುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸದಿರುವುದು ವಿಪರ್ಯಾಸ. ಈಗಲಾದರೂ ನೀರಿನ ಪೈಪ್ ದುರಸ್ತಿ ಮಾಡಿ, ಅನಗತ್ಯವಾಗಿ ನೀರು ಪೋಲಾಗುವುದನ್ನು ತಡೆಯಬೇಕು.

ಶಿವಪ್ರಸಾದ್ ಎಸ್., ಚಿರಂಜೀವಿ ಲೇಔಟ್



ಚಿರಂಜೀವಿ ಲೇಔಟ್ ಮುಖ್ಯ ರಸ್ತೆಯ ವೃತ್ತದ ಬಳಿ ನೀರು ಸೋರಿಕೆಯಾಗಿ ರಸ್ತೆ ಆವರಿಸಿಕೊಂಡಿರುವುದು

'ರಸ್ತೆಗೆ ಚರಂಡಿ ನೀರು'

ಹೆಗ್ಗನಹಳ್ಳಿಯ ಜಿಕೆಡಬ್ಲ್ಯು ಲೇಔಟ್‌ನಲ್ಲಿ ಒಳಚರಂಡಿಗಳು ಕಟ್ಟಿಕೊಂಡಿವೆ. ಇದರಿಂದಾಗಿ ಮಳೆ ಬಂದಲ್ಲಿ ಚರಂಡಿ ನೀರು ರಸ್ತೆ ತುಂಬ ಆವರಿಸಿಕೊಳ್ಳಲಿದೆ. ಭೂಗತ ಕೇಬಲ್ ಅಳವಡಿಕೆ ಸೇರಿ ವಿವಿಧ ಕಾಮಗಾರಿಗಳ ಸಂಬಂಧ ರಸ್ತೆಯನ್ನು ಅಗೆದು, ಮುಚ್ಚಲಾಗಿದೆ. ಆದರೆ, ಅಗೆದ ಜಾಗದಲ್ಲಿ ಡಾಂಬರೀಕರಣ ನಡೆಸಿಲ್ಲ. ಮಳೆ ಬಂದಲ್ಲಿ ಮರದ ಕೊಂಬೆಗಳು ರಸ್ತೆಗೆ ಉರುಳುತ್ತಿದ್ದು, ವಾಹನ ಸವಾರಿ ಕಷ್ಟವಾಗಿದೆ. ಈ ಬಗ್ಗೆ ಬಿಬಿಎಂಪಿ ಕ್ರಮವಹಿಸಬೇಕು.

ರಾಮಮೂರ್ತಿ, ಶಾಂಭವಿನಗರ



ಜಿಕೆಡಬ್ಲ್ಯು ಲೇಔಟ್ ರಸ್ತೆಯಲ್ಲಿ ಸಾಗಲು ದ್ವಿಚಕ್ರ ವಾಹನ ಸವಾರರು ಪರದಾಟ ನಡೆಸುತ್ತಿರುವುದು

'ದುಃಸ್ಥಿತಿಯಲ್ಲಿ ಬಸ್ ತಂಗುದಾಣ'

ನಗರದ ಬಹುತೇಕ ಕಡೆ ಬಸ್ ತಂಗುದಾಣಗಳಿಲ್ಲ. ಇದ್ದರೂ ಅವುಗಳು ಸುಸ್ಥಿತಿಯಲ್ಲಿಲ್ಲ. ಬಸವೇಶ್ವರನಗರದ ಹೌಸಿಂಗ್ ಬೋರ್ಡ್ ಕಾಲೊನಿಯ ಎರಡನೆ ಹಂತದ ಸಿಟಿ ಬಸ್ ತಂಗುದಾಣ ಇದಕ್ಕೆ ಉತ್ತಮ ಉದಾಹರಣೆ. ಇಲ್ಲಿನ ಬಸ್ ತಂಗುದಾಣ ನಿರುಪಯುಕ್ತವಾಗಿದೆ. ಇದರಿಂದಾಗಿ ಮಳೆ ಬಂದಲ್ಲಿ ಸಮಸ್ಯೆಯಾಗುತ್ತಿದೆ. ಲೋಹದ ಆಸನವು ನೆಲದ ಮೇಲೆ ಬಿದ್ದು ಎಷ್ಟೋ ತಿಂಗಳುಗಳಾಗಿವೆ. ವೃದ್ಧರು ಮತ್ತು ಮಹಿಳೆಯರು ಸಹ ನಿಂತೇ ಇರಬೇಕಾಗಿದೆ. ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮವಹಿಸಿ, ಬಸ್ ತಂಗುದಾಣವನ್ನು ದುರಸ್ತಿಪಡಿಸಬೇಕು.

ಎಂ.ಎಸ್. ರಘುನಾಥ್, ಬಸವೇಶ್ವರ ನಗರ



ಬಸವೇಶ್ವರ ನಗರದ ಹೌಸಿಂಗ್ ಬೋರ್ಡ್ ಕಾಲೊನಿಯ ಎರಡನೆ ಹಂತದ ಸಿಟಿ ಬಸ್ ತಂಗುದಾಣದ ಸ್ಥಿತಿ

ಒಡಿಶಾದಿಂದ ಡ್ರಗ್ಸ್ ತರುತ್ತಿದ್ದ ಆರೋಪಿಗಳು

ರೈಲಿನಲ್ಲಿ ಗಾಂಜಾ ತಂದು ಮಾರಾಟ: ಸೆರೆ

ಪ್ರಜಾವಾಣಿ ವಾರ್ತೆ

ಹಾವೇರಿ: ಒಡಿಶಾದಿಂದ ರೈಲಿನಲ್ಲಿ ಗಾಂಜಾ ತಂದು ಹಾವೇರಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಮಾರುತ್ತಿದ್ದ ಜಾಲ ಭೇದಿಸಿರುವ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ನಾಗೇಂದ್ರಮಟ್ಟಿಯ ದಿಳ್ಳೆಪ್ಪ ಅಳಲಗೇರಿ, ಸಾಹಿಲ್ ಕರ್ಜಗಿ, ಸುಭಾಷ ವೃತ್ತದ ಫಾರೂಕ್ ಅಹಮ್ಮದ್ ಹಾಗೂ ಇಸ್ಮಾಯಿಲ್ ನದಾಫ ಬಂಧಿತರು. ಇವರಿಂದ ₹7.91 ಲಕ್ಷ ಮೌಲ್ಯದ 9 ಕೆ.ಜಿ 900 ಗ್ರಾಂ ಗಾಂಜಾ ಹಾಗೂ 4 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ರೈಲು ನಿಲ್ದಾಣ ಬಳಿಯ ತನಿಷಾ ಹೋಟೆಲ್ ಸಮೀಪದಲ್ಲಿರುವ ಸೇತುವೆ ಕೆಳಭಾಗದಲ್ಲಿ ಸೇರಿದ್ದ ಆರೋಪಿಗಳು, ಗಾಂಜಾ ಪೊಟ್ಟಣಗಳನ್ನು ಇಟ್ಟುಕೊಂಡಿದ್ದರು. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ದಾಳಿ ಮಾಡಿ, ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು. ಗಾಂಜಾ ಸಮೇತ ಸಿಕ್ಕಿಬಿದ್ದ ಆರೋಪಿಗಳು, ಸಾಗಣೆ ಹಾಗೂ ಮಾರಾಟದ ಬಗ್ಗೆ ಬಾಯಿ ಬಿಟ್ಟರು' ಎಂದು ಹೇಳಿದರು.

ಮುಖ್ಯಾಂಶಗಳು

- ಪಾರ್ಸೆಲ್ ಹಾಗೂ ಬ್ಯಾಗ್‌ಗಳಲ್ಲಿ ಗಾಂಜಾ ಸಾಗಣೆ
- ₹7.91 ಲಕ್ಷ ಮೌಲ್ಯದ ಗಾಂಜಾ ವಶ
- ನಾಲ್ಕು ಮೊಬೈಲ್ ಜಪ್ತಿ



'ಒಡಿಶಾದಲ್ಲಿರುವ ಗಾಂಜಾ ಪೆಡ್ಲರ್‌ಗಳ ಜೊತೆಯಲ್ಲಿ ಆರೋಪಿಗಳು ಒಡನಾಟ ಹೊಂದಿದ್ದಾರೆ. ಆಗಾಗ ಒಡಿಶಾಗೆ ಹೋಗುತ್ತಿದ್ದ ಆರೋಪಿಗಳು, ಅಲ್ಲಿಯೇ ಕಡಿಮೆ ಬೆಲೆಗೆ ಗಾಂಜಾ ತರಿಸುತ್ತಿದ್ದರು. ಪಾರ್ಸೆಲ್ ಹಾಗೂ ಬ್ಯಾಗ್‌ಗಳಲ್ಲಿ ಗಾಂಜಾ ಪೊಟ್ಟಣಗಳನ್ನು ಇಟ್ಟುಕೊಂಡು ಹಾವೇರಿಗೆ ರೈಲಿನ ಮೂಲಕ ತರುತ್ತಿದ್ದರು' ಎಂದು ತಿಳಿಸಿದರು.

'ರೈಲು ನಿಲ್ದಾಣದಲ್ಲಿ ಸರಾಗವಾಗಿ ಇಳಿದು ತಮ್ಮ ಮನೆಗೆ ಗಾಂಜಾ ಕೊಂಡೊಯ್ಯುತ್ತಿದ್ದರು. ನಂತರ, ಹಲವು ಮಧ್ಯವರ್ತಿಗಳಿಗೆ ಗಾಂಜಾ ನೀಡಿ ಅವರ ಮೂಲಕ ಗ್ರಾಹಕರಿಗೆ ತಲುಪಿಸುತ್ತಿದ್ದರು. ಗಾಂಜಾ ಹೂವು, ಮೊಗ್ಗು, ಒಣಗಿದ ಗಾಂಜಾ ಸಹ ಆರೋಪಿಗಳ ಬಳಿ ಸಿಕ್ಕಿದೆ. ಆರೋಪಿಗಳು, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಹಾವೇರಿ ಜಿಲ್ಲಾ ಎಸ್ಪಿ ಅಂಶುಕುಮಾರ್, ಎಎಸ್ಪಿ ಸಿ. ಗೋಪಾಲ್ ಹಾಗೂ ಡಿವೈಎಸ್ಪಿ ಕೆ.ಎಲ್. ಗಣೇಶ್ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಮೋತಿಲಾಲ್ ಆರ್. ಪವಾರ್ ಅವರು ಕಾರ್ಯಾಚರಣೆ ನಡೆಸಿದ್ದರು.

ವಿಧಾನಸಭೆ ಕ್ಷೇತ್ರಗಳ ಮೇಲೆ ಈಗಲೇ ಜೆಡಿಎಸ್, ಬಿಜೆಪಿ ಆಕಾಂಕ್ಷಿಗಳ ಕಣ್ಣು

ಗೆದ್ದ ಮೈತ್ರಿ: ಮುಂದಿದೆ ಕಠಿಣ ಹಾದಿ

● ಕೆ.ಓಂಕಾರ ಮೂರ್ತಿ

ಕೋಲಾರ: ಕೋಲಾರ ಮೀಸಲು ಕ್ಷೇತ್ರದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಯಶಸ್ವಿಯಾಗಿರುವುದು ಉಭಯ ಪಕ್ಷಗಳಿಗೆ ಖುಷಿಯ ಜೊತೆ ಭಾರಿ ಸವಾಲನ್ನು ಮುಂದಿಟ್ಟಿದೆ. ಮುಂದಿನ ಹಾದಿ ಕಠಿಣವಾಗಿರಲಿದ್ದು, ಸಂದಿಗ್ಧ ಪರಿಸ್ಥಿತಿ ತಂದೊಡ್ಡುವ ಸಾಧ್ಯತೆಗಳಿವೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಏಕೆಂದರೆ, ಸದ್ಯದಲ್ಲೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಬರಲಿವೆ. ಆ ನಂತರ ನಗರಸಭೆ, ಪುರಸಭೆ ಚುನಾವಣೆ ಇವೆ. ಬಹುಮುಖ್ಯವಾಗಿ 2028ರಲ್ಲಿ ವಿಧಾನಸಭೆ ಚುನಾವಣೆ ಎದುರಾಗಲಿದ್ದು, ಅಲ್ಲೂ 'ಮೈತ್ರಿ ಕೆಮಿಸ್ಟ್ರಿ' ಕೆಲಸ ಮಾಡಲಿದೆಯಾ ಎಂಬ ಪ್ರಶ್ನೆಗಳು ಈಗಲೇ ಉದ್ಭವಿಸುತ್ತಿವೆ.

ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ಹಾಲಿ ಕ್ಷೇತ್ರವನ್ನು ಬಿಜೆಪಿ ತ್ಯಾಗ ಮಾಡಿದೆ. ಹೀಗಾಗಿ, ಮುಂದಿನ ಚುನಾವಣೆಗಳಲ್ಲಿ ಹೆಚ್ಚಿನ ಟಿಕೆಟ್‌ಗೆ ಸಹಜವಾಗಿಯೇ ಬೇಡಿಕೆ ಇಡಲಿದೆ.

ಬಿಜೆಪಿ ಸ್ಥಳೀಯ ಮುಖಂಡರು, ಕಾರ್ಯಕರ್ತರೂ ಸುಮ್ಮನಿರುವುದಿಲ್ಲ. ಆದರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಜೆಡಿಎಸ್ ಬಲಿಷ್ಠ. ಹೀಗಾಗಿ, ಅವರಿಂದಲೂ ಟಿಕೆಟ್‌ಗೆ ಹೆಚ್ಚಿನ ಬೇಡಿಕೆ ಬರಲಿದೆ, ಆಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಆಗ ಪರಿಸ್ಥಿತಿ ಹೇಗಿರಲಿದೆ ಎಂಬುದು ಕೂಡ ಕುತೂಹಲ ಮೂಡಿಸಿದೆ.

ಲೋಕಸಭೆ ಚುನಾವಣೆ ಪ್ರಧಾನಿ ಮೋದಿ ಹಾಗೂ ದೇಶದ ವಿಚಾರಗಳ ಮೇಲೆ ನಡೆದಿದೆ. ಆದರೆ, ವಿಧಾನಸಭೆ ಚುನಾವಣೆಯು ಸ್ಥಳೀಯ ವಿಚಾರ, ಸಮಸ್ಯೆಗಳನ್ನು ಆಧರಿಸಿ ನಡೆಯಲಿದೆ. ಹೀಗಾಗಿ, ಎರಡೂ ಪಕ್ಷಗಳಿಗೆ ಭಾರಿ ಸವಾಲು ಮುಂದಿದೆ.

ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಏಳರಲ್ಲಿ ಮೈತ್ರಿ ಅಭ್ಯರ್ಥಿ ಮುನ್ನಡೆ ಸಾಧಿಸಿದ್ದಾರೆ. ಹೀಗಾಗಿ, ಸಹಜವಾಗಿಯೇ ವಿಧಾನಸಭೆ ಚುನಾವಣೆ ವೇಳೆ ಎರಡೂ ಪಕ್ಷಗಳಿಂದ ಟಿಕೆಟ್ ಆಕಾಂಕ್ಷಿಗಳು ಹೆಚ್ಚಾಗಿ ಇರಲಿದ್ದಾರೆ.

ಪ್ರಮುಖವಾಗಿ ಬಂಗಾರ ಪೇಟೆ ಕ್ಷೇತ್ರದ ಮೇಲೆ ಮಾಜಿ ಸಂಸದ ಎಸ್. ಮುನಿಸ್ವಾಮಿ ಕಣ್ಣಿಟ್ಟಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಟಿಕೆಟ್ ತಪ್ಪಿಸಿಕೊಂಡಿದ್ದ ಅವರಿಗೆ ಈ ಕ್ಷೇತ್ರದಲ್ಲಿ ಟಿಕೆಟ್ ಕೊಡುವ ಭರವಸೆ ಸಿಕ್ಕಿದೆ ಎನ್ನಲಾಗಿದೆ. ಪ್ರಚಾರದ ವೇಳೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಕೂಡ ಈ ಸುಳಿವು ನೀಡಿದ್ದರು.

ಈ ಕ್ಷೇತ್ರದಲ್ಲಿ ಕಳೆದ ಬಾರಿ ಜೆಡಿಎಸ್‌ನಿಂದ ಮಲ್ಲೇಶ್ ಬಾಬು ಕಣಕ್ಕಿಳಿದಿದ್ದರು. ಅವರೀಗ ಸಂಸದ ಆರುವುದರಿಂದ ಮುನಿಸ್ವಾಮಿ ಹಾದಿ ಸುಗಮ ಎನ್ನಲಾಗುತ್ತಿದೆ. ಬಿಜೆಪಿಯಲ್ಲಿ ಟಿಕೆಟ್‌ಗೆ ಪೈಪೋಟಿ ನಡೆಯಲಿದೆ. ಏಕೆಂದರೆ ಈಗ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿರುವ ಬಿ.ವಿ. ಮಹೇಶ್ ಕೂಡ ಹಿಂದಿನಿಂದ ಈ ಕ್ಷೇತ್ರದ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ.

ಈ ಕುರಿತು ಈಚೆಗೆ ಪ್ರತಿಕ್ರಿಯಿಸಿದ್ದ ಮುನಿಸ್ವಾಮಿ, 'ನಾನು ಅಭ್ಯರ್ಥಿ ಎಂದು ಎಲ್ಲೂ ಹೇಳಿಲ್ಲ. ಈಗಾಗಲೇ ನಾನು ಲೋಕಸಭೆ ಕ್ಷೇತ್ರದ ಟಿಕೆಟ್ ತ್ಯಾಗ ಮಾಡಿದ್ದೇನೆ. ಅಂತಿಮವಾಗಿ ತೀರ್ಮಾನ ಕೈಗೊಳ್ಳಬೇಕಿರುವುದು ಹೈಕಮಾಂಡ್' ಎಂದಿದ್ದರು.

ಇನ್ನು ಕೋಲಾರ ವಿಧಾನಸಭೆ ಕ್ಷೇತ್ರವನ್ನೇ ತೆಗೆದುಕೊಳ್ಳಿ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ (ಕೊತ್ತೂರು ಮಂಜುನಾಥ್), ಬಿಜೆಪಿ (ವರ್ತೂರು ಪ್ರಕಾಶ್), ಜೆಡಿಎಸ್ (ಸಿಎಂಆರ್ ಶ್ರೀನಾಥ್) ನಡುವೆ ಬಹುತೇಕ ಸಮಬಲದ ಪೈಪೋಟಿ ನಡೆದಿತ್ತು.

ಕಾಂಗ್ರೆಸ್ ಗೆದ್ದಿದ್ದರೆ, ಜೆಡಿಎಸ್ ಎರಡನೇ ಸ್ಥಾನ ಪಡೆದಿತ್ತು. ಈ ಕ್ಷೇತ್ರದಲ್ಲಿ ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಹೆಚ್ಚು ಮತ ಪಡೆದಿದ್ದಾರೆ. ಹೀಗಾಗಿ, ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರದ ಟಿಕೆಟ್‌ಗೆ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಭಾರಿ ಪೈಪೋಟಿ ಏರ್ಪಡುವುದು ಖಚಿತ.

ಶ್ರೀನಿವಾಸಪುರ, ಮುಳಬಾಗಿಲು ಹಾಗೂ ಕೆಜಿಎಫ್‌ನಲ್ಲಿ ಹೆಚ್ಚೇನೂ ಸಮಸ್ಯೆ ಉದ್ಭವಿಸದು. ಏಕೆಂದರೆ ಶ್ರೀನಿವಾಸಪುರ ಹಾಗೂ ಮುಳಬಾಗಿಲಿನಲ್ಲಿ ಬಿಜೆಪಿ ಬಲಿಷ್ಠವಾಗಿಲ್ಲ, ಕೆಜಿಎಫ್‌ನಲ್ಲಿ ಜೆಡಿಎಸ್ ಏನೇನೂ ಇಲ್ಲ.

ಮಾಲೂರು ಕ್ಷೇತ್ರದಲ್ಲಿ ಸವಾಲು ಎದುರಾಗಲಿದೆ. ಈ ಕ್ಷೇತ್ರದಲ್ಲಿ ಕಳೆದ ಬಾರಿ ಬಿಜೆಪಿ ಅಭ್ಯರ್ಥಿ ಕೆ.ಎಸ್. ಮಂಜುನಾಥ್ ಗೌಡ ಕೇವಲ 257 ವೋಟುಗಳಿಂದ ಕಾಂಗ್ರೆಸ್ ಎದುರು ಸೋತಿದ್ದರು. ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭಾರಿ ಪೈಪೋಟಿ ನೀಡಿದ್ದ ಹೂಡಿ ವಿಜಯಕುಮಾರ್ ಈ ಬಾರಿ ಮೈತ್ರಿಕೂಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ವಿಶೇಷವೆಂದರೆ ಅವರ ನಿವಾಸಕ್ಕೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಭೇಟಿ ಕೊಟ್ಟಿದ್ದರು. ಈ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ರಾಮೇಗೌಡರು ಕೂಡ ಮತ್ತೆ ಟಿಕೆಟ್ ಕೇಳುತ್ತಾರೆ. ಅವರ ಪತ್ನಿ ರಶ್ಮಿ ಈಗ ಜೆಡಿಎಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರು. ಹೀಗಾಗಿ, ಈ ಕ್ಷೇತ್ರದ ರಾಜಕೀಯ ವಿದ್ಯಮಾನಗಳ ಬಗ್ಗೆ ಎಲ್ಲರ ಚಿತ್ತವಿದೆ.

ಚಿಂತಾಮಣಿ ಹಾಗೂ ಶಿಡ್ಲಘಟ್ಟದಲ್ಲೂ ಹೆಚ್ಚಿನ ಸಮಸ್ಯೆ ಎದುರಾಗದು. ಏಕೆಂದರೆ ಈ ಕ್ಷೇತ್ರಗಳಲ್ಲಿ ಬಿಜೆಪಿ ಅಷ್ಟೇನೂ ಬಲಿಷ್ಠವಾಗಿಲ್ಲ. ಹೀಗಾಗಿ, ಜೆಡಿಎಸ್ ಹಕ್ಕೊತ್ತಾಯ ಮಂಡಿಸುತ್ತದೆ. ಈ ಎಲ್ಲಾ ಕಾರಣಗಳಿಗೆ ಮುಂದಿನ ದಿನಗಳಲ್ಲಿ ಮೈತ್ರಿ ಪಕ್ಷಗಳ ನಡೆ ಬಹಳ ಕುತೂಹಲ ಮೂಡಿಸಿದೆ.

ಕಾಂಗ್ರೆಸ್ ಹಿಮ್ಮೆಟ್ಟಿಸಲು ಮೈತ್ರಿ ಅಗತ್ಯ



ಕಾಂಗ್ರೆಸ್ ಅಹಂ ಹಿಮ್ಮೆಟ್ಟಿಸಲು ಜೆಡಿಎಸ್–ಬಿಜೆಪಿ ಮೈತ್ರಿ ತುಂಬಾ ಅವಶ್ಯ ಎಂಬುದು ಈಗ ಎಲ್ಲರಿಗೂ ಮನವರಿಕೆ ಆಗಿದೆ. ಜೊತೆಗೆ ಮೈತ್ರಿ ಅನಿವಾರ್ಯವೂ ಇದೆ. ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಹೊಂದಾಣಿಕೆ ಇದೆ ಎಂಬುದು ಈಗ ಗೊತ್ತಾಗಿದೆ. ಮುಂದಿನ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ವಿಚಾರವನ್ನು ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಹೆಚ್ಚು ಬಲ ಇದ್ದವರಿಗೆ ಹೆಚ್ಚು ಅವಕಾಶ ಸಿಗುತ್ತದೆ. ಮೊದಲು ಬುಡ ಉಳಿಸಿಕೊಳ್ಳುವುದು ನಮ್ಮ ಪ್ರಥಮ ಆದ್ಯತೆ

ಇಂಚರ ಗೋವಿಂದರಾಜು, ವಿಧಾನ ಪರಿಷತ್ ಸದಸ್ಯ, ಜೆಡಿಎಸ್

ಬೆಂಬಲ ಇದ್ದವರಿಗೆ ಟಿಕೆಟ್



ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಯಶಸ್ವಿಯಾಗಿದೆ. ಟೀಕಿಸಿದ್ದವರಿಗೆ ಈ ಚುನಾವಣೆಯೇ ಉತ್ತರ. ಹೀಗಾಗಿ, ಮೈತ್ರಿ ಮುಂದುವರಿಯಲಿದೆ. ಮುಂದಿನ ಚುನಾವಣೆಗಳಲ್ಲಿ ಆ ಕಾಲಘಟ್ಟದಲ್ಲಿ ಅನುಕೂಲ ಇದ್ದ ಪಕ್ಷಕ್ಕೆ ಹೆಚ್ಚು ಟಿಕೆಟ್ ದೊರೆಯುತ್ತಿದೆ. ನಮ್ಮದು ರಾಷ್ಟ್ರೀಯ ಪಕ್ಷ, ಜೆಡಿಎಸ್ ಪ್ರಾದೇಶಿಕ ಪಕ್ಷ. ಬಿಜೆಪಿ ಬಲಿಷ್ಠವಾಗಿದೆ. ಹೀಗಾಗಿ, ಹೆಚ್ಚಿನ ಆಕಾಂಕ್ಷಿಗಳು ಇದ್ದೇ ಇರುತ್ತಾರೆ. ರಾಜಕೀಯವಾಗಿ ಹೆಚ್ಚು ಬೆಂಬಲ ಇದ್ದವರಿಗೆ ಟಿಕೆಟ್ ಸಿಗುತ್ತದೆ

ಓಂಶಕ್ತಿ ಚಲಪತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ಮೈತ್ರಿಯಿಂದ ಜೆಡಿಎಸ್–ಬಿಜೆಪಿಗೆ ಬಲ



ಜೆಡಿಎಸ್–ಬಿಜೆಪಿ ಮೈತ್ರಿ ಬಲ ಏನು ಎಂಬುದು ಕಾಂಗ್ರೆಸ್‌ಗೆ ಗೊತ್ತಾಗಿದೆ. ಮೈತ್ರಿ ಹೀಗೆಯೂ ಮುಂದೆಯೂ ಮುಂದುವರಿಯಲಿದೆ. ಲೋಕಸಭೆ ಚುನಾವಣೆಯಲ್ಲಿ ಎರಡೂ ಪಕ್ಷಗಳ ಮುಖಂಡರು, ಕಾರ್ಯಕರ್ತರು ಹೆಚ್ಚು ಶ್ರಮ ಹಾಕಿ ಗೆಲ್ಲಿಸಿದ್ದಾರೆ, ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ. ಮುಂದಿನ ಚುನಾವಣೆಗಳಲ್ಲೂ ಅದೇ ರೀತಿ ಶ್ರಮ ಹಾಕುತ್ತಾರೆ ಎಂಬ ವಿಶ್ವಾಸವಿದೆ.

ಎಂ.ಮಲ್ಲೇಶ್ ಬಾಬು, ಸಂಸದ, ಜೆಡಿಎಸ್

'ಕೈ ಹಿಡಿಯದ ಅಭಿವೃದ್ಧಿ ಕೆಲಸ'

ಐದು ವರ್ಷ ವಿಶ್ರಾಂತಿ ಪಡೆವೆ: ಡಿ.ಕೆ ಸುರೇಶ್ ಭಾವುಕ ನುಡಿ

ಪ್ರಜಾವಾಣಿ ವಾರ್ತೆ

ಕನಕಪುರ: 'ನನಗೆ ಅಧಿಕಾರ ಕೊಡಿ ಎಂದು ಅರ್ಜಿ ಹಾಕಿಕೊಂಡು ಬಂದವನಲ್ಲ. ಆಕಸ್ಮಿಕವಾಗಿ ಸಂಸತ್‌ಗೆ ನೀವೇ ಗೆಲ್ಲಿಸಿ ಕಳುಸಿದ್ದೀರಿ. ಸಿಕ್ಕ ಅವಕಾಶವನ್ನು ಬಳಸಿಕೊಂಡು ಉತ್ತಮ ಕೆಲಸ ಮಾಡಿರುವ ತೃಪ್ತಿ ಇದೆ. ನನ್ನ ಕೆಲಸಕ್ಕೆ ಕೂಲಿ ಕೇಳಿದ್ದೆ. ಮತದಾರರು ಬೇಡ... ನೀವು ವಿಶ್ರಾಂತಿ ಮಾಡಿ ಎಂದಿದ್ದಾರೆ. ಅದರಂತೆ ಇರುತ್ತೇನೆ' ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದರು.

ಇಲ್ಲಿನ ಮೈಸೂರು ರಸ್ತೆಯಲ್ಲಿರುವ ತಮ್ಮ ನಿವಾಸದಲ್ಲಿ ಲೋಕಸಭೆ ಚುನಾವಣೆಯಲ್ಲಿ ತಮ್ಮ ಪರವಾಗಿ ದುಡಿದ ಕಾರ್ಯಕರ್ತರು, ಮುಖಂಡರು ಸಭೆಯಲ್ಲಿ ಭಾವುಕರಾಗಿ ಮಾತನಾಡಿದರು.

'ನನ್ನ ಕುಟುಂಬವನ್ನು ನೋಡಿಕೊಂಡವನಲ್ಲ. ನನಗೆ ನೀವೇ ಎಲ್ಲ ಎಂದು ಹಗಲು–ರಾತ್ರಿ ಕೆಲಸ ಮಾಡಿದೆ. ನಿಸ್ವಾರ್ಥದಿಂದ ದುಡಿದಿದ್ದೇನೆ. ನಾನು ಸತ್ತರೂ ಸಂಸತ್‌ನಲ್ಲಿ ನನ್ನ ಹೆಸರು ಶಾಶ್ವತವಾಗಿ ಇರುತ್ತದೆ. ಅಂತಹ ಅವಕಾಶ ಕೊಟ್ಟಿದ್ದೀರಿ. ಇದಕ್ಕಿಂತಲೂ ಬೇರೆ ಭಾಗ್ಯ ನನಗೆ ಬೇಕಿಲ್ಲ' ಎಂದರು.

'ನನ್ನ ಸೋಲಿನಿಂದ ಕೆಲವರು ದುಃಖಿತರಾಗಿದ್ದಾರೆ. ಕೆಲವರಿಗೆ ನನ್ನ ಸೋಲು ಖುಷಿ ತಂದಿದೆ. ಇಲ್ಲಿ ಕಾಂಗ್ರೆಸ್ ಶಕ್ತಿಯನ್ನು ಯಾರಿಂದಲೂ ಕುಂದಿಸಲು ಆಗುವುದಿಲ್ಲ' ಎಂದು ವಿರೋಧಿಗಳಿಗೆ ಚಾಟಿ ಬೀಸಿದರು.

ವಿಧಾನ ಪರಿಷತ್ ಸದಸ್ಯ ಎಸ್. ರವಿ ಮಾತನಾಡಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ತೀರ್ಮಾನವೇ ಅಂತಿಮ. ಸೋಲು ಒಪ್ಪಿಕೊಳ್ಳಬೇಕಿದೆ' ಎಂದರು.

ರೂರಲ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಎಚ್.ಕೆ.ಶ್ರೀಕಂಠ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಜಯ್ ದೇವ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಸಪ್ಪ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೃಷ್ಣಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷ ದಿಲೀಪ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪುರುಷೋತ್ತಮ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಮುನಿ ಹುಚ್ಚೇಗೌಡ ಸೇರಿದಂತೆ ಅನೇಕರು ಮುಖಂಡರು ಇದ್ದರು.



ಡಾ.ದೇವರಕೊಂಡರೆಡ್ಡಿ75 ಅಭಿನಂದನ ಸಮಿತಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸನ ತಜ್ಞ ದೇವರಕೊಂಡಾರೆಡ್ಡಿ ಮತ್ತು ರತ್ನಮ್ಮ ದಂಪತಿಯನ್ನು ಸನ್ಮಾನಿಸಲಾಯಿತು. (ಎಡದಿಂದ) ಇತಿಹಾಸ ಸಂಶೋಧಕ ಲಕ್ಷ್ಮಣ್ ತೆಲಗಾವಿ, ದಿ ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ.ಪರಮಶಿವಮೂರ್ತಿ, ದೇವರಕೊಂಡಾರೆಡ್ಡಿ ಮಗಳು ರೂಪವತಿ ಮತ್ತು ಸಂಧ್ಯಾ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ



ನಗರದಲ್ಲಿ ಭಾನುವಾರ ಮಧ್ಯಾಹ್ನ ಮಳೆ ಸುರಿದಾಗ, ಜನರು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ನಿಂತಿದ್ದರು —ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ನಗರದಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಯಿತು. ಕೆಲವು ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆ ಸರಿ ಇಲ್ಲದ ಕಾರಣ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಡಕುಂಟಾಯಿತು.

ಬಾಗಲೂರು ಕ್ರಾಸ್ ಬಳಿ ವಿದ್ಯುತ್ ಕಂಬ ಬಿದ್ದಿರುವುರಿಂದ ಬಾಗಲೂರು ಕಡೆ ಹೋಗುವ ಮಾರ್ಗದಲ್ಲಿ ವಾಹನಗಳು ನಿಧಾನವಾಗಿ ಚಲಿಸಿದವು. ಹೆಣ್ಣೂರು ರಸ್ತೆ ಗೆದ್ದಲಹಳ್ಳಿ ರೈಲ್ವೆ ಕೆಳಸೇತುವೆ ಬಳಿ ರಸ್ತೆ ಹದಗೆಟ್ಟಿದ್ದು, ಮಳೆ ಬಂದಾಗ ವಾಹನಗಳು ಚಲಿಸುವುದು ಕಷ್ಟವಾಯಿತು.

ಎಂ.ಜಿ. ರಸ್ತೆ, ಕಬ್ಬನ್ ಪಾರ್ಕ್, ಆರ್.ಟಿ. ನಗರ, ಕೆಂಗೇರಿ, ರಾಜಾಜಿನಗರ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ ಸಹಿತ ನಗರ ವಿವಿಧೆಡೆ ಮಧ್ಯಾಹ್ನ ಮಳೆ ಸುರಿಯಿತು.



ಭಾನುವಾರ ಸುರಿದ ಮಳೆಗೆ ಶಿವಾಜಿನಗರದ ವೀರಪಿಳ್ಳೈ ರಸ್ತೆಯಲ್ಲಿ ಭಾವಸಾರ ಕ್ಷತ್ರಿಯ ವಸತಿನಿಲಯದ ಬಳಿ ರಸ್ತೆ ಜಲಾವೃತಗೊಂಡಿತು

ಮಳೆ ಪ್ರಮಾಣ: ವಿದ್ಯಾಪೀಠ 2.5 ಸೆಂ.ಮೀ., ಕೆಂಗೇರಿ 2 ಸೆಂ.ಮೀ., ರಾಜರಾಜೇಶ್ವರಿ ನಗರ 1.8 ಸೆಂ.ಮೀ., ನಾಯಂಡಹಳ್ಳಿ 1,7 ಸೆಂ.ಮೀ., ಎಚ್. ಗೊಲ್ಲಹಳ್ಳಿ 1.7 ಸೆಂ.ಮೀ., ಹೆಮ್ಮಿಗೆಪುರ 1.6 ಸೆಂ.ಮೀ., ಹಂಪಿನಗರ 1,5 ಸೆಂ.ಮೀ., ಉತ್ತರಹಳ್ಳಿ 1.3 ಸೆಂ.ಮೀ., ಎಚ್‌ಎಎಲ್ ವಿಮಾನ ನಿಲ್ದಾಣ 1.3 ಸೆಂ.ಮೀ., ಮಾರುತಿ ಮಂದಿರ 1.2 ಸೆಂ.ಮೀ., ಬಿಲೇಖಹಳ್ಳಿ 1.2 ಸೆಂ.ಮೀ., ವನ್ನಾರ್‌ಪೇಟೆ 1,2 ಸೆಂ.ಮೀ., ಬಿಟಿಎಂ ಲೇಔಟ್ 1,2 ಸೆಂ.ಮೀ., ಬೊಮ್ಮನಹಳ್ಳಿ 1.1 ಸೆಂ.ಮೀ., ಕೋರಮಂಗಲ 1.1 ಸೆಂ.ಮೀ., ಪಟ್ಟಾಭಿರಾಮನಗರ 1.1 ಸೆಂ.ಮೀ., ವಿಶ್ವನಾಥ ನಾಗೇನಹಳ್ಳಿ 1.1 ಸೆಂ.ಮೀ., ಪುಟ್ಟೇನಹಳ್ಳಿ 1.1 ಸೆಂ.ಮೀ., ಮಾರತ್‌ಹಳ್ಳಿ 1.5 ಸೆಂ.ಮೀ. ಮಳೆಯಾಗಿದೆ.

ಧಗೆ ಮುಟ್ಟಿಸಿದ ಚುರುಕು; ಮಳೆ ಪ್ರೀತಿಯ ಹುರುಪು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಬೇಸಿಗೆಯಲ್ಲಿ ಎದುರಾದ ಜಲ ಕ್ಷಾಮಕ್ಕೆ ಬೇಸತ್ತ ಜನ ತಮ್ಮ ಮನೆಗಳಿಗೆ ಸ್ವಯಂಪ್ರೇರಿತರಾಗಿ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ. ಕಾನೂನು, ನಿಯಮಗಳಿಂದ ಸಾಧ್ಯವಾಗದ ಜಲ ಸಂರಕ್ಷಣಾ ಕಾರ್ಯವೊಂದನ್ನು ಈ ವರ್ಷದ ನಾಲ್ಕು ತಿಂಗಳ ಬಿರು ಬೇಸಿಗೆ ಮಾಡಿಸಿದೆ.

ಜಯನಗರದಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಮಳೆ ಸುಗ್ಗಿ ಕೇಂದ್ರದ ಮಾಹಿತಿ ಪ್ರಕಾರ ಕಳೆದ ಐದು ತಿಂಗಳಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಮಂದಿ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಂಡಿದ್ದಾರೆ. ತಜ್ಞರು, ಪ್ಲಂಬರ್‌ಗಳನ್ನು ಎಡತಾಕಿ ಕೊಳವೆ ಬಾವಿಗೆ ಜಲ ಮರುಪೂರಣ ಮಾಡಿಸಿದ್ದಾರೆ. ಅಪಾರ್ಟ್‌ಮೆಂಟ್ ನಿವಾಸಿಗಳು ಇಂಗುಬಾವಿಗಳು, ಭೂಗತ ತೊಟ್ಟಿಗಳನ್ನು ಮಾಡಿಸಿದ್ದಾರೆ. ಕೆಲವರು ಹಳೆಯ ತೆರೆದ ಬಾವಿಗಳನ್ನು ಪುನಶ್ಚೇತನಗೊಳಿಸಿದ್ದಾರೆ.

ಮಳೆ ನೀರು ಸಂಗ್ರಹ ವಿಧಾನ ಅಳವಡಿಕೆ ಬಗ್ಗೆ ಮಾಹಿತಿ ಪಡೆಯಲು ಕಳೆದ ನಾಲ್ಕು ತಿಂಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮಂದಿ ಈ ಕೇಂದ್ರಕ್ಕೆ (ಥೀಮ್ ಪಾರ್ಕ್) ಭೇಟಿ ನೀಡಿದ್ದಾರೆ.



ಫೆಬ್ರುವರಿ ಒಂದೇ ತಿಂಗಳಲ್ಲಿ ಭೇಟಿ ನೀಡಿರುವವರ ಸಂಖ್ಯೆ 1,600ಕ್ಕೂ ಹೆಚ್ಚು. ಅವರೆಲ್ಲರೂ ಮಳೆನೀರು ಸಂಗ್ರಹದ ಮಾದರಿ ವೀಕ್ಷಿಸಿ, ಅದನ್ನು ಅಳವಡಿಸುವ ತಜ್ಞರ ಸಂಪರ್ಕ ಸಂಖ್ಯೆ ಪಡೆದು, ಅನುಷ್ಠಾನಕ್ಕೂ ಮುಂದಾಗಿದ್ದಾರೆ.

ಅಪಾರ್ಟ್‌ಮೆಂಟ್‌ಗಳೇ ಹೆಚ್ಚು: ಮಳೆ ನೀರು ಹಿಡಿಯಲು ಮತ್ತು ಇಂಗಿಸಲು ಆಸಕ್ತಿ ತೋರಿದವರಲ್ಲಿ ಅಪಾರ್ಟ್‌ಮೆಂಟ್ ನಿವಾಸಿಗಳೇ ಹೆಚ್ಚು ಎನ್ನುವುದು ಈ ವಿಧಾನ ಅಳವಡಿಸುವ ತಜ್ಞರ ಅಭಿಪ್ರಾಯ. 'ಫೆಬ್ರುವರಿಯಿಂದ ಈಚೆಗೆ ಸುಮಾರು 300 ಕರೆಗಳು ಬಂದಿವೆ. ಮೂರು ತಿಂಗಳಲ್ಲಿ 80 ಇಂಗುಬಾವಿಗಳು, 50ಕ್ಕೂ ಹೆಚ್ಚು ಮನೆ, ಅಪಾರ್ಟ್‌ಮೆಂಟ್‌ಗಳಿಗೆ ಬೋರ್‌ವೆಲ್ ರೀಚಾರ್ಜ್ ವಿಧಾನ ಅಳವಡಿಸಿದ್ದೇನೆ. ನೂರಕ್ಕೂ ಹೆಚ್ಚು ಮಂದಿಯಿಂದ ಬೇಡಿಕೆ ಬಂದಿದೆ' ಎಂದು ಡ್ರಾಪ್ ಬೈ ಡ್ರಾಪ್ ಸಂಸ್ಥೆಯ ಅಚ್ಚನಹಳ್ಳಿ ಸುಚೇತನ ಹೇಳಿದರು.

'ಸುಮಾರು ಐವತ್ತಕ್ಕೂ ಹೆಚ್ಚು ಕರೆ ಬಂದಿದ್ದವು. 10–12 ಮನೆ, ಅಪಾರ್ಟ್‌ಮೆಂಟ್‌ಗಳಿಗೆ ಅಳವಡಿಸಿದ್ದೇನೆ' ಎಂದು ಚಿತ್ರದುರ್ಗದ ಜಲತಜ್ಞ ಎನ್. ದೇವರಾಜರೆಡ್ಡಿ ಹೇಳಿದರು.

ಇಂಗು ಬಾವಿಗಳಿಗೆ ಬೇಡಿಕೆ: ಮಳೆ ನೀರು ಸಂಗ್ರಹಿಸುವ ಜೊತೆಗೆ, ಹೆಚ್ಚಾದ ನೀರನ್ನು ಭೂಮಿಗೆ ಇಂಗಿಸಲು ಆಸಕ್ತಿ ತೋರುತ್ತಿರುವವರೇ ಹೆಚ್ಚು. 'ಮೂರ್ನಾಲ್ಕು ತಿಂಗಳಲ್ಲಿ ಬೆಂಗಳೂರು ಸುತ್ತ 200ಕ್ಕೂ ಹೆಚ್ಚು ಬಾವಿಗಳ ಕೆಲಸ ಮಾಡಿದ್ದೇವೆ. ಇದರಲ್ಲಿ ಇಂಗುಬಾವಿಗಳು, ತೆರೆದ ಬಾವಿಗಳ ಪುನಶ್ಚೇತನವೂ ಸೇರಿದೆ. ಜಲಮಂಡಳಿ, ಬಯೋಮ್ ಸಂಸ್ಥೆ ಸೇರಿದಂತೆ ಬೇರೆ ಬೇರೆ ಕಡೆಗಳಿಂದ ಮಾಹಿತಿ ಪಡೆದು ಜನರು ಕರೆ ಮಾಡಿದ್ದಾರೆ' ಎನ್ನುತ್ತಾರೆ ಇಂಗುಬಾವಿ ತೋಡುವ ಆನೇಕಲ್‌ನ ಶ್ರೀನಿವಾಸ್.

ಇಷ್ಟೆಲ್ಲ ಆಸಕ್ತಿ ತೋರಿದವರಲ್ಲಿ ಅನೇಕರಿಗೆ ಜಲಮರುಪೂರಣ ಅಳವಡಿಕೆಗೆ ಕೆಲವು ತಾಂತ್ರಿಕ ಹಾಗೂ ತಾಂತ್ರಿಕೇತರ ಸಮಸ್ಯೆಗಳೂ ಇವೆ. ಅವುಗಳಿಗೆ ಸೂಕ್ತ ಪರಿಹಾರ ಲಭ್ಯವಾದರೆ, ಇನ್ನಷ್ಟು ಮಂದಿ ಸ್ವಯಂ ಪ್ರೇರಿತರಾಗಿ ಮಳೆ ನೀರು ಸಂಗ್ರಹಕ್ಕೆ ಮುಂದಾಗಬಹುದು ಎಂಬುದು ದೇವರಾಜರೆಡ್ಡಿಯವರ ಅಭಿಪ್ರಾಯ.

ಮಳೆ ನೀರು ಸಂಗ್ರಹ ವಿಧಾನ ಅಳವಡಿಕೆ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಮಾಹಿತಿಗಳು, ಮಾದರಿಗಳು, ಪ್ಲಂಬರ್ ದೂರವಾಣಿ ಸಂಖ್ಯೆಗಳು ಜಯನಗರದ ಥೀಮ್ ಪಾರ್ಕ್‌ನಲ್ಲಿ ಲಭ್ಯವಿವೆ. ಕೇಂದ್ರವನ್ನು (ಸಂಪರ್ಕ ಸಂಖ್ಯೆ: 080–26653666) ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎನ್ನುತ್ತಾರೆ ಜಲಮಂಡಳಿ ಅಧಿಕಾರಿಗಳು.

ಕಾರ್ಯಾಗಾರಗಳು ಹೆಚ್ಚಾಗಲಿ...

ಥೀಮ್ ಪಾರ್ಕ್‌ನಲ್ಲಿ ಮಳೆ ನೀರು ಸಂಗ್ರಹ ಕುರಿತು ಹೆಚ್ಚು ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಇದಕ್ಕೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ, ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಫೆಡರೇಷನ್ ಸದಸ್ಯರನ್ನು ಆಹ್ವಾನಿಸಬೇಕು. ಬಿಬಿಎಂಪಿಯವರು ವಾರ್ಡ್ ಸಮಿತಿಗಳನ್ನು ಬಳಸಿಕೊಂಡು ವಾರ್ಡ್ ಮಟ್ಟದಲ್ಲಿ ಇಂಥ ಕಾರ್ಯಕ್ರಮಗಳನ್ನು ಆಯೋಜಿಸಬಹುದು.

ಈ ಬಾರಿ ನೀರಿನ ಸಮಸ್ಯೆ ಹೆಚ್ಚಾಗಿ ಕಂಡುಬಂದಿದ್ದು ನಗರದ ಹೊರವಲಯದ ಬಡಾವಣೆಗಳಲ್ಲಿ. ಆ ಭಾಗದಲ್ಲಿರುವ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ನವರಿಗೆ ಈ ಬಗ್ಗೆ ಅರಿವು ಮೂಡಿಸಿ, ಕಡ್ಡಾಯವಾಗಿ ಇಂಗು ಬಾವಿ, ಕೊಳವೆಬಾವಿ ಮರುಪೂರಣದಂತಹ ಪದ್ಧತಿ ಅಳವಡಿಸಿಕೊಳ್ಳುವಂತೆ ಮಾಡಬೇಕು.

ಎಸ್. ವಿಶ್ವನಾಥ್, ಬಯೋಮ್ ರಿಸರ್ಚ್ ಸೆಂಟರ್

ಥೀಮ್ ಪಾರ್ಕ್‌ನಿಂದ ಮಾಹಿತಿ ಪಡೆದು, ಅಪಾರ್ಟ್‌ಮೆಂಟ್‌ನಲ್ಲಿ ಇಂಗು ಗುಂಡಿ ಮಾಡಿಸಿದ್ದೇವೆ. ಎರಡ್ಮೂರು ದಿನ ಮಳೆ ಬಂತು. ನೀರು ಭೂಮಿಗೆ ಇಂಗುತ್ತಿದೆ.
ಅಶೋಕ ಚಕ್ರವರ್ತಿ
ಲೇಕ್ ವ್ಯೂ ಅಪಾರ್ಟ್‌ಮೆಂಟ್, ಯಡಿಯೂರು ಲೇಕ್, ಜಯನಗರ.

ಮೇ ತಿಂಗಳಲ್ಲಿ ಕೊಳವೆಬಾವಿ ರೀಚಾರ್ಜ್ ಮಾಡಿಸಿದೆವು. ಎರಡು ಮಳೆಗೆ ಬೋರ್‌ವೆಲ್‌ನಲ್ಲಿ ಒಂದಿಷ್ಟು ನೀರುಬಂದಿದೆ. ಅಕ್ಕಪಕ್ಕದ ಮನೆಯವರಿಗೂ ಇದೇ ವಿಧಾನ ಅನುಸರಿಸಲು ಹೇಳುತ್ತಿದ್ದೇವೆ.
ಕೌಶಲ್ಯ ನಾಗೇಶ್
ಅದಿತಿ ರೆಸಿಡೆನ್ಸಿ, ರಾಜರಾಜೇಶ್ವರಿನಗರ

ಬಾಂಗ್ಲಾ ಸಂಸದನ ಹತ್ಯೆ: ಮೂಳೆ ಪತ್ತೆ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ಸಂಸದ ಅನ್ವರುಲ್ ಅಜೀಮ್ ಅನರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಸಿಐಡಿ ಅಧಿಕಾರಿಗಳು ಭಾನುವಾರ ದಕ್ಷಿಣ 24 ಪರಗಣ ಜಿಲ್ಲೆಯ ಕಾಲುವೆಯೊಂದರ ಬದಿಯಲ್ಲಿ ಮನುಷ್ಯ ಮೂಳೆಗಳನ್ನು ವಶಕ್ಕೆ ಪಡೆದಿದ್ದಾರೆ.

ನೇಪಾಳ ಪೊಲೀಸರು ಸೆರೆ ಹಿಡಿದು ನಂತರ ಭಾರತದ ವಶಕ್ಕೆ ನೀಡಿದ ಪ್ರಕರಣದ ಪ್ರಮುಖ ಶಂಕಿತ ಮೊಹಮ್ಮದ್ ಸಿಯಾಮ್ ಹುಸೇನ್ ವಿಚಾರಣೆಯ ನಂತರ ಪೊಲೀಸರು ಕೃಷ್ಣಮಟಿ ಗ್ರಾಮದ ಬಾಗ್ಜೋಲಾ ಕಾಲುವೆಯ ಬಳಿ ಅಸ್ಥಿಪಂಜರ ವಶಕ್ಕೆ ಪಡೆದರು ಎಂದು ಹೇಳಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೊಯ್‌ಗಂಜ್ ಬಜಾರ್ ಪೊಲೀಸ್ ಠಾಣೆಯಲ್ಲಿ ಸ್ವಯಂಪ್ರೇರಿತ ದೂರು ದಾಖಲಾಗಿದೆ. ಕಾಲುವೆ ಬಳಿ ವಶಕ್ಕೆ ಪಡೆದ ಮೂಳೆಗಳು ಮನುಷ್ಯರದ್ದೇ ಎಂದು ವೈದ್ಯಕೀಯ ಅಧಿಕಾರಿಗಳು ಹಾಗೂ ವಿಧಿವಿಜ್ಞಾನ ತಜ್ಞರು ಹೇಳಿದ್ದಾರೆ. ಮೃತದೇಹದ ಉಳಿದ ಭಾಗಗಳಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಮುಂದಿನ ವಾರ ಮೃತ ಸಂಸದರ ಮಗಳು ಕೋಲ್ಕತ್ತಕ್ಕೆ ಬರಲಿದ್ದು, ಮೂಳೆಗಳ ಡಿಎನ್‌ಎ ಪರೀಕ್ಷೆಗೆ ನೆರವಾಗಲಿದ್ದಾರೆ' ಎಂದು ತಿಳಿಸಿದ್ದಾರೆ.

'ಚಿಕಿತ್ಸಕ ಗುಣದ ಬೆಸಗರಹಳ್ಳಿ ರಾಮಣ್ಣ'

ಮಂಡ್ಯ: 'ಡಾ.ಬೆಸಗರಹಳ್ಳಿ ರಾಮಣ್ಣ ರಚಿಸಿರುವ ಕಥೆಗಳು ತಾಯ್ತನದ ಭಾವದಿಂದ ಕೂಡಿವೆ. ವೈದ್ಯರಾಗಿದ್ದ ಅವರು ರೋಗಗ್ರಸ್ತ ಸಮಾಜದ ಚಿಕಿತ್ಸಕರಾಗಿ ಸಾಹಿತ್ಯದ ಶಸ್ತ್ರ ಹಿಡಿದು ತಮ್ಮ ಸಾತ್ವಿಕ ಸಿಟ್ಟಿನ ಮೂಲಕ ಅವ್ಯವಸ್ಥೆಯ ವಿರುದ್ಧ ಗುಡುಗಿದ್ದರು' ಎಂದು ಸಂಸ್ಕೃತಿ ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 2023ನೇ ಸಾಲಿನ ಡಾ. ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ 'ಒರೆಗಲ್ಲು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಸಗರಹಳ್ಳಿ ರಾಮಣ್ಣ ಅವರ ಕಿರುಚಿತ್ರಗಳಿಗೆ ಬೇಕಾದ ಸಾಕಷ್ಟು ಸರಕುಗಳಿವೆ. ಅವುಗಳನ್ನು ಚಿತ್ರದ ರೂಪದಲ್ಲಿ ಹೊರತರುವ ಕೆಲಸ ಇನ್ನಾದರೂ ಆಗಲಿ' ಎಂದರು.



ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ದಾರಿ ತಪ್ಪಿಸುವ ಗಿಡ' ಕೃತಿಗಾಗಿ ಸ್ವಾಮಿ ಪೊನ್ನಾಚಿ ಅವರಿಗೆ 'ಡಾ.ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿ'ಯನ್ನು ಲೇಖಕ ಕಾಳೇಗೌಡ ನಾಗವಾರ ಪ್ರದಾನ ಮಾಡಿದರು

'ಎಚ್.ಎನ್ ಆದರ್ಶ ಮೈಗೂಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ ಬದುಕಿನ ಆದರ್ಶ ಮತ್ತು ವೈಚಾರಿಕತೆಯ ಪ್ರಜ್ಞೆಯನ್ನು ಯುವಜನರು ಮೈಗೂಡಿಸಿಕೊಳ್ಳಬೇಕು' ಎಂದು ಶಿಕ್ಷಣ ತಜ್ಞ ಕೆ.ಪಿ. ಪುತ್ತೂರಾಯ ತಿಳಿಸಿದರು.

ಜಯನಗರದ ನ್ಯಾಷನಲ್ ಕಾಲೇಜು ನಗರದಲ್ಲಿ ತ್ತೀಚೆಗೆ ಹಮ್ಮಿಕೊಂಡ ಎಚ್. ನರಸಿಂಹಯ್ಯ ಅವರ 105ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ವಿದೇಶದಲ್ಲಿ ಉನ್ನತ ವ್ಯಾಸಂಗ, ಉನ್ನತ ಹುದ್ದೆಗಳು, ಅಗಣಿತ ಗೌರವಗಳು ಅರಿಸಿ ಬಂದರೂ ನರಸಿಂಹಯ್ಯ ಅವರು ಬದುಕಿನುದ್ದಕ್ಕೂ ಆಡಂಬರ ತೋರಲಿಲ್ಲ. ಗಾಂಧಿ ಮಾರ್ಗದ ಸರಳ ಬದುಕು ಮೈಗೂಡಿಸಿಕೊಂಡ ಅವರು, ಇಡೀ ಜೀವನವನ್ನು ಶಿಕ್ಷಣಕ್ಕಾಗಿ ಮೀಸಲಿಡುವ ಮೂಲಕ ಸಂತರ ರೀತಿಯಲ್ಲಿ ಬದುಕಿದರು. ವಿಜ್ಞಾನ ಮತ್ತು ವೈಜ್ಞಾನಿಕ ವಿಧಾನದಲ್ಲಿ ದೃಢವಾದ ನಂಬಿಕೆಯನ್ನು ಹೊಂದಿದ್ದ ಅವರು, ಮೌಢ್ಯದ ವಿರುದ್ಧ ಸತತ ಹೋರಾಡಿದರು. ಅವರ ಜೀವನ ಎಲ್ಲರಿಗೂ ಆದರ್ಶಪ್ರಾಯವಾಗಿದ್ದು, ಅವರು ಪ್ರತಿಪಾದಿಸಿದ ಸರಳ ಜೀವನ ಹಾಗೂ ನಿಸ್ವಾರ್ಥ ಬದುಕಿನ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷ ಎಚ್.ಎನ್. ಸುಬ್ರಹ್ಮಣ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿಗಳಾದ ವಿ. ವೆಂಕಟಶಿವಾ ರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿ ಸುಧಾಕರ್ ಇಸ್ತೂರಿ, ಖಜಾಂಚಿ ತಲ್ಲಮ್ ಆರ್. ದ್ವಾರಕಾನಾಥ್ ಪಾಲ್ಗೊಂಡಿದ್ದರು.

'ಪ್ರೊ.ಬಿಕೆ–88' ಸಂಘರ್ಷ ದಿನ ಕಾರ್ಯಕ್ರಮದಲ್ಲಿ ಸಚಿವ ಸತೀಶ ಜಾರಕಿಹೊಳಿ ಆಶಯ

'ಆಸ್ಪತ್ರೆ ನಿರ್ಮಾಣ ಆದ್ಯತೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಬದಲಾವಣೆ ಬಗ್ಗೆ ಮಾತನಾಡಿದವರಿಗೆ ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ದೇಶದ ಜನರು ಎಚ್ಚರಿಕೆಯ ಸಂದೇಶ ನೀಡಿದ್ದಾರೆ. ಇನ್ನಾದರೂ ಸಂವಿಧಾನ ಬದಲಾವಣೆಯನ್ನು ಕೈ ಬಿಟ್ಟು, ದೇಶದಲ್ಲಿ ಉತ್ತಮ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಲಿ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಪ್ರೊ. ಬಿಕೆ–88' ಸಂಘರ್ಷ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಚುನಾವಣೆಯಲ್ಲಿ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಎಚ್ಚೆತ್ತುಕೊಂಡು ಮತ ಹಾಕಿದ್ದರಿಂದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತಿನಿಂದ ಅಸ್ಸಾಂವರೆಗೆ ಸಂವಿಧಾನದ ಬದಲಾವಣೆ ಹೇಳಿಕೆಯ ಬಿಸಿ ತಟ್ಟಿದೆ. ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಿದವರೇ ಈಗ ಸಂವಿಧಾನದ ಪ್ರತಿಗೆ ನಮಸ್ಕರಿಸಿದ್ದಾರೆ. ಹೀಗಾಗಿ, ಮುಂದಿನ ಐದು ವರ್ಷಗಳಲ್ಲಿ ಸಂವಿಧಾನಕ್ಕೆ ಅಪಾಯವಿಲ್ಲ ಎನ್ನುವುದು ನನ್ನ ಭಾವನೆ' ಎಂದರು.

'ನೂತನ ಸರ್ಕಾರವು ಸಮಾಜದಲ್ಲಿ ಸಮಾನತೆಯನ್ನು ತರುವ ಕೆಲಸ ಮಾಡಬೇಕು. ಯಾವುದೇ ಧರ್ಮವನ್ನು ದ್ವೇಷಿಸಬಾರದು. ಹಿಂದುಳಿದ, ದಲಿತ ಸಮುದಾಯಕ್ಕೆ ಮತ್ತಷ್ಟು ಸವಲತ್ತುಗಳನ್ನು ನೀಡಬೇಕಿದೆ. ಹಳ್ಳಿಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸಬೇಕಾಗಿದೆ. ಇಂಗ್ಲಿಷ್ ಶಾಲೆಗಳನ್ನು ತೆರೆಯಬೇಕಾಗಿದೆ. ಆ ನಿಟ್ಟಿನಲ್ಲಿ ಕೂಡ ನಮ್ಮ ಹೋರಾಟ ಇರಲಿದೆ' ಎಂದು ಹೇಳಿದರು.

'ದಲಿತ ಸಂಘರ್ಷ ಸಮಿತಿ ಕಟ್ಟಿದ ಪ್ರೊ.ಬಿ.ಕೃಷ್ಣಪ್ಪ ಅವರು ತುಳಿತಕ್ಕೊಳಗಾದವರಿಗೆ ಶಕ್ತಿ ತುಂಬಿದರು. ಅಂಬೇಡ್ಕರ್ ವಾದವನ್ನು ಹಳ್ಳಿ ಹಳ್ಳಿಗೂ ತಲುಪಿಸಿದರು' ಎಂದು ಸ್ಮರಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, 'ಜೆಡಿಎಸ್ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ಧರ್ಮ ಧ್ರುವೀಕರಣಕ್ಕೆ ಕಾರಣವಾಗಿದೆ' ಎಂದು ವಾಗ್ದಾಳಿ ನಡೆಸಿದರು.

ಮುಖ್ಯಾಂಶಗಳು

- ಸಂವಿಧಾನ ಬದಲಿಸುವ ಮಾತನಾಡಿದವರಿಗೆ ಚುನಾವಣೆಯಲ್ಲಿ ತಕ್ಕ ಪಾಠ
- ಹೊಸ ಸರ್ಕಾರವು ಸಮಾಜದಲ್ಲಿ ಸಮಾನತೆ ತರಲಿ: ಸಚಿವ ಜಾರಕಿಹೊಳಿ



ಕಾರ್ಯಕ್ರಮದಲ್ಲಿ (ಎಡದಿಂದ) ವಕೀಲ ಅನಂತನಾಯ್ಕ ಎನ್., ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್‌ನ ಇಂದಿರಾ ಕೃಷ್ಣಪ್ಪ, ರುದ್ರಪ್ಪ ಹನಗವಾಡಿ, ಸತೀಶ್ ಜಾರಕಿಹೊಳಿ, ಮಾವಳ್ಳಿ ಶಂಕರ್ ಮತ್ತು ಜೊತಪ್ಪ ಹೊಸಹಳ್ಳಿ ಅವರು ಅಂಬೇಡ್ಕರ್ ಪುತ್ಥಳಿ ಮತ್ತು ಪ್ರೊ.ಬಿ. ಕೃಷ್ಣಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಪ್ರಜಾಪ್ರಭುತ್ವದ ಉಳಿವಿಗೆ ಚಳವಳಿ ರೂಪಿಸಿ: ಕೋಡಿಹಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವ ವಕ್ರವಾಗಿ ಬೆಳೆದಿದ್ದು, ಹಣ ಇರುವ ಮತ್ತು ಜನ ಸೇರಿಸುವ ಶಕ್ತಿ ಇರುವವರಷ್ಟೇ ಜನಪ್ರತಿನಿಧಿಗಳಾಗುತ್ತಿದ್ದಾರೆ. ಇದನ್ನು ಸರಿಪಡಿಸಲು ರೈತ ಸಂಘಗಳು ಮತ್ತು ದಲಿತ ಸಂಘರ್ಷ ಸಮಿತಿಗಳು ಒಂದಾಗಿ ಚಳವಳಿ ರೂಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಸಲಹೆ ನೀಡಿದರು.

ದಸಂಸ–50, ಪ್ರೊ. ಕೃಷ್ಣಪ್ಪವರ 86ನೇಜನ್ಮದಿನದಅಂಗವಾಗಿರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಕರ್ನಾಟಕ (ಆರ್‌ಪಿಐ–ಕೆ), ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ಭಾನುವಾರ ಹಮ್ಮಿಕೊಂಡಿದ್ದ 'ಸ್ವಾಭಿಮಾನಿ ಚಳವಳಿ ಮತ್ತು ಅಂಬೇಡ್ಕರ್ ಸಿದ್ಧಾಂತ–ಸಮಾಲೋಚನಾ ಸಮಾವೇಶ'ದಲ್ಲಿ ಅವರು ಮಾತನಾಡಿದರು.

ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘ ಒಟ್ಟಿಗೆ ಸಾಗುತ್ತಿದ್ದಾಗ ಚಳವಳಿಗಳು ತೀವ್ರ ವೇಗದಲ್ಲಿದ್ದವು. ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿಯಲು ಹತ್ತಿರದವರೆಗೆ ಸಾಗಿದ್ದವು. ಆಗ ತೆಗೆದುಕೊಂಡ ತಪ್ಪು ನಿರ್ಧಾರಗಳಿಂದಾಗಿ ಅಧಿಕಾರಕ್ಕೆ ಬರಲಾಗಲಿಲ್ಲ. ಆನಂತರ ಡಿಎಸ್‌ಎಸ್ ಮತ್ತು ರೈತ ಸಂಘಗಳು ಒಗ್ಗಟ್ಟು ಕಳೆದುಕೊಂಡು ದೂರವಾದವು. ಚಳವಳಿಯು ಕಾವು ಕಳೆದುಕೊಂಡಿತು ಎಂದರು.

'ಈಗ ನ್ಯಾಯ, ನೀತಿ, ಸತ್ಯದ ಹೋರಾಟದ ಮೂಲಕ ರಾಜಕೀಯ ಅಧಿಕಾರ ಹಿಡಿಯಲು ಸಾಧ್ಯವೇ ಇಲ್ಲದ ಹಾಗೆ ಚುನಾವಣಾ ರಾಜಕಾರಣವನ್ನು ಪಕ್ಷಗಳು ಕಲುಷಿತಗೊಳಿಸಿವೆ. ಇದನ್ನು ಸರಿಪಡಿಸಲು ಚಳವಳಿಗಾರರು ಒಂದಾಗಬೇಕು' ಎಂದರು.

ಎಂಎಸ್‌ಪಿಯನ್ನು ಕೇಂದ್ರ ಸರ್ಕಾರ ಜಾರಿ ಮಾಡದಿದ್ದರೆ ರೈತರು ಬದುಕುವುದು ಕಷ್ಟ. ಹಾಗೆಯೇ ರಾಜ್ಯದಲ್ಲಿ ಹಿಂದೆ ಬಿಜೆಪಿ ಸರ್ಕಾರ ಕೃಷಿ ಕಾಯ್ದೆಗೆ ತಿದ್ದುಪಡಿ ಮಾಡಿದ್ದನ್ನು ಕಾಂಗ್ರೆಸ್ ಸರ್ಕಾರ ಇಲ್ಲಿಯವರೆಗೆ ಸರಿಪಡಿಸಿಲ್ಲ. ಈ ಎರಡೂ ವಿಚಾರಗಳನ್ನು ಇಟ್ಟುಕೊಂಡು ಬಸವಕಲ್ಯಾಣದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು ಎಂದರು.

ಆರ್‌ಪಿಐ–ಕೆ ಅಧ್ಯಕ್ಷ ಆರ್. ಮೋಹನ ರಾಜು, ರಾಜು ಎಂ. ತಳವಾರ್, ಶೇಖರ್ ಹಾವಂಜೆ, ಸ್ವಪ್ನ ಮೋಹನ್, ಕೆ.ಎಂ. ಶ್ರೀನಿವಾಸ್, ಬಸವರಾಜ್ ಕೌತಾಲ್ ಭಾಗವಹಿಸಿದ್ದರು.





1. ಬೆಂಗಳೂರು–ಮಂಗಳೂರು ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ –75ರ ಶಿರಾಡಿ ಘಾಟ್‌ನಲ್ಲಿ ಮರಗಳು ರಸ್ತೆಗೆ ಉರುಳಿವೆ 2. ಮುನ್ನೋಳ್ಳಿ ಗ್ರಾಮದ ಗಂಗಮ್ಮನ ಕೆರೆಯು ಮುಂಗಾರು ಮಳೆಗೆ ಸಂಪೂರ್ಣ ಭರ್ತಿಯಾಗಿರುವ ದೃಶ್ಯ 3. ಕರಾವಳಿಯಲ್ಲಿ ಮುಂಗಾರು ಚುರುಕುಗೊಂಡಿದ್ದು,ಭಾನುವಾರ ಮಂಗಳೂರಿನಲ್ಲಿ ಸುರಿಯುತ್ತಿದ್ದ ಮಳೆಯಲ್ಲಿ ವ್ಯಕ್ತಿಯೊಬ್ಬರು ರಸ್ತೆ ದಾಟಿದರು – ಪ್ರಜಾವಾಣಿ ಚಿತ್ರಗಳು

ಮುಳುಗಡೆಯಾಗಿದ್ದ ಸೇತುವೆ ದಾಟುತ್ತಿದ್ದಾಗ ಅವಘಡ • ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬಿರುಸಿನ ಮಳೆ

ನದಿಗೆ ಬಿದ್ದ ಟ್ರ್ಯಾಕ್ಟರ್: 9 ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮೂಡಲಗಿ(ಬೆಳಗಾವಿ ಜಿಲ್ಲೆ): ಸತತ ಮಳೆಯಿಂದಾಗಿ ತಾಲ್ಲೂಕಿನ ಅವರಾದಿ ಸೇತುವೆ ಮುಳುಗಡೆಯಾಗಿದೆ. ಅಪಾಯದ ಮುನ್ಸೂಚನೆ ಮೀರಿ, ಭಾನುವಾರ ಬೆಳಿಗ್ಗೆ ಈ ಸೇತುವೆ ದಾಟುತ್ತಿದ್ದಾಗ ಟ್ರ್ಯಾಕ್ಟರ್ ಮಗುಚಿ ನದಿಗೆ ಬಿದ್ದಿದೆ.

ಈ ವೇಳೆ, ಘಟಪ್ರಭಾ ನದಿ ನೀರಿನ ಸೆಳವಿಗೆ ಸಿಕ್ಕು ಮುಳುಗುತ್ತಿದ್ದ 10 ಜನರ ಪೈಕಿ 9 ಮಂದಿ ಈಜಿ ದಡ ಸೇರಿದ್ದಾರೆ. ಮತ್ತೊಬ್ಬರಿಗಾಗಿ ಗೋಕಾಕದ ಅಗ್ನಿಶಾಮಕ ಠಾಣೆ ಹಾಗೂ ಎಸ್‌ಡಿಆರ್‌ಎಫ್ ತಂಡದವರು ಕಾರ್ಯಾಚರಣೆ ನಡೆಸಿದ್ದಾರೆ.

‘ಹೆಸ್ಕಾಂ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವ ಪಶ್ಚಿಮ ಬಂಗಾಳ ಮೂಲದ ಕಾರ್ಮಿಕರು, ಎರಡು ಟ್ರ್ಯಾಕ್ಟರ್‌ಗಳಲ್ಲಿ ಯಾದವಾಡದಿಂದ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರಕ್ಕೆ ಹೋಗುತ್ತಿದ್ದರು. ಸ್ಥಳೀಯರು ಒಂದು ಟ್ರ್ಯಾಕ್ಟರ್ ವಾಪಸ್ ಕಳುಹಿಸಿದ್ದರು. ಇನ್ನೊಂದು ಟ್ರ್ಯಾಕ್ಟರ್‌ನವರು ಅಪಾಯದ ಮುನ್ಸೂಚನೆ ಮೀರಿಯೂ ಸೇತುವೆ ದಾಟುತ್ತಿದ್ದಾಗ ಅವಘಡ ಸಂಭವಿಸಿದೆ’ ಎಂದು ಕುಲಗೋಡ ಪಿಎಸ್‌ಐ ಬಿ.ಆನಂದ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಸೇತುವೆ ಮುಳುಗಡೆಯಾಗಿ ನಾಲ್ಕು ದಿನಗಳಾಯಿತು. ಸಂಚಾರ ನಿರ್ಬಂಧಕ್ಕಾಗಿ ಬ್ಯಾರಿಕೇಡ್ ಅಳವಡಿಸಿದ್ದೆವು. ಆದರೂ, ಕೆಲವರು ಅಪಾಯ ಲೆಕ್ಕಿಸದೆ ಸಂಚರಿಸುತ್ತಿರುವ ಕಾರಣ ಇಂಥ ಅವಘಡ ಸಂಭವಿಸುತ್ತಿದೆ’ ಎಂದು ಅವರು ಹೇಳಿದರು.

ಮರ ಬಿದ್ದು ಇಬ್ಬರ ಸಾವು: ಸತತ ಮಳೆಗೆ ಬೆಳಗಾವಿ ತಾಲ್ಲೂಕಿನ ಬೆಳಗುಂದಿ ಬಳಿ ಬಿಜಗರ್ಣಿ ರಸ್ತೆಯಲ್ಲಿ ಮರವೊಂದು ಬೈಕ್ ಮೇಲೆ ಉರುಳಿ ಬಿದ್ದು ಕರ್ಲೆ ಗ್ರಾಮದ ಯುವಕ ಸೋಮನಾಥ ಮುಚ್ಚಂಡಿಕರ(21) ಮತ್ತು ಬಾಲಕ ವಿಠ್ಠಲ ತಳವಾರ(16) ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಧ್ಯಾಹ್ನದವರೆಗೂ ಸುರಿದ ಮಳೆ ಸಂಜೆಯ ಬಳಿಕ ಬಿಡುವು ನೀಡಿತು. ಧಾರಾಕಾರ ಮಳೆಗೆ ದಾಂಡೇಲಿ ಪಟ್ಟಣದ ಚನ್ನಮ್ಮ ವೃತ್ತದ ಬಳಿ ಬೃಹತ್ ಮರವೊಂದು ಉರುಳಿ ಬಿದ್ದು ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿವೆ.

ವಿಜಯಪುರ ನಗರದಲ್ಲಿ ಶನಿವಾರ ತಡರಾತ್ರಿ ಹಲವೆಡೆ ಗುಡುಗು, ಸಿಡಿಲಿನೊಂದಿಗೆ ಉತ್ತಮ ಮಳೆಯಾಯಿತು. ಇಂಡಿ, ಸಿಂದಗಿ, ಚಡಚಣ ಹಾಗೂ ದೇವರಹಿಪ್ಪರಗಿ ತಾಲ್ಲೂಕಿನಲ್ಲಿ ಗುಡುಗು, ಮಿಂಚಿನ ಆರ್ಭಟದೊಂದಿಗೆ ಧಾರಾಕಾರ ಮಳೆ ಸುರಿದಿದೆ.

ಮಳೆ ಪ್ರಮಾಣ: ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ 16 ಸೆಂ.ಮೀ., ಭಾಗಮಂಡಲ, ಸಂಪಾಜೆ ಹೋಬಳಿ ವ್ಯಾಪ್ತಿಯಲ್ಲಿ 5 ಸೆಂ.ಮೀ., ಸೋಮವಾರಪೇಟೆ, ಪೊನ್ನಂಪೇಟೆ ತಾಲ್ಲೂಕಿನಲ್ಲಿ 7 ಸೆ.ಮೀ. ಹಾಗೂ ವಿರಾಜಪೇಟೆ, ಕುಶಾಲನಗರ ತಾಲ್ಲೂಕಿನಲ್ಲಿ 3 ಸೆಂ.ಮೀ. ಮಳೆಯಾಗಿದೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣವಿತ್ತು. ಭಾನುವಾರ ಬೆಳಿಗ್ಗೆ 11ರಿಂದ 12 ಗಂಟೆ ನಡುವೆ ಎಡೆಬಿಡದೆ ಬಿರುಸಿನ ಮಳೆ ಸುರಿಯಿತು. ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಸಮೀಪದ ಬೆಳಾಲುವಿನಲ್ಲಿ ಮರವೊಂದು ಧರೆಗುರುಳಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆಯಾಗಿದೆ. ಕೊಟ್ಟಿಗೆಹಾರ, ಜಾವಳಿ, ಕೆರೆಕಟ್ಟೆ, ಕಿಗ್ಗ, ಶೃಂಗೇರಿ, ಕೊಪ್ಪ, ಜಯಪುರ, ಬಾಳೆಹೊನ್ನೂರು ಸುತ್ತಮುತ್ತ ಧಾರಾಕಾರ ಮಳೆಯಾಗಿದೆ. ಬಯಲು ಸೀಮೆಯ ಕಡೂರು, ತರೀಕೆರೆ, ಅಜ್ಜಂಪುರ ಭಾಗದಲ್ಲೂ ಅಲ್ಲಲ್ಲಿ ಸಾಧಾರಣ ಮಳೆ ಸುರಿಯಿತು.

ಕಲಬುರಗಿ ವರದಿ: ನಗರ ಮತ್ತು ಗ್ರಾಮೀಣ ಭಾಗದಲ್ಲಿ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ 2ರ ಸುಮಾರಿಗೆ ಆರಂಭವಾದ ಮಳೆ ಕೆಲ ಹೊತ್ತು ಧಾರಾಕಾರವಾಗಿ ಬಿತ್ತು. ಆ ಬಳಿಕ ಜಿಟಿಜಿಟಿಯಾಗಿ ಸುರಿಯಿತು.

ಬೀದರ್, ಹುಮನಾಬಾದ್, ಚಿಟಗುಪ್ಪ, ಹುಲಸೂರ ಹಾಗೂ ಬಸವಕಲ್ಯಾಣದಲ್ಲಿ ಸಾಧಾರಣ ಮಳೆಯಾಗಿದೆ.ರಾಯಚೂರು ನಗರದಲ್ಲಿ ಸುಮಾರು 10 ನಿಮಿಷ ಮಳೆಯಾಗಿದೆ.



ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕಿನ ಅವರಾದಿಯಲ್ಲಿ ಭಾನುವಾರ ಟ್ರ್ಯಾಕ್ಟರ್ ಮಗುಚಿ ಬಿದ್ದು ನೀರುಪಾಲಾದ ವ್ಯಕ್ತಿಗಾಗಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ ಸಿಬ್ಬಂದಿ

ರಾಜ್ಯದ ಹಲವೆಡೆ ಐದು ದಿನ ಭಾರಿ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಐದು ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಹವಾಮಾನ ಇಲಾಖೆಯು ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಗದಗ ಹಾಗೂ ಕೊಪ್ಪಳ ಜಿಲ್ಲೆಗೆ ಸೋಮವಾರ ‘ರೆಡ್ ಅಲರ್ಟ್’ ಘೋಷಿಸಿದೆ.

ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಹಾವೇರಿ, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗೆ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಅತಿ ಭಾರಿ ಮಳೆಯಾಗುವ ಸಂಭವವಿದೆ. ರಾಯಚೂರು, ದಾವಣಗೆರೆ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಮಳೆ ಜತೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಕರಾವಳಿಯಲ್ಲಿ ಗಾಳಿಯು 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಿಕೊಳ್ಳಬಹುದು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರವು ಹಲವು ಜಿಲ್ಲೆಗಳಿಗೆ ಭಾರಿ ಮಳೆಯ ಅಲರ್ಟ್ ನೀಡಲಾಗಿದೆ. ಹಾವೇರಿ, ಕೊಪ್ಪಳ ಹಾಗೂ ಗದಗಕ್ಕೆ ‘ರೆಡ್ ಅಲರ್ಟ್’ ಘೋಷಿಸಲಾಗಿದೆ. 14ರವರೆಗೂ ರಾಜ್ಯದ ವಿವಿಧೆಡೆ ಭಾರಿ ಮಳೆ ಸಾಧ್ಯತೆಯಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

‘ಶಕ್ತಿ’ ಯೋಜನೆ ರದ್ದು ಮಾಡಲ್ಲ: ರಾಮಲಿಂಗಾರೆಡ್ಡಿ



ಬೆಂಗಳೂರು: ‘ಸಾರಿಗೆ ನಿಗಮಗಳಿಗೂ, ರಾಜ್ಯದ ಮಹಿಳೆಯರಿಗೂ ಶಕ್ತಿ ತಂದುಕೊಟ್ಟಿರುವ ಗ್ಯಾರಂಟಿ ಯೋಜನೆ ‘ಶಕ್ತಿ’ ರದ್ದುಪಡಿಸುವ ಪ್ರಶ್ನೆಯೇ ಇಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಲೋಕಸಭಾ ಚುನಾವಣೆ ನಂತರ ಗ್ಯಾರಂಟಿ ಯೋಜನೆಗಳು ರದ್ದಾಗಲಿವೆ ಎಂದು ವಿರೋಧ ಪಕ್ಷಗಳು ಟೀಕಿಸುತ್ತಿದ್ದವು. ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಪರಾಜಿತ ಅಭ್ಯರ್ಥಿ ಎಂ. ಲಕ್ಷ್ಮಣ್ ಅವರೂ ಗ್ಯಾರಂಟಿ ಯೋಜನೆ ಬಗ್ಗೆ ನೀಡಿರುವ ಹೇಳಿಕೆ ಗೊಂದಲ ಸೃಷ್ಟಿಸಿತ್ತು.

ಈ ಹಿನ್ನೆಲೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ.

‘ಗ್ಯಾರಂಟಿ ಯೋಜನೆ: ವ್ಯತಿರಿಕ್ತ ಹೇಳಿಕೆಗಳಿಗೆ ಕಡಿವಾಣ ಹಾಕಿ’

ಬೆಂಗಳೂರು: ‘ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ‘ಗ್ಯಾರಂಟಿ’ ಯೋಜನೆಗಳ ಕುರಿತು ಪಕ್ಷದ ಕೆಲವು ನಾಯಕರು, ಶಾಸಕರು, ಸಚಿವರು ನೀಡುತ್ತಿರುವ ವ್ಯತಿರಿಕ್ತ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ ಗೂಳಿಗೌಡ ಪತ್ರ ಬರೆದಿದ್ದಾರೆ.

‘ಗ್ಯಾರಂಟಿ ಯೋಜನೆಗಳು ಈಗ ದೇಶಕ್ಕೇ ಮಾದರಿಯಾದ ಕ್ರಾಂತಿಕಾರಿ ಯೋಜನೆಗಳಾಗಿವೆ. ಗೃಹಲಕ್ಷ್ಮಿ ಯೋಜನೆಯಡಿ ಮಾಸಿಕ ₹2 ಸಾವಿರ, ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ‘ಶಕ್ತಿ’ ಯೋಜನೆ, ಬೆಲೆ ಏರಿಕೆಯಿಂದ ಜನರು ತತ್ತರಿಸುತ್ತಿರುವ ದಿನದಲ್ಲಿ ‘ಗೃಹ ಜ್ಯೋತಿ’ ಯೋಜನೆ ಬಡವರಿಗೆ ಊರುಗೋಲಾಗಿದೆ. ಈ ಯೋಜನೆಗಳಿಂದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಪಕ್ಷ ಮತಗಳಿಕೆ ಗಣನೀಯವಾಗಿ ಹೆಚ್ಚಳವಾಗಿದೆ. ಇದು ಕಾಂಗ್ರೆಸ್ ಬಗ್ಗೆ ಜನರು ಇಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ’ ಎಂದಿದ್ದಾರೆ.

‘ಬಡವರ ಪರವಾದ ಈ ಯೋಜನೆಗಳನ್ನು ಸ್ಥಗಿತಗೊಳಿಸುವುದಿರಲಿ, ಅಂಥ ಹೇಳಿಕೆಗಳಿಂದಲೂ ಪಕ್ಷದ ಮೇಲಿನ ವಿಶ್ವಾಸ ಕಡಿಮೆಯಾಗುತ್ತದೆ. ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರಿಂದ ಅಂಥ ಹೇಳಿಕೆಗಳಿಗೆ ತಕ್ಷಣ ಕಡಿವಾಣ ಹಾಕಬೇಕು’ ಎಂದು ಪತ್ರದಲ್ಲಿ ಅವರು ಒತ್ತಾಯಿಸಿದ್ದಾರೆ.

ಪ್ರೇಮ ಪ್ರಕರಣ: ಗಾಯಗೊಂಡಿದ್ದ ಢವಳಗಿಯ ಯುವಕ ಸಾವು

ಪ್ರಜಾವಾಣಿ ವಾರ್ತೆ



ರಾಹುಲ್ ಬಿರಾದಾರ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ‘ಪ್ರೇಮ ಪ್ರಕರಣವೊಂದರಲ್ಲಿ ಯುವತಿಯ ಮನೆಯವರು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ ಎಂಬ ಆರೋಪದ ಪ್ರಕರಣದಲ್ಲಿ ಗಾಯಗೊಂಡಿದ್ದ ಢವಳಗಿ ಗ್ರಾಮದ ಯುವಕ ರಾಹುಲ್ ರಾಮನಗೌಡ ಬಿರಾದಾರ (25) ಭಾನುವಾರ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ’ ಎಂದು ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ ತಿಳಿಸಿದ್ದಾರೆ.

‘ಈ ಘಟನೆಯಲ್ಲಿ ಶೇ 60-70 ರಷ್ಟು ಸುಟ್ಟ ಗಾಯಗಳಾಗಿದ್ದ ಯುವಕ ಎರಡು ವಾರಗಳ ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ’ ಎಂದು ತಿಳಿಸಿದ್ದಾರೆ.

‘ಪಟ್ಟಣದ ಮದರಿ ಕಲ್ಯಾಣ ಮಂಟಪದ ಮಾಲೀಕ ಅಪ್ಪು ಮದರಿ ಅವರ ಮನೆಯಲ್ಲಿ ಮೇ 26ರಂದು ರಾಹುಲ್ ಮೇಲೆ ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಲಾಗಿದೆ’ ಎಂಬ ಕುರಿತು ಇಲ್ಲಿಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

‘ಘಟನೆಯಲ್ಲಿ ಯುವತಿಯ ಚಿಕ್ಕಪ್ಪ ಮುತ್ತು ಮದರಿ, ಕೆಲಸಗಾರರೊಬ್ಬರು ತೀವ್ರವಾಗಿ ಗಾಯಗೊಂಡಿದ್ದು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯುವತಿಯ ಚಿಕ್ಕಮ್ಮ ಚಿಕಿತ್ಸೆಯ ನಂತರ ಚೇತರಿಸಿಕೊಂಡಿದ್ದಾರೆ’ ಎನ್ನಲಾಗಿದೆ.

ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಯುವಕ ಹಾಗೂ ಯುವತಿ ಕುಟುಂಬದವರಿಂದ ದೂರು ಪ್ರತಿದೂರು ದಾಖಲಾಗಿತ್ತು. ಈಗಾಗಲೇ ಪೊಲೀಸರು ಯುವತಿಯ ತಂದೆಯನ್ನು ಬಂಧಿಸಿದ್ದಾರೆ. ಉಳಿದವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸುವುದಾಗಿ ಪೊಲೀಸರು ತಿಳಿಸಿದ್ದಾರೆ.

ಇಂದಿನಿಂದ ಜೆಒಎಸ್‌ಎಸ್‌ಎ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಮಂಗಳೂರು: ಐಐಟಿ, ಎನ್‌ಐಟಿ, ಐಐಎಸ್ಟಿ, ಐಐಐಟಿ ಮತ್ತು ಇತರ ಜಿಎಫ್‌ಟಿ ಪ್ರವೇಶಕ್ಕಾಗಿ ಜಂಟಿ ಸೀಟು ಹಂಚಿಕೆ ಪ್ರಾಧಿಕಾರ (ಜೆಒಎಸ್‌ಎಸ್‌ಎ) ನಡೆಸುವ ಕೌನ್ಸೆಲಿಂಗ್ ಪ್ರಕ್ರಿಯೆ ಇದೇ 10ರಿಂದ ಪ್ರಾರಂಭವಾಗಲಿದೆ.

ಐಐಟಿಗಳಿಗೆ ಜಂಟಿ ಸಮಾಲೋಚನೆ ಮತ್ತು ಸೀಟು ಹಂಚಿಕೆಗಾಗಿ ಕೇಂದ್ರ ಸೀಟು ಹಂಚಿಕೆ ಮಂಡಳಿ (ಸಿಎಸ್‌ಎಬಿ) ಮತ್ತು ಐಐಟಿಗಳ ಜಂಟಿ ಪ್ರವೇಶ ಮಂಡಳಿ (ಜೆಎಬಿ-ಐಐಟಿ) ಮತ್ತು ಎನ್‌ಐಟಿ ವ್ಯವಸ್ಥೆಗಳನ್ನು ಒಳಗೊಂಡ ಜೆಒಎಸ್‌ಎಎ ಯನ್ನು ಶಿಕ್ಷಣ ಸಚಿವಾಲಯ ರಚಿಸಿದೆ. ಇದು 31 ಎನ್‌ಐಟಿಗಳು, ಐಐಎಸ್‌ಟಿ, 26 ಐಐಐಟಿಗಳು, 3 ಯೋಜನೆ ಮತ್ತು ವಾಸ್ತುಶಿಲ್ಪ ಶಾಲೆಗಳು (ಎಸ್‌ಪಿಎಗಳು) ಮತ್ತು 37 ಜಿಎಫ್‌ಟಿಐಗಳನ್ನು (ಕೇಂದ್ರ / ರಾಜ್ಯ ಸರ್ಕಾರದ ಅನುದಾನಿತ ತಾಂತ್ರಿಕ ಸಂಸ್ಥೆಗಳು) ಒಳಗೊಂಡಿದೆ.

ಎನ್‌ಐಟಿಕೆ ಸುರತ್ಕಲ್ ಮತ್ತು ಐಐಟಿ ಮದ್ರಾಸ್ (ಜೆಎಬಿ-ಐಐಟಿ) ನೊಂದಿಗೆ 2024ರ ಜಂಟಿ ಸೀಟು ಹಂಚಿಕೆ ಪ್ರಾಧಿಕಾರವು ಜಂಟಿಯಾಗಿ ಸಮನ್ವಯ ಸಾಧಿಸುತ್ತಿದೆ. ಐಐಟಿಗಳಿಗೆ ಸೀಟು ಹಂಚಿಕೆಯು ಅಭ್ಯರ್ಥಿಗಳ ಜೆಇಇ (ಅಡ್ವಾನ್ಸ್ಡ್) ರ‍್ಯಾಂಕ್ ಆಧರಿಸಿದೆ. ಆದರೆ ಎನ್‌ಐಟಿ ಪ್ಲಸ್ ವ್ಯವಸ್ಥೆಗೆ ಸೀಟು ಹಂಚಿಕೆಯುಅಭ್ಯರ್ಥಿಗಳಜೆಇಇ(ಮೇನ್) ರ‍್ಯಾಂಕ್ ಆಧರಿಸಿದೆ. ಜೆಇಇ(ಮೇನ್) ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳು ಎನ್‌ಐಟಿ ಪ್ಲಸ್ ವ್ಯವಸ್ಥೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

2024ರ ಜೆಇಇ-ಮೇನ್‌ನಲ್ಲಿ ಸುಮಾರು 15 ಲಕ್ಷ ಅಭ್ಯರ್ಥಿಗಳು ಎನ್‌ಐಟಿ ಪ್ಲಸ್ ವ್ಯವಸ್ಥೆಗಾಗಿ ಸುಮಾರು 42 ಸಾವಿರ ಸೀಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ವಿವಿಧ ವರ್ಗಗಳಿಗೆ (ಇಡಬ್ಲ್ಯುಎಸ್- ಒಬಿಸಿ-ಎನ್‌ಸಿಎಲ್- ಎಸ್‌ಟಿ- ಎಸ್‌ಟಿ- ಪಿಡಬ್ಲ್ಯುಡಿ) ಸ್ಥಾನಗಳನ್ನು ಕಾಯ್ದಿರಿಸುವುದು ಭಾರತ ಸರ್ಕಾರದ ಮಾನದಂಡಗಳ ಪ್ರಕಾರವಾಗಿದೆ. ಸಂಪೂರ್ಣ ಸೀಟು ಹಂಚಿಕೆ, ಶುಲ್ಕ ಪಾವತಿ ಮತ್ತು ಪ್ರಮಾಣಪತ್ರ ಪರಿಶೀಲನೆ ಪ್ರಕ್ರಿಯೆ ಆನ್‌ಲೈನ್ ನಲ್ಲಿ (https://josaa.nic.in) ಲಭ್ಯ.

ಜೂನ್ 10ರಿಂದ ಜೋಸಾ ಪೋರ್ಟಲ್ ಮೂಲಕ ಐದು ಸುತ್ತಿನ ಕೌನ್ಸೆಲಿಂಗ್ ನಡೆಸಲಾಗುವುದು. ಅಭ್ಯರ್ಥಿಗಳು ಜೂನ್ 10ರಿಂದ 121 ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳಿಂದ ತಮ್ಮ ಆಯ್ಕೆಯ ಕೋರ್ಸ್‌ಗಳಿಗೆ (ಆಯ್ಕೆ-ಭರ್ತಿ) ನೋಂದಣಿಯನ್ನು ಪ್ರಾರಂಭಿಸಬಹುದು. ಜೂನ್ 18ರೊಳಗೆ ತಮ್ಮ ಆಯ್ಕೆಗಳನ್ನು ಲಾಕ್ ಮಾಡಬಹುದು. ಮೊದಲ ಸುತ್ತಿನ ಹಂಚಿಕೆಯನ್ನು ಜೂನ್ 20ರಂದು ಮಾಡಲಾಗುತ್ತದೆ. ಐದು ಸುತ್ತಿನ ಜೋಸಾದ ನಂತರ ಎನ್‌ಐಟಿ ಪ್ಲಸ್ ವ್ಯವಸ್ಥೆಯಲ್ಲಿ ಖಾಲಿ ಉಳಿದಿರುವ ಸ್ಥಾನಗಳನ್ನು ಜುಲೈ 29ರಿಂದ ಪ್ರಾರಂಭವಾಗುವ ಸಿಎಸ್‌ಎಬಿ ಎರಡು ವಿಶೇಷ ಸುತ್ತುಗಳ ಮೂಲಕ ಭರ್ತಿ ಮಾಡಲಾಗುತ್ತದೆ. ಸೀಟುಗಳನ್ನು ನವೀಕರಿಸಲು ಬಯಸುವ ಅಭ್ಯರ್ಥಿಗಳು ಮತ್ತು / ಅಥವಾ ವ್ಯವಸ್ಥೆಗೆ ಪ್ರವೇಶಿಸುವ ಹೊಸ ಅಭ್ಯರ್ಥಿಗಳು ಸಿಎಸ್‌ಎಬಿ ಪೋರ್ಟಲ್ (https://csab.nic.in) ನಲ್ಲಿ ಸಿಎಸ್‌ಎಬಿ ವಿಶೇಷ ಸುತ್ತುಗಳಿಗೆ ಹೊಸದಾಗಿ ನೋಂದಾಯಿಸಿಕೊಳ್ಳಬೇಕು.

ಜೋಸಾ – ಸಿಎಸ್‌ಎಬಿ -2024 ಕೌನ್ಸೆಲಿಂಗ್ ಪ್ರಕ್ರಿಯೆಗೆ ಸಹಾಯ ಮಾಡಲು ದೇಶಾದ್ಯಂತ 52 ದಾಖಲೆ ಪರಿಶೀಲನಾ ಕೇಂದ್ರಗಳು (ವಿ.ಸಿಗಳು) ಮತ್ತು ಸಹಾಯ ಕೇಂದ್ರಗಳನ್ನು (ಎಚ್‌ಸಿ) ಸ್ಥಾಪಿಸಲಾಗಿದೆ (ವಿವರ ವೆಬ್‌ಸೈಟ್‌ನಲ್ಲಿದೆ). ಎಲ್ಲಾ ಪಾಲುದಾರರಿಗೆ ಕೌನ್ಸೆಲಿಂಗ್ ಪ್ರಕ್ರಿಯೆಗೆ ಅನುಕೂಲವಾಗುವಂತೆ ಎನ್ ಐಟಿಕೆ ಸುರತ್ಕಲ್ ನಲ್ಲಿರುವ ಸಿಎಸ್ ಎಬಿ ಕಚೇರಿಯಲ್ಲಿ ಸಹಾಯ ಕೇಂದ್ರ ಸ್ಥಾಪಿಸಲಾಗಿದೆ. ಅಭ್ಯರ್ಥಿಗಳು ಮತ್ತು ಪೋಷಕರು ಜೆಒಎಸ್‌ಎಸ್‌ಎ ಅಥವಾ ಸಿಎಸ್‌ಎಬಿ -2024 ವೆಬ್‌ಸೈಟ್ ಪರಿಶೀಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸೀಟು ಹಂಚಿಕೆ ವೇಳಾಪಟ್ಟಿ

ಅಭ್ಯರ್ಥಿ ನೋಂದಣಿ / ಆಯ್ಕೆ ಭರ್ತಿ	ಜೂನ್ 10-18
ಅಣಕು ಸೀಟು ಹಂಚಿಕೆ -1 ಮತ್ತು 2	ಜೂನ್ 15 ಮತ್ತು 17
ಆಯ್ಕೆಗಳ ಲಾಕಿಂಗ್	18ನೇ ಜೂನ್
ಸೀಟು ಹಂಚಿಕೆ (1ನೇ ಸುತ್ತು)	ಜೂನ್ 20
ಆನ್‌ಲೈನ್ ವರದಿ (ಶುಲ್ಕ ಪಾವತಿ /ದಾಖಲೆ ಅಪ್ಲೋಡ್, ಸುತ್ತು 1)	ಜೂನ್ 20-24
ಸೀಟು ಹಂಚಿಕೆ (2ನೇ ಸುತ್ತು)	ಜೂನ್ 27
ಸೀಟು ಹಂಚಿಕೆ (3ನೇ ಸುತ್ತು)	ಜುಲೈ 4
ಸೀಟು ಹಂಚಿಕೆ (4ನೇ ಸುತ್ತು)	ಜುಲೈ 10
ಸೀಟು ಹಂಚಿಕೆ (5ನೇ ಸುತ್ತು)	ಜುಲೈ 17
ಸಿಎಸ್‌ಎಬಿ ವಿಶೇಷ ಸುತ್ತಿನ ಕೌನ್ಸೆಲಿಂಗ್ (1ನೇ ಮತ್ತು 2ನೇ ಸುತ್ತು)	ಜುಲೈ 29 - ಆಗಸ್ಟ್ 11
ಸಿಎಸ್‌ಎಬಿ-ಎನ್‌ಇಯುಟಿ-2024 ಕೌನ್ಸೆಲಿಂಗ್ (1ನೇ, 2ನೇ ಸುತ್ತು)	ಜೂನ್ 17 – ಆಗಸ್ಟ್ 8
ಸಿಎಸ್‌ಎಬಿ ಸೂಪರ್ ನ್ಯೂಮರಿಕ್ ಕೌನ್ಸೆಲಿಂಗ್	ಆಗಸ್ಟ್ 14 ರಿಂದ ಆಗಸ್ಟ್ 19

‘ನೀಟ್ ಅಕ್ರಮ ಶಂಕೆ: ವಿದ್ಯಾರ್ಥಿಗಳ ಹಿತ ಕಾಪಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಅಕ್ರಮದ ಅನುಮಾನ ವ್ಯಕ್ತವಾಗಿದ್ದು, ಕೇಂದ್ರ ಸರ್ಕಾರ ವಿದ್ಯಾರ್ಥಿಗಳ ಹಿತ ಕಾಯಲು ಮುಂದಾಗಬೇಕು’ ಎಂದು ಸಚಿವ ಎನ್.ಎಸ್. ಬೋಸರಾಜು ಆಗ್ರಹಿಸಿದರು.

‘ನೀಟ್ ಫಲಿತಾಂಶ ಬಂದ ನಂತರ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು ಕೇಂದ್ರ ಇನ್ನಷ್ಟು ಅನಾಹುತಗಳಿಗೆ ಅವಕಾಶ ಆಗದಂತೆ ತನಿಖೆ ನಡೆಸಿ ನ್ಯಾಯ ಕೊಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ‘ಈ ಬಾರಿ ಆಶ್ಚರ್ಯಕರ ರೀತಿಯಲ್ಲಿ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದಿದ್ದು ಪ್ರತಿಷ್ಠಿತ ಏಮ್ಸ್‌ನಲ್ಲಿ ಲಭ್ಯ ಇರುವ ಪ್ರವೇಶಾತಿ ಸಂಖ್ಯೆಯೇ 56. ಉಳಿದ 11 ವಿದ್ಯಾರ್ಥಿಗಳ ಆಸೆ ಭಗ್ನವಾಗಲಿದೆ. ಈ ಹಿನ್ನಲೆಯಲ್ಲಿ ಪೋಷಕರು, ವಿದ್ಯಾರ್ಥಿಗಳು ಶಂಕೆ ವ್ಯಕ್ತಪಡಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಅತ್ಯಾಚಾರ: ಆರೋಪಿಯ ಬಂಧನ

ಠಾಣೆ (ಪಿಟಿಐ): ಹದಿಹರೆಯದ ಹುಡುಗಿ ಮೇಲೆ ಅತ್ಯಾಚಾರವೆಸಗಿದ ಆರೋಪದ ಮೇರೆಗೆ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಕಲ್ಯಾಣ್‌ನಲ್ಲಿ ಅನೀಶ್ ಪಾಂಡೆ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬನಿಗಾಗಿ ಶೋಧ ಕೈಗೊಂಡಿದ್ದಾರೆ.

ಯುವತಿ ತಂದೆ ಕರೆದಿರುವುದಾಗಿ ಹೇಳಿ ಆಕೆಯನ್ನು ಕರೆದೊಯ್ದ ಆರೋಪಿಯು ಬಲವಂತದಿಂದ ಮದ್ಯ ಕುಡಿಸಿ ಅತ್ಯಾಚಾರ ಎಸಗಿರುವುದಾಗಿ ಹೇಳಲಾಗಿದೆ. ಮತ್ತೊಬ್ಬ ಇದನ್ನು ವಿಡಿಯೊ ಮಾಡಿದ್ದಾನೆ.

‘ಕಾನ್‌ಸ್ಟೆಬಲ್‌ಗಳ ಅಂತರ ಜಿಲ್ಲಾ ವರ್ಗಾವಣೆ ಶೀಘ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸರ ಅಂತರ ಜಿಲ್ಲಾ ವರ್ಗಾವಣೆಗೆ ಶೀಘ್ರ ಚಾಲನೆ ನೀಡಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ಭಾನುವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಎರಡು ತಿಂಗಳು ಯಾವುದೇ ಕೆಲಸ ಕಾರ್ಯಗಳನ್ನು ನಡೆಸಲು ಸಾಧ್ಯವಾಗಿಲ್ಲ’ ಎಂದರು.

‘ಅಂತರ ಜಿಲ್ಲಾ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿ ಒಂದೂವರೆ ವರ್ಷ ಕಳೆದಿದ್ದರೂ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ವರ್ಗಾವಣೆ ಭಾಗ್ಯ ದೊರೆತಿಲ್ಲ’ ಎಂದು ಭಾನುವಾರದ (ಜೂನ್ 9) ‘ಪ್ರಜಾವಾಣಿ’ಯಲ್ಲಿ ವರದಿ ಪ್ರಕಟವಾಗಿತ್ತು.

ಒಳ ಜಗಳ ಆಗಿಲ್ಲ: ‘ಕಾಂಗ್ರೆಸ್‌ನಲ್ಲಿ ಹಿರಿಯರನ್ನು ಪರಿಗಣಿಸುತ್ತಿಲ್ಲ’ ಎಂಬ ಆರೋಪದ ಕುರಿತ ಪ್ರಶ್ನೆಗೆ ಅವರು, ‘ಆ ರೀತಿ ಇಲ್ಲ. ಸಂದರ್ಭ ಅನುಸಾರ ಅಂತಹ ಮಾತುಗಳನ್ನು ಹೇಳಿರುತ್ತೇವೆ. ನಮ್ಮಲ್ಲಿ ಒಳ ಜಗಳ ಆಗಿಲ್ಲ’ ಎಂದರು.

‘ಪಕ್ಷದಲ್ಲಿನ ಒಳ ಜಗಳವನ್ನು ತುಮಕೂರಿನ ಶಾಸಕ ಸುರೇಶ್‌ಗೌಡ ಅವರು ಎಲ್ಲಿ ನೋಡಿದ್ದಾರೊ, ಎಲ್ಲಿ ಆಗಿದೆಯೊ ಅವರಿಗೇ ಗೊತ್ತು. ವಿಚಾರಗಳು ಬಂದಾಗ ಒಬ್ಬೊಬ್ಬರು ಅಭಿಪ್ರಾಯಗಳನ್ನು ಹಂಚಿಕೊಂಡಿರುವುದು ಸಹಜ. ಅಂತಹ ಸಂದರ್ಭದಲ್ಲಿ ಬಿಟ್ಟರೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಹಂಚಿಕೊಳ್ಳಲು ಸಚಿವ ಸಂಪುಟ ಇದೆ. ಪಕ್ಷಕ್ಕೆ ಸಂಬಂಧಪಟ್ಟ ತೀರ್ಮಾನಗಳನ್ನು ಕೋರ್ ಕಮಿಟಿ ಕೈಗೊಳ್ಳಬಹುದು. ಅದಕ್ಕೆ ಪಕ್ಷದ ಅಧ್ಯಕ್ಷರು ಅವಕಾಶ ಕೊಡಬೇಕಾಗಿದೆ. ಸಂದರ್ಭ ಬಂದಾಗ ಅವರು ಮಾಡುತ್ತಾರೆ’ ಎಂದರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣದ ತನಿಖೆಯನ್ನು ತ್ವರಿತಗತಿಯಲ್ಲಿ ನಡೆಸುವಂತೆ ಎಸ್‌ಐಟಿಗೆ ಸೂಚಿಸಿದ್ದೇವೆ. ತನಿಖೆ ವಿಚಾರದಲ್ಲಿ ಅಧಿಕಾರಿಗಳಿಗೆ ಒತ್ತಾಯ ಮಾಡಲು ಆಗುವುದಿಲ್ಲ. ಸಿಬಿಐನವರು ಅಧಿಕೃತವಾಗಿ ಯಾವುದೇ ಪತ್ರ ಬರೆದಿಲ್ಲ’ ಎಂದೂ ಹೇಳಿದರು.

ಲೋಕಸಭೆ: 10 ವರ್ಷದ ಬಳಿಕ ವಿರೋಧಪಕ್ಷ ನಾಯಕನ ಸ್ಥಾನ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ 10 ವರ್ಷಗಳ ತರುವಾಯ ವಿರೋಧ ಪಕ್ಷದ ನಾಯಕ ಇರಲಿದ್ದಾರೆ. ಇಂಡಿಯಾ ಮೈತ್ರಿಕೂಟದ ಸದಸ್ಯ ಬಲ ಗಣನೀಯವಾಗಿ ಏರಿಕೆಯಾಗಿರುವುದು ಇದಕ್ಕೆ ಕಾರಣ.

ಇದರ ಜೊತೆಗೆ ವಿರೋಧಪಕ್ಷಗಳು 18ನೇ ಲೋಕಸಭೆಯಲ್ಲಿ ಡೆಪ್ಯೂಟಿ ಸ್ಪೀಕರ್ ಸ್ಥಾನವು ಭರ್ತಿಯಾಗಲಿದೆ ಎಂಬ ವಿಶ್ವಾಸವನ್ನು ಹೊಂದಿವೆ. ಈ ಸ್ಥಾನವು ಕಳೆದ ಐದು ವರ್ಷಗಳಿಂದ ಖಾಲಿ ಉಳಿದಿದೆ.

17ನೇ ಲೋಕಸಭೆಯ ಅವಧಿಯುದ್ದಕ್ಕೂ ಈ ಸ್ಥಾನ ಭರ್ತಿಯಾಗಿರಲಿಲ್ಲ. ಹೀಗಾಗಿ, ಡೆಪ್ಯೂಟಿ ಸ್ಪೀಕರ್ ಇಲ್ಲದೇ ಇರುವುದು ಇದು ಎರಡನೇ ಬಾರಿ.

‘ಇಂಡಿಯಾ’ ಮೈತ್ರಿಕೂಟವು ಸಂಸತ್ತಿನಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ ಕುರಿತಂತೆ ಇನ್ನೂ ಯಾವುದೇ ಚರ್ಚೆ ನಡೆಸಿಲ್ಲ. ಬಿಜೆಪಿ ನೇತೃತ್ವದ ಸರ್ಕಾರವು ಜನತೆ ಈ ಬಾರಿ ತಿರಸ್ಕರಿಸಿದ್ದಾರೆ. ಅವರು ಕಳೆದ ಐದು ವರ್ಷ ಡೆಪ್ಯೂಟಿ ಸ್ಪೀಕರ್ ಸ್ಥಾನಕ್ಕೆ ಆಯ್ಕೆ ನಡೆಸಲಿಲ್ಲ. ಈ ಚುನಾವಣೆ ಫಲಿತಾಂಶದಿಂದ ಅವರು ಪಾಠ ಕಲಿತಿದ್ದಾರೆ ಎಂಬ ವಿಶ್ವಾಸವಿರುವುದಾಗಿ ಟಿಎಂಸಿ ನಾಯಕರೊಬ್ಬರು ಹೇಳಿದರು.

17ನೇ ಲೋಕಸಭೆಯಲ್ಲಿ ಬಿಜೆಪಿಯು 303 ಸ್ಥಾನ ಗೆದ್ದಿದ್ದು, ಸ್ಪಷ್ಟ ಬಹುಮತವನ್ನು ಪಡೆದಿತ್ತು. ಓಂ ಬಿರ್ಲಾ ಅವರು ಸ್ಪೀಕರ್ ಆಗಿ ಆಯ್ಕೆಯಾಗಿದ್ದರು.

ಸಂವಿಧಾನದ ವಿಧಿ 93ರ ಪ್ರಕಾರ, ಲೋಕಸಭೆಯು ಎಷ್ಟು ಸಾಧ್ಯವೋ ಅಷ್ಟು ಬೇಗ, ಸ್ಪೀಕರ್ ಮತ್ತು ಡೆಪ್ಯೂಟಿ ಸ್ಪೀಕರ್ ಸ್ಥಾನವನ್ನು ಭರ್ತಿ ಮಾಡಬೇಕು ಎಂದಿದೆ. ಆದರೆ, ಇದಕ್ಕಾಗಿ ಸಂವಿಧಾನದಲ್ಲಿ ಯಾವುದೇ ಕಾಲಮಿತಿಯನ್ನು ಉಲ್ಲೇಖಿಸಿಲ್ಲ. ಪ್ರಸ್ತುತ, ಈ ವರ್ಷದ ಅಂತ್ಯಕ್ಕೆ ಅವಧಿ ಪೂರೈಸಲಿರುವ ಜಾರ್ಖಂಡ್ ವಿಧಾನಸಭೆಯಲ್ಲಿಯೂ ಡೆಪ್ಯೂಟಿ ಸ್ಪೀಕರ್ ಸ್ಥಾನ ಖಾಲಿ ಉಳಿಸಿಕೊಳ್ಳಲಾಗಿದೆ.

ದೂರು ಸ್ವೀಕರಿಸದ ಮೂವರು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಸಾಲಿಗ್ರಾಮ (ಮೈಸೂರು ಜಿಲ್ಲೆ): ಕೆ.ಆರ್. ನಗರ ತಾಲ್ಲೂಕಿನ ಚಂದಗಾಲ ಗ್ರಾಮದ ಒಂದೇ ಕುಟುಂಬದ ನಾಲ್ವರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಒಬ್ಬರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ, ದೂರು ಸ್ವೀಕರಿಸಲು ನಿರಾಕರಿಸಿದ ಕೆ.ಆರ್.ನಗರ ಠಾಣೆಯ ಸಿಪಿಐ ಸಂತೋಷ್, ಎಸ್‌ಐ ಗಿರೀಶ್ ಹಾಗೂ ಹೆಡ್ ಕಾನ್‌ಸ್ಟೆಬಲ್ ರಾಘವೇಂದ್ರ ಅವರನ್ನು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ.

ಮಹದೇವ ನಾಯಕ ಕುಟುಂಬದವರು ಚಾಮರಾಜನಗರ ಜಿಲ್ಲೆಯ ತಾಳಬೆಟ್ಟದಲ್ಲಿ ಶನಿವಾರ ಆತ್ಮಹತ್ಯೆಗೆ ಯತ್ನಿಸಿದ್ದರು. ಮಹದೇವ ನಾಯಕ ಮೃತಪಟ್ಟಿದ್ದಾರೆ.

‘ವ್ಯಕ್ತಿಯೊಬ್ಬ ಮಹದೇವನಾಯಕ ಅವರ ಮನೆಗೆ ನುಗ್ಗಿ ಜೀವ ಬೆದರಿಕೆ ಹಾಕಿದ್ದರು. ಭೀತರಾದ ಕುಟುಂಬದವರು ದೂರು ನೀಡಲು ಹೋದಾಗ ಪೊಲೀಸರು ಸ್ವೀಕರಿಸಿಲ್ಲ. ನೊಂದ ಕುಟುಂಬದವರು ಆತ್ಮಹತ್ಯೆಗೆ ಯತ್ನಿಸಿದರು’ ಎಂದು ಆರೋಪಿಸಲಾಗಿದೆ.

ಮಹದೇವ ನಾಯಕ ಅವರ ಮೃತದೇಹವನ್ನು ಸ್ವಗ್ರಾಮಕ್ಕೆ ತಂದ ವೇಳೆ, ಸಂಬಂಧಿಕರು ಹಾಗೂ ಗ್ರಾಮಸ್ಥರು ಠಾಣೆ ಸಮೀಪದ ಅಂಬೇಡ್ಕರ್ ಪ್ರತಿಮೆ ಎದುರು ಧರಣಿ ನಡೆಸಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಭೇಟಿ ನೀಡಿದ್ದ ಕೆ.ಆರ್. ನಗರ ಶಾಸಕ ಡಿ. ರವಿಶಂಕರ್, ‘ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಶಿಕ್ಷೆಯಾಗಲಿದೆ. ಮೃತರ ಕುಟುಂಬದವರಿಗೆ ಸರ್ಕಾರದಿಂದ ಪರಿಹಾರ ಕೊಡಿಸುತ್ತೇನೆ’ ಎಂದು ಭರವಸೆ ನೀಡಿದರು.

ಚಾಮರಾಜನಗರ ವರದಿ: ಆತ್ಮಹತ್ಯೆಗೆ ಯತ್ನಿಸಿ ಅಸ್ವಸ್ಥರಾಗಿದ್ದ ಮೂವರ ಪೈಕಿ ಇಬ್ಬರು ಅಪಾಯದಿಂದ ಪಾರಾಗಿದ್ದು, ಇನ್ನೊಬ್ಬರ ಸ್ಥಿತಿ ಗಂಭೀರವಾಗಿದೆ.

ಕೆಎಎಸ್: ವಯೋಮಿತಿ ಪರಿಗಣಿಸದೆ ಅವಕಾಶ ನೀಡಲು ಆಗ್ರಹ

ಸಿಎಂ ಒಪ್ಪಿದರೂ ಬಾರದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2017–18ನೇ ಸಾಲಿನಲ್ಲಿ ಕೆಎಎಸ್ ಹುದ್ದೆಗಳ ನೇಮಕಾತಿ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳಿಗೆ, ಇದೀಗ ಅರ್ಜಿ ಆಹ್ವಾನಿಸಿರುವ 2024ನೇ ಸಾಲಿನ 384 ಹುದ್ದೆಗಳಿಗೆ ಪರೀಕ್ಷೆ ಬರೆಯಲು ಗರಿಷ್ಠ ವಯೋಮಿತಿ ಪರಿಗಣಿಸದೇ ಒಂದು ವಿಶೇಷ ಅವಕಾಶ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕಡತದಲ್ಲಿ ಅನುಮೋದನೆ ನೀಡಿದ್ದರೂ, ಆದೇಶ ಹೊರಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಮೀನಮೇಷ ಎಣಿಸುತ್ತಿರುವುದು ಹುದ್ದೆ ಆಕಾಂಕ್ಷಿಗಳನ್ನು ಚಿಂತೆಗೀಡು ಮಾಡಿದೆ.

ಲೋಕಸಭೆ ಚುನಾವಣೆ ಘೋಷಣೆಯ ಕೆಲವೇ ದಿನಗಳ ಮೊದಲು, ಸಚಿವ ಸಂಪುಟದ ಅನುಮೋದನೆ ಬಾಕಿ ಇಟ್ಟು ಆದೇಶ ಹೊರಡಿಸುವಂತೆ ಡಿಪಿಎಆರ್ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದ್ದರು.

ಈ ಮಧ್ಯೆ, ಚುನಾವಣೆ ನೀತಿಸಂಹಿತೆ ಜಾರಿಗೆ ಬಂದ ಕಾರಣ, ಆದೇಶ ಹೊರಡಿಸುವ ಸಂಬಂಧ ಅನುಮತಿಗಾಗಿ ಚುನಾವಣಾ ಆಯೋಗಕ್ಕೆ ಡಿಪಿಎಆರ್ ಪತ್ರ ಬರೆದಿತ್ತು. ನೀತಿಸಂಹಿತೆ ಮುಗಿದ ಬಳಿಕ ಆದೇಶ ಹೊರಡಿಸಲು ಆಯೋಗವು ನಿರ್ದೇಶನ ನೀಡಿತ್ತು.

ಆದರೆ, ನೀತಿಸಂಹಿತೆ ಮುಗಿದರೂ ಆದೇಶ ಹೊರಡಿಸದೆ ಅಧಿಕಾರಿಗಳ ಮಟ್ಟದಲ್ಲಿಯೇ ಕಡತ ಓಡಾಡುತ್ತಿದೆ. ಜುಲೈ 21ಕ್ಕೆ ಕೆಎಎಸ್ ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ಈಗಾಗಲೇ ದಿನ ನಿಗದಿಪಡಿಸಿದೆ. ಆದರೆ, ಗರಿಷ್ಠ ವಯೋಮಿತಿ ಪರಿಗಣಿಸದೆ ಅವಕಾಶ ನೀಡುವ ಸಂಬಂಧ ಸರ್ಕಾರ ಆದೇಶ ಹೊರಡಿಸದೇ ಇರುವುದು ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಸಾವಿರಾರು ಅಭ್ಯರ್ಥಿಗಳಲ್ಲಿ ಆತಂಕ ಮೂಡಿದೆ.

‘ಗರಿಷ್ಠ ವಯೋಮಿತಿ ಮೀರಿದವರಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡುವಂತೆ ಈಗಾಗಲೇ ಕೆಪಿಎಸ್‌ಸಿ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದೇವೆ. ಸರ್ಕಾರ ಆದೇಶ ಹೊರಡಿಸಿದರೆ ಅವಕಾಶ ನೀಡುವುದಾಗಿ ಕೆಪಿಎಸ್‌ಸಿ ಕಾರ್ಯದರ್ಶಿ ತಿಳಿಸಿದ್ದಾರೆ’ ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘದ ಅಧ್ಯಕ್ಷ ವಿ. ಲೋಕೇಶ್ ಹೇಳಿದರು.



2017–18ನೇ ಸಾಲಿನಲ್ಲಿ ಪರೀಕ್ಷೆ ಬರೆದವರಿಗೆ ಗರಿಷ್ಠ ವಯೋಮಿತಿ ಪರಿಗಣಿಸದೆ, ಈ ಬಾರಿಯ ಪರೀಕ್ಷೆಗೆ ಅವಕಾಶ ನೀಡುವಂತೆ ಕೋರಿದ್ದೇವೆ
ವಿ.ಲೋಕೇಶ್, ಅಧ್ಯಕ್ಷ ಕರ್ನಾಟಕ ರಾಜ್ಯ ದಲಿತ ಪದವೀಧರ ಸಂಘ

‘ಕೆಎಎಸ್ ಹುದ್ದೆಗಳ ನೇಮಕಾತಿಗೆ ಪ್ರತಿವರ್ಷ ಅಧಿಸೂಚನೆ ಹೊರಡಿಸಬೇಕು ಎಂದು ಪಿ.ಸಿ. ಹೋಟಾ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆದರೆ, ರಾಜ್ಯದಲ್ಲಿ 3-4 ವರ್ಷಗಳಿಗೊಮ್ಮೆ ಅಧಿಸೂಚನೆ ಹೊರಡಿಸಲಾಗುತ್ತಿದೆ. ಒಡಿಶಾ ಸರ್ಕಾರವು 2017ರಲ್ಲಿ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಪರಿಗಣಿಸದೆ 2024ರ ಪರೀಕ್ಷೆ ಬರೆಯಲು ಅವಕಾಶ ನೀಡಿದೆ. ಅದೇ ರೀತಿಯಲ್ಲಿ ರಾಜ್ಯದಲ್ಲೂ ಅವಕಾಶ ನೀಡಬೇಕೆಂದು ನಾವು ಮಾಡಿದ್ದ ಮನವಿಗೆ ಮುಖ್ಯಮಂತ್ರಿ ಸ್ಪಂದಿಸಿ, ಆದೇಶ ಹೊರಡಿಸಲು ಕಡತದಲ್ಲಿ ಡಿಪಿಎಆರ್‌ಗೆ ಸೂಚಿಸಿದ್ದರು. ಕೆಎಎಸ್ ಪರೀಕ್ಷೆಗೆ ಇನ್ನು ಕೇವಲ 40 ದಿನಗಳಷ್ಟೆ ಬಾಕಿಯಿದೆ. ಮುಖ್ಯಮಂತ್ರಿಯ ಸೂಚನೆಯಂತೆ ಡಿಪಿಎಆರ್ ತಕ್ಷಣ ಆದೇಶ ಹೊರಡಿಸಬೇಕು’ ಎಂದು ಅವರು ಆಗ್ರಹಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಡಿಪಿಎಆರ್ ಕಾರ್ಯದರ್ಶಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಶಿಕ್ಷಣ



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ 5.2

(ii) $-3, -\frac{1}{2}, 2$............ ಈ ಸಮಾಂತರ ಶ್ರೇಢಿಯ 11 ನೇ ಪದ

(A) 28 (B) 22

(C) -38 (D) $-48\frac{1}{2}$

ಪರಿಹಾರ: (i)

$a = 10 \quad d = 7-10 = -3 \quad n = 30$

$$a_n = a + (n-1)d$$
$$a_{30} = 10 + (30-1)(-3)$$
$$= 10 - 87$$
$$a_{30} = -77$$

ಸರಿಯಾದ ಉತ್ತರ:- (C) -77

ಪರಿಹಾರ: (ii) $a = -3 \quad n = 11$

$$d = -\frac{1}{2} - (-3) = -\frac{1}{2} + 3 = \frac{5}{2}$$
$$a_n = a + (n-1)d$$
$$a_{11} = -3 + (11-1)\left(\frac{5}{2}\right)$$
$$= -2 + 25 = 22$$

ಸರಿಯಾದ ಉತ್ತರ:- (B) 22

3. ಕೆಳಗಿನ ಸಮಾಂತರ ಶ್ರೇಢಿಯ ಬಾಕ್ಸ್‌ಗಳಲ್ಲಿ ಖಾಲಿ ಬಿಟ್ಟಿರುವ ಪದಗಳನ್ನು ತುಂಬಿಸಿ.

(i) 2, ☐ , 26

(ii) ☐, 13, ☐ 3

(iii) 5, ☐ ☐ 91/2

(iv) – 4, ☐ ☐ ☐ ☐

(v) ☐, 38, ☐ ☐ ☐ 22

ಪರಿಹಾರ: (1) ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೂರನೇ ಪದ $= 2 + d + d = 2 + 2d$

ಪ್ರಶ್ನೆಯ ಪ್ರಕಾರ

$$2 + 2d = 26$$
$$2d = 26 - 2$$
$$2d = 24 \Rightarrow d = 24/2 = 12$$

ದ್ವಿತೀಯ ಪದ $= 2 + d = 2 + 12 = 14$

(ii) ☐, 13, ☐, 3

2ನೇ ಪದ =13

$a + d = 13$....................(1)

ನಾಲ್ಕನೇ ಪದ

$$a + (4-1)d = 3$$

$a + 3d = 3$................(2)

(1) ಮತ್ತು (2)ನ್ನು ಬಿಡಿಸುವುದರಿಂದ

$a = 18 \quad d = -5$

$$\therefore 3rd \ term = a + (3-1)d$$
$$= a + 2d$$
$$= 18 + 2(-5)$$
$$= 18 - 10 = 8$$

$$= 18 + 2(-5)$$
$$= 18 - 10 = 8$$

ಹೀಗಾಗಿ ಬಿಟ್ಟುಹೋದ ಪದಗಳು 18 ಮತ್ತು 8

(iii) 5, ☐, ☐, 91/2

ಪರಿಹಾರ:-ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a = 5 \quad$ 4th term $9\frac{1}{2}$

$$\Rightarrow 5 + (4-1)d = \frac{19}{2} \quad (\because a_n = a + (n-1)d)$$
$$\Rightarrow 3d = \frac{19}{2} - 5$$
$$\Rightarrow 3d = \frac{9}{2} \quad \Rightarrow \quad d = \frac{3}{2}$$

$\therefore$ 2ನೇ ಪದ $= 5 + \frac{3}{2} = \frac{13}{2} = 6\frac{1}{2}$

3ನೇ ಪದ $= \frac{13}{2} + \frac{3}{2} = 8$

ಹೀಗಾಗಿ ಬಿಟ್ಟುಹೋದ ಪದಗಳು $6\frac{1}{2}$ ಮತ್ತು 8

(iv) – 4, ☐, ☐, ☐, ☐, 6

ಪರಿಹಾರ:- ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a = -4 \quad 6th \ term = 6$

$$\Rightarrow -4 + (6-1)d = 6 (\because a_n = a + (n-1)d)$$
$$\Rightarrow -4 + 5d = 6$$
$$\Rightarrow 5d = 6 + 4$$
$$\Rightarrow 5d = 10$$
$$\Rightarrow d = \frac{10}{5} \quad \Rightarrow \ = 2$$

$\therefore$ 2ನೇ ಪದ $= -4 + 2 = -2$

3ನೇ ಪದ $= -2 + 2 = -0$

4ನೇ ಪದ $= 0 + 2 = 2$

5ನೇ ಪದ $= 2 + 2 = 4$

ಹೀಗಾಗಿ ಬಿಟ್ಟುಹೋದ ಪದಗಳು $-2, 0, 2, 4$

(v) ☐, 38, ☐, ☐, ☐, -22

ನೀಡಿರುವ ಸಮಾಂತರ ಶ್ರೇಢಿಯ ಮೊದಲ ಪದ a ಸಾಮಾನ್ಯ ವ್ಯತ್ಯಾಸ d ಆಗಿರಲಿ

ಎರಡನೇ ಪದ = 38

$$a + (2-1)d = 38 (\because a_n = a + (n-1)d)$$

$a + d = 38$.................. (1)

ಆರನೇ ಪದ= – 22

$$a + (6-1)d = -22$$

$a + 5d = -22$................(2)

(1) ಮತ್ತು (2)ನ್ನು ಬಿಡಿಸಿದಾಗ

$$-22 = 38 - d + 5d$$
$$\Rightarrow -22 - 38 = 4d$$
$$\Rightarrow -60 = 4d \Rightarrow d = -15$$

ಸಮೀಕರಣ (1)ರಲ್ಲಿ d ಬೆಲೆಯಾದ –15ನ್ನು ಹಾಕಿದಾಗ

$$a = 38 - (-15)$$
$$\Rightarrow 38 + 15 = 53$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

DIFFERENTIABILITY

8. Differentiate w.r.t. x:

i) $\sqrt{a + \sqrt{a+x}}$ ii) $\frac{\sqrt{1-x^2}}{1+x^2}$ iii) $\frac{\sqrt{a+x} - \sqrt{a-x}}{\sqrt{a+x} + \sqrt{a-x}}$

iv) $x + \sqrt{x^3 - 1}$ v) $e^{\sin\sqrt{x}}$ vi) $\log\left(x + \sqrt{x^2 + a^2}\right)$

vii) $\frac{\sin x}{\sqrt{\cos x}}$ Contd/–

iv) Soln :– $\frac{d}{dx}\left\{x + \sqrt{x^3 - 1}\right\} = \frac{d}{dx}x + \frac{d}{dx}(x^3 - 1)^{1/2}$

$$\Rightarrow 1 + \frac{1}{2}(x^3 - 1)^{-1/2} \cdot \frac{d}{dx}(x^3 - 1)$$
$$\Rightarrow 1 + \frac{1}{2\sqrt{x^3 - 1}} \cdot (3x^2 - 0)$$
$$\Rightarrow 1 + \frac{3x^2}{2\sqrt{x^3 - 1}}$$
$$\Rightarrow \frac{2\sqrt{x^3 - 1} + 3x^2}{2\sqrt{x^3 - 1}}$$

v) Soln :– $\frac{d}{dx}e^{\sin\sqrt{x}} = e^{\sin\sqrt{x}} \cdot \frac{d}{dx}\sin\sqrt{x}$

$$= e^{\sin\sqrt{x}} \cdot (\cos\sqrt{x}) \cdot \frac{d}{dx}x^{1/2}$$
$$= e^{\sin\sqrt{x}} \cdot (\cos\sqrt{x})\left(\frac{1}{2}x^{-1/2}\right)$$
$$= \frac{e^{\sin\sqrt{x}} \cdot (\cos\sqrt{x})}{2\sqrt{x}}.$$

vi) Soln :– $\frac{d}{dx}\log\left(x + \sqrt{a^2 + x^2}\right)$

$$= \frac{1}{x + \sqrt{a^2 + x^2}} \frac{d}{dx}\left(x + \sqrt{x^2 + a^2}\right)$$
$$= \frac{1}{x + \sqrt{x^2 + a^2}} \cdot \left\{1 + \frac{1}{2\sqrt{x^2 + a^2}} \cdot (2x)\right\}$$
$$= \frac{1}{\left(x + \sqrt{x^2 + a^2}\right)} \cdot \left\{\frac{\sqrt{x^2 + a^2} + x}{\sqrt{x^2 + a^2}}\right\}$$
$$= \frac{1}{\sqrt{x^2 + a^2}}$$

vii) Soln :– $\frac{d}{dx}\frac{\sin x}{\sqrt{\cos x}}$

$$= \frac{\sqrt{\cos x} \cdot \cos x - \sin x \frac{d}{dx}\sqrt{\cos x}}{\cos x}$$
$$= \frac{1}{\cos x}\left[(\cos x)^{3/2} - \sin x\left(\frac{1}{2\sqrt{\cos x}}\right)(-\sin x)\right]$$
$$\Rightarrow \frac{1}{\cos x}\left[\frac{2\cos^2 x + \sin^2 x}{2\sqrt{\cos x}}\right]$$
$$\Rightarrow \frac{\cos^2 x + 1}{2(\cos x)^{3/2}}.$$

9. Differentiate w.r.t. x:

i) $\frac{1}{3}\sqrt{\sec^2 x - 1}$ ii) $\log\left[\tan\left(\frac{\pi}{4} + \frac{x}{2}\right)\right]$

iii) $\sin(e^x \log x)$ iv) $\frac{e^x + \log x}{\sin(3x)}$

i) Soln :– $\frac{d}{dx}\frac{1}{3}\sqrt{\sec^2 x - 1} = \frac{d}{dx}\frac{1}{3}\sqrt{\tan^2 x}$

$$\Rightarrow \frac{d}{dx}\frac{1}{3}|\tan x| \Rightarrow \frac{1}{3}\frac{d}{dx}|\tan x|$$
$$\Rightarrow \frac{1}{3}\frac{\tan x}{|\tan x|}\left\{\frac{d}{dx}\tan x\right\}$$
$$\left\{\because \frac{d}{dx}|f(x)| = \frac{f(x)}{|f(x)|} \cdot f'(x)\right\}$$
$$\Rightarrow \frac{\tan x}{3|\tan x|}(\sec^2 x)$$

ii) Soln :– $\frac{d}{dx}\log\left[\tan\left(\frac{\pi}{4} + \frac{x}{2}\right)\right]$

$$= \frac{1}{\tan\left(\frac{\pi}{4} + \frac{x}{2}\right)} \cdot \frac{d}{dx}\tan\left(\frac{\pi}{4} + \frac{x}{2}\right)$$
$$\Rightarrow \frac{1}{\tan\left(\frac{\pi}{4} + \frac{x}{2}\right)} \cdot \sec^2\left(\frac{\pi}{4} + \frac{x}{2}\right) \cdot \frac{d}{dx}\left(\frac{\pi}{4} + \frac{x}{2}\right)$$
$$\Rightarrow \frac{\cos\left(\frac{\pi}{4} + \frac{x}{2}\right)}{\sin\left(\frac{\pi}{4} + \frac{x}{2}\right)} \cdot \frac{1}{\cos^2\left(\frac{\pi}{4} + \frac{x}{2}\right)} \cdot \left(0 + \frac{1}{2}\right)$$
$$\Rightarrow \frac{1}{2\sin\left(\frac{\pi}{4} + \frac{x}{2}\right)\cos\left(\frac{\pi}{4} + \frac{x}{2}\right)}$$
$$\Rightarrow \frac{1}{\sin 2\left(\frac{\pi}{4} + \frac{x}{2}\right)}$$
$$\Rightarrow \frac{1}{\sin\left(\frac{\pi}{2} + \frac{x}{1}\right)}$$
$$\Rightarrow \frac{1}{\cos x} = \sec x$$

iii) $\sin(e^x \log x)$

Soln :– $\frac{d}{dx}\sin(e^x \cdot \log x)$

$$= \cos(e^x \log x) \cdot \frac{d}{dx}(e^x \log x)$$
$$\Rightarrow \cos(e^x \log x)\left\{e^x \frac{d}{dx}\log x + \log x \cdot \frac{d}{dx}e^x\right\}$$

(Contd....)

ವಿದ್ಯಾರ್ಥಿ ವೇತನ ಕೈಪಿಡಿ

ಯುಕೆ-ಇಂಡಿಯಾ ಟೋಫೆಲ್

ಯುಕೆಯಲ್ಲಿ ಪೂರ್ಣಾವಧಿಯ ಯುಜಿ/ಪಿಜಿ ಅಧ್ಯಯನವನ್ನು ನಡೆಸುತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಯೋಜನೆಯಾಗಿದೆ. ಎಜುಕೇಷನಲ್ ಟೆಸ್ಟಿಂಗ್ ಸರ್ವೀಸ್ (ಇಟಿಎಸ್) ಈ ಅವಕಾಶವನ್ನು ನ್ಯಾಷನಲ್ ಇಂಡಿಯನ್ ಸ್ಟೂಡೆಂಟ್ಸ್ ಅಂಡ್ ಅಲ್ಯುಮ್ನಿ ಯೂನಿಯನ್ (ಎನ್‌ಐಎಸ್‌ಎಯು) ಸಹಯೋಗದೊಂದಿಗೆ ನೀಡುತ್ತಿದೆ.

- **ಅರ್ಹತೆ:** ಯುಕೆ ವಿಶ್ವವಿದ್ಯಾಲಯಗಳಲ್ಲಿ ಪದವಿ ಅಥವಾ ಸ್ನಾತಕೋತ್ತರ ಕೋರ್ಸ್‌ಗಳಿಗಾಗಿ ಅರ್ಜಿ ಸಲ್ಲಿಸುವ ಭಾರತೀಯ ನಾಗರಿಕರು ಅರ್ಹರು. ಅರ್ಜಿದಾರರು 2024ರ ಏಪ್ರಿಲ್ 1ರಿಂದ ಜುಲೈ 15ರೊಳಗೆ ಟೋಫೆಲ್ ಐಬಿಟಿ ಪರೀಕ್ಷೆಯನ್ನು ತೆಗೆದುಕೊಂಡಿರಬೇಕು. ಹಾಗೆಯೇ ಈ ಪರೀಕ್ಷೆಯಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಗಳಿಸಿರಬೇಕು.
- **ಆರ್ಥಿಕ ಸಹಾಯ:** ತಲಾ ₹2,50,000ದಂತೆ ಒಂದು ಬಾರಿಯ ವಿದ್ಯಾರ್ಥಿವೇತನ
- **ಅರ್ಜಿ ಸಲ್ಲಿಸಲು ಕೊನೆ ದಿನ:** 15-07-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/TOEF1

ಆಸ್ಪೈರ್ ಲೀಡರ್ಸ್ ಪ್ರೋಗ್ರಾಂ

ವಿವರ: ಜಾಗತಿಕ ಆಸ್ಪೈರ್ ಲೀಡರ್ಸ್ ಯೋಜನೆಯು ಆಸ್ಪೈರ್ ಇನ್‌ಸ್ಟಿಟ್ಯೂಟ್ ನೀಡುವ ಸಂಪೂರ್ಣ ಧನಸಹಾಯದ 14 ವಾರಗಳ ಆನ್‌ಲೈನ್ ನಾಯಕತ್ವ ಯೋಜನೆಯಾಗಿದೆ.

ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡಲು ಮತ್ತು ಸುಸಜ್ಜಿತ ವೃತ್ತಿಪರರಾಗುವಂತೆ ಸಹಾಯ ಮಾಡುವ ನಿಟ್ಟಿನಲ್ಲಿ ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ.

- **ಅರ್ಹತೆ:** ಈ ಯೋಜನೆಯು 18 ರಿಂದ 29 ವಯೋಮಿತಿಯಲ್ಲಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ.
- **ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ:** ₹8,00,000ಕ್ಕಿಂತ ಕಡಿಮೆ ಇರಬೇಕು. ಕಳೆದ ಮೂರು ವರ್ಷಗಳಲ್ಲಿ ಪದವಿಪೂರ್ವ ಕೋರ್ಸ್‌ಗಳಿಗೆ ದಾಖಲಾದ ಅಥವಾ ಪೂರ್ಣಗೊಳಿಸಿದವರೂ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಇಂಗ್ಲಿಷ್‌ನಲ್ಲಿ ಮಧ್ಯಂತರ ಮಟ್ಟದ ಪ್ರಾವೀಣ್ಯವನ್ನು ಹೊಂದಿರಬೇಕು.
- **ಆರ್ಥಿಕ ಸಹಾಯ:** ತರಬೇತಿ ಮಾಡ್ಯೂಲ್‌ಗಳಿಗೆ ಉಚಿತ ಪ್ರವೇಶ ಇರಲಿದೆ. ಜತೆಗೆ ಹಾವರ್ಡ್ ಅಧ್ಯಾಪಕರಿಂದ ಲೈವ್ ಸೆಷನ್‌ಗಳು ನಡೆಯುತ್ತವೆ.
- **ಅರ್ಜಿ ಸಲ್ಲಿಸಲು ಕೊನೆ ದಿನ:**03-07-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/ALPS1

ಮೈರೇ ಅಸೆಟ್ ಫೌಂಡೇಷನ್

- **ವಿವರ:** ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಮೈರೇ ಅಸೆಟ್ ಫೌಂಡೇಷನ್ ಅರ್ಜಿಗಳನ್ನು ಆಹ್ವಾನಿಸುತ್ತಿದೆ.
- **ಅರ್ಹತೆ:** ಭಾರತದಾದ್ಯಂತ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 8,00,000 ಮೀರಬಾರದು.
- **ಆರ್ಥಿಕ ಸಹಾಯ:** ₹ 50,000
- **ಅರ್ಜಿ ಸಲ್ಲಿಸಲು ಕೊನೆ ದಿನ:** 26-06-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/MAFS1


ಕೋಟಕ್ ಎಜುಕೇಷನ್ ಫೌಂಡೇಷನ್

10ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಕೋಟಕ್ ಎಜುಕೇಷನ್ ಫೌಂಡೇಷನ್ ಸ್ಕಾಲರ್‌ಶಿಪ್‌ಗಳಿಗೆ ಅರ್ಜಿ ಆಹ್ವಾನಿಸಿದೆ.

- **ಅರ್ಹತೆ:** 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ (ಎಸ್‌ಎಸ್‌ಸಿ/ ಸಿಬಿಎಸ್‌ಸಿ/ ಐಸಿಎಸ್‌ಸಿ) ಶೇ 85ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 3,20,000 ಅಥವಾ ಕಡಿಮೆ ಆಗಿರಬೇಕು.
- **ಆರ್ಥಿಕ ಸಹಾಯ:** ಮಾರ್ಗದರ್ಶನದ ಜತೆಗೆ ತಿಂಗಳಿಗೆ ₹3,500 ವಿದ್ಯಾರ್ಥಿವೇತನ.
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-06-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/KJSP2

ಸ್ಪಷ್ಟ ಗುರಿ ಇರಲಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ




ಪ್ರದೀಪ್ ಕುಮಾರ್ ವಿ.

- **ಓದಿನೆಡೆಗೆ ಏಕಾಗ್ರತೆ ಬೆಳೆಸಿಕೊಳ್ಳುವುದು ಹೇಗೆ?**

ಹೆಸರು, ಊರು ತಿಳಿಸಿಲ್ಲ.

ನಿಮ್ಮ ವಿದ್ಯಾಭ್ಯಾಸದ ನಂತರ ವೃತ್ತಿಪರ ಮತ್ತು ವೈಯಕ್ತಿಕ ಬದುಕಿನ ಕನಸುಗಳೇನು? ಭವಿಷ್ಯದ ಕನಸುಗಳಂತೆ, ವೃತ್ತಿ ಮತ್ತು ವೈಯಕ್ತಿಕ ಜೀವನದಲ್ಲಿ ಯಶಸ್ವಿಯಾಗಲು ಸ್ಪಷ್ಟವಾದ, ಸಾಧಿಸಬಹುದಾದ ಗುರಿಗಳನ್ನು ನಿಗದಿಪಡಿಸಿ.



ಈ ಗುರಿಗಳು ದೃಢವಾಗಿದ್ದರೆ, ಸ್ವಯಂಪ್ರೇರಣೆ ತಾನೇ ತಾನಾಗಿ ಮೂಡುತ್ತದೆ. ಪ್ರೇರಣೆಯೆಂದರೆ, ನಮ್ಮ ಗುರಿಗಳತ್ತ ನಮ್ಮನ್ನು ಕ್ರಿಯಾತ್ಮಕವಾಗಿಸುವ ಚಾಲನಾ ಶಕ್ತಿ. ಏಕೆಂದರೆ, ಅತ್ಯಂತ ಶಕ್ತಿಶಾಲಿಯಾದ ಆಂತರಿಕ ಪ್ರೇರಣೆಯೇ ಸ್ಫೂರ್ತಿಗೂ, ಚೈತನ್ಯಕ್ಕೂ, ಕಾರ್ಯತತ್ಪರತೆಗೂ ಮೂಲ ಪ್ರೇರಣೆ.

ಕನಸುಗಳನ್ನು ಕಾಣುವುದರ ಜೊತೆಗೆ ನಮ್ಮಲ್ಲಿ ಅವುಗಳನ್ನು ಸಾಧಿಸುವ ಛಲ ಮತ್ತು ಆತ್ಮವಿಶ್ವಾಸ ಇರಬೇಕು. ಹಾಗಾಗಿ, ಈ ಸ್ವಯಂಪ್ರೇರಣೆಯ ಚಾಲನಾ ಶಕ್ತಿಯಿಂದಲೇ ಓದಿನೆಡೆಗೆ ನಿಮ್ಮ ಏಕಾಗ್ರತೆಯನ್ನು ಬೆಳೆಸಿಕೊಳ್ಳಬಹುದು. ಇದಲ್ಲದೆ, ನಿಮ್ಮ ಓದುವಿಕೆ ಪರಿಣಾಮಕಾರಿಯಾಗಿರಬೇಕು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://youtu.be/3PzmKRaJHmk

- **ನಾನು ನಿವೃತ್ತ ಸರ್ಕಾರಿ ನೌಕರ. ಸಮಯವನ್ನು ಸಾರ್ಥಕವಾಗಿ ಬಳಸಲು ಯಾವ ಕೋರ್ಸ್ ಮಾಡಬಹುದು?**

ಹೆಸರು, ಊರು ತಿಳಿಸಿಲ್ಲ.

ಸಾಮಾನ್ಯವಾಗಿ, ವೃತ್ತಿಯಿಂದ ನಿವೃತ್ತರಾದ ಬಳಿಕ, ಮನೆಯಿಂದಲೇ ನಿಮ್ಮ ಸಮಯಕ್ಕೆ ಅನುಗುಣವಾಗಿ ಅರೆಕಾಲಿಕ ಕೆಲಸಗಳನ್ನು ಮಾಡುವ ಅವಕಾಶಗಳು ಈಗ ಲಭ್ಯ. ನಿಮ್ಮ ಸಾಮರ್ಥ್ಯ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯನ್ನು ಪ್ರತಿಬಿಂಬಿಸುವ ಕ್ಷೇತ್ರಗಳ ಬಗ್ಗೆ ಚಿಂತಿಸಿ, ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್ ಆಯ್ಕೆ ಮಾಡಿ. ಉದಾಹರಣೆಗೆ ಜಾಲತಾಣಗಳು, ಬ್ಲಾಗ್‌ಗಳು, ವಿಡಿಯೊಗಳಿಗೆ ವಿಷಯಾಭಿವೃದ್ಧಿ, ಅನುವಾದ, ಸಬ್‌ಟೈಟಲ್ಸ್, ಟ್ರಾನ್ಸ್ಕ್ರಿಪ್ಷನ್ ಮತ್ತು ಡಿಜಿಟಲೀಕರಣ, ಬೋಧನೆ, ಗ್ರಾಹಕ ಸಂಬಂಧಿತ ಸಂಶೋಧನೆ ಮತ್ತು ಸೇವೆಗಳು, ಮಾರುಕಟ್ಟೆಯ ಚಟುವಟಿಕೆಗಳು, ದತ್ತಾಂಶ ಪರಿಷ್ಕರಣೆ ಮತ್ತು ನಿರ್ವಹಣೆ ಮುಂತಾದ ಕ್ಷೇತ್ರಗಳನ್ನು ಪರಿಗಣಿಸಬಹುದು. ಕೋರ್ಸ್ ಆಯ್ಕೆಯ ಮಾಹಿತಿಗಾಗಿ ಗಮನಿಸಿ: https://www.mooc.org/

- **ಕಂಪ್ಯೂಟರ್ ವಿಜ್ಞಾನದಲ್ಲಿ ಡಿಪ್ಲೊಮಾ ಮುಗಿಸಿದ್ದೇನೆ. ಮುಂದೇನು ಮಾಡಬಹುದು?**

ಹೆಸರು, ಊರು ತಿಳಿಸಿಲ್ಲ.

ಡಿಪ್ಲೊಮಾ ನಂತರ ಸಿಇಟಿ ಪ್ರವೇಶ ಪರೀಕ್ಷೆಯನ್ನು ಬರೆದು, ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ ಬಿ.ಟೆಕ್‌ಗೆ ಸೇರಬಹುದು. ಅಥವಾ, ನಿಮಗೆ ಸೂಕ್ತವೆನಿಸುವ ಕೆಲಸಕ್ಕೆ ಸೇರಿ, ಬಿ.ಟೆಕ್ (ಅರೆಕಾಲಿಕ) ಮಾಡಬಹುದು. ಬಿಟೆಕ್ ಮಾಡುವ ಆಸಕ್ತಿಯಿಲ್ಲದಿದ್ದರೆ, ಹೆಚ್ಚಿನ ತಜ್ಞತೆಗಾಗಿ, ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ಸರ್ಟಿಫಿಕೆಟ್/ ಡಿಪ್ಲೊಮಾ ಕೋರ್ಸ್ ಮಾಡಬಹುದು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ಕೇಂದ್ರದ ನೂತನ ಸಚಿವರು 2024

ಅಮಿತ್ ಶಾ (ಗುಜರಾತ್) ▲
ವಯಸ್ಸು: **59**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎಸ್‌ಸಿ (ಬಯೊ ಕೆಮಿಸ್ಟ್ರಿ)**

• ಮೋದಿ ಅವರ ಅತ್ಯಂತ ಆತ್ಮೀಯರಾಗಿರುವ ಅಮಿತ್ ಶಾ, ಸತತ ಎರಡನೇ ಬಾರಿಗೆ ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಬಿಜೆಪಿಯ 'ಚುನಾವಣಾ ಚಾಣಕ್ಯ' ಎನಿಸಿಕೊಂಡಿರುವ ಅವರು ಎನ್‌ಡಿಎ ಮೈತ್ರಿಕೂಟವನ್ನು ಮತ್ತೆ ಅಧಿಕಾರಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. 2019ರಿಂದಲೂ ಗೃಹ ಖಾತೆ ನಿಭಾಯಿಸಿದ್ದಾರೆ. 2014ರಿಂದ 2020ರ ವರೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು..

ರಾಜನಾಥ್ ಸಿಂಗ್ (ಉತ್ತರ ಪ್ರದೇಶ) ▲
ವಯಸ್ಸು: **72**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಎಸ್‌ಸಿ (ಭೌತವಿಜ್ಞಾನ)**

• ರಾಜ್‌ನಾಥ್ ಸಿಂಗ್ ಅವರು ಮೋದಿ ಸರ್ಕಾರದ ಮೊದಲ ಅವಧಿಯಲ್ಲಿ ಗೃಹ ಸಚಿವರಾಗಿ, ಎರಡನೇ ಅವಧಿಯಲ್ಲಿ ರಕ್ಷಣಾ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಮಾಜಿ ಪ್ರಧಾನಿ ವಾಜಪೇಯಿ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ನಿತಿನ್ ಗಡ್ಕರಿ (ಮಹಾರಾಷ್ಟ್ರ) ▲
ವಯಸ್ಸು: **67**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಕಾಂ, ಎಲ್‌ಎಲ್‌ಬಿ, ವ್ಯಾಪಾರ ನಿರ್ವಹಣೆಯಲ್ಲಿ ಡಿಪ್ಲೊಮಾ**

• ನಿತಿನ್ ಗಡ್ಕರಿ ಅವರು, ನರೇಂದ್ರ ಮೋದಿ ಸರ್ಕಾರದ ಎರಡೂ ಅವಧಿಗಳಲ್ಲಿ ಸಚಿವರಾಗಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ, ಜಲಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನಶ್ಚೇತನ ಖಾತೆಗಳನ್ನು ನಿಭಾಯಿಸಿದ್ದಾರೆ. ನಾಗ್ಪುರ ಕ್ಷೇತ್ರದಿಂದ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೂ ಆಗಿದ್ದರು.

ಎಸ್.ಜೈಶಂಕರ್ (ಗುಜರಾತ್) ▲
ವಯಸ್ಸು: **69**, ಪಕ್ಷ:**ಬಿಜೆಪಿ**
ವಿದ್ಯಾರ್ಹತೆ: **ಎಂಎ, ರಾಜ್ಯಶಾಸ್ತ್ರ**

• ರಾಜ್ಯಸಭಾ ಸದಸ್ಯರಾಗಿರುವ ಸುಬ್ರಹ್ಮಣ್ಯಂ ಜೈಶಂಕರ್ ಅವರು ವಿದೇಶಾಂಗ ವ್ಯವಹಾರಗಳ ಖಾತೆ ನಿಭಾಯಿಸಿದ್ದು, ಮತ್ತೊಮ್ಮೆ ಅವಕಾಶ ಲಭಿಸಿದೆ. ವಿದೇಶಾಂಗ ಇಲಾಖೆಯ ಮಾಜಿ ಕಾರ್ಯದರ್ಶಿಯಾಗಿರುವ ಇವರು 1977ನೇ ತಂಡದ ಐಎಫ್‌ಎಸ್ ಅಧಿಕಾರಿ. ಚೀನಾ, ಅಮೆರಿಕ, ಸಿಂಗಪುರದ ರಾಯಭಾರಿಯಾಗಿ ಕೆಲಸ ಮಾಡಿದ್ದಾರೆ. 2019ರಲ್ಲಿ ಪದ್ಮಶ್ರೀ ನೀಡಿ ಸರ್ಕಾರ ಗೌರವಿಸಿತ್ತು.

ಪೀಯೂಷ್ ಗೋಯಲ್ (ಮಹಾರಾಷ್ಟ್ರ) ▲
ವಯಸ್ಸು: **59**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಸಿಎ ಮತ್ತು ಕಾನೂನು ಪದವಿ**

• ರಾಜ್ಯಸಭಾ ಸದಸ್ಯರಾಗಿದ್ದ ಪೀಯೂಷ್ ಗೋಯಲ್, ಇದೇ ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿದು ಮುಂಬೈ ಉತ್ತರ ಕ್ಷೇತ್ರದಿಂದ ಗೆದ್ದಿದ್ದಾರೆ. ಎನ್‌ಡಿಎ ಸರ್ಕಾರದಲ್ಲಿ ಈಗಾಗಲೇ ರೈಲ್ವೆ, ಕಲ್ಲಿದ್ದಲು, ವಿದ್ಯುತ್, ನವೀಕರಿಸಬಹುದಾದ ಇಂಧನ, ಗಣಿ, ವಾಣಿಜ್ಯ ಮತ್ತು ಕೈಗಾರಿಕಾ ಖಾತೆಗಳನ್ನು ನಿಭಾಯಿಸಿದ್ದಾರೆ.

ಧರ್ಮೇಂದ್ರ ಪ್ರಧಾನ್ (ಒಡಿಶಾ) ▲
ವಯಸ್ಸು: **54**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಟೆಕ್, ಎಂಬಿಎ**

• ಕೇಂದ್ರದ ಮಾಜಿ ಸಚಿವ ದೇವೇಂದ್ರ ಪ್ರಧಾನ್ ಅವರ ಪುತ್ರ ಧರ್ಮೇಂದ್ರ ಪ್ರಧಾನ್, ನರೇಂದ್ರ ಮೋದಿ ಸರ್ಕಾರದ ಎರಡು ಅವಧಿಗಳಲ್ಲಿ ಉಕ್ಕು, ಕೌಶಲಾಭಿವೃದ್ಧಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವರಾಗಿದ್ದರು. ಬಡವರಿಗೆ ಉಚಿತ ಅಡುಗೆ ಅನಿಲ ಸಂಪರ್ಕ ಕಲ್ಪಿಸುವ ಯೋಜನೆ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಒಡಿಶಾದಲ್ಲಿ ಬಿಜೆಪಿ ನೆಲೆ ವಿಸ್ತರಿಸಲು ಶ್ರಮಿಸಿದ್ದಾರೆ.

ಮನ್ಸುಖ್ ಮಾಂಡವೀಯ (ಗುಜರಾತ್) ▲
ವಯಸ್ಸು: **52**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಎ, ಪಿಎಚ್.ಡಿ**

• ರಾಜ್ಯಸಭಾ ಸದಸ್ಯರಾಗಿರುವ ಮನ್ಸುಖ್ ಮಾಂಡವೀಯ ಅವರು ಮೋದಿ 2.0 ಸರ್ಕಾರದಲ್ಲಿ ರಸಗೊಬ್ಬರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಹೊಂದಿದ್ದರು. 2012 ರಲ್ಲಿ ಮೊದಲ ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಎಬಿವಿಪಿ ಮೂಲಕ ರಾಜಕೀಯ ಪ್ರವೇಶಿಸಿ, ಪಕ್ಷದಲ್ಲಿ ಹಲವು ಹುದ್ದೆಗಳನ್ನು ನಿಭಾಯಿಸಿದ್ದಾರೆ. 2002ರಲ್ಲಿ ಗುಜರಾತ್ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಶಿವರಾಜ್ ಸಿಂಗ್ ಚೌಹಾಣ್ (ಮಧ್ಯಪ್ರದೇಶ) ▲
ವಯಸ್ಸು: **65**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಎ**

• ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಈ ಚುನಾವಣೆ ಮೂಲಕ ಮತ್ತೆ ರಾಷ್ಟ್ರ ರಾಜಕಾರಣಕ್ಕೆ ಮರಳಿದ್ದಾರೆ. ಅವರು ವಿದಿಶಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದಾರೆ. ಮಧ್ಯಪ್ರದೇಶದಲ್ಲಿ ದೀರ್ಘ ಅವಧಿಗೆ ಸಿ.ಎಂ ಆದ ಹಿರಿಮೆ ಅವರದ್ದು. ಅದಕ್ಕೂ ಮುನ್ನ ಅವರು 1991ರಿಂದ 2005ರ ವರೆಗೆ ವಿದಿಶಾ ಕ್ಷೇತ್ರದ ಸಂಸದರಾಗಿದ್ದರು.

ಜ್ಯೋತಿರಾದಿತ್ಯ ಸಿಂಧಿಯಾ (ಮಧ್ಯಪ್ರದೇಶ) ▲
ವಯಸ್ಸು: **53**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ, ಎಂಬಿಎ**

• ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಜೀವನ ಆರಂಭಿಸಿದ ಜ್ಯೋತಿರಾದಿತ್ಯ ಸಿಂಧಿಯಾ 2020 ರಲ್ಲಿ ಬಿಜೆಪಿ ಸೇರಿದರು. ಆ ಬಳಿಕ ನಾಗರಿಕ ವಿಮಾನಯಾನ ಸಚಿವರೂ ಆದರು. 2020ರಲ್ಲಿ ರಾಜ್ಯಸಭಾ ಸದಸ್ಯರಾದರು. ಇವರು ಮಧ್ಯಪ್ರದೇಶದ ಗುನಾ ಕ್ಷೇತ್ರದಿಂದ ಸತತ ಐದು ಬಾರಿ ಗೆದ್ದಿದ್ದಾರೆ. ನಾಲ್ಕು ಸಲ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ ಜಯಿಸಿದ್ದಾರೆ.

ಅಶ್ವಿನಿ ವೈಷ್ಣವ್ (ಒಡಿಶಾ) ▲
ವಯಸ್ಸು: **53**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಇ, ಎಂಟೆಕ್, ಎಂಬಿಎ**

• ಮಾಜಿ ಐಎಎಸ್ ಅಧಿಕಾರಿಯಾಗಿರುವ ಅಶ್ವಿನಿ ವೈಷವ್ ಅವರು ಮೋದಿ ಸರ್ಕಾರದ ಎರಡನೇ ಅವಧಿಯಲ್ಲಿ ರೈಲ್ವೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 2019ರಲ್ಲಿ ಬಿಜೆಪಿ ಸೇರಿದ ಅವರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ವಾಜಪೇಯಿ ಅವರ ಅವಧಿಯಲ್ಲಿ ಪ್ರಧಾನಿ ಕಚೇರಿಯಲ್ಲಿ ಡೆಪ್ಯೂಟಿ ಕಾರ್ಯದರ್ಶಿಯಾಗಿದ್ದರು.

ಕೆ.ರಾಮಮೋಹನ್ ನಾಯ್ಡು (ಆಂಧ್ರಪ್ರದೇಶ) ▲
ವಯಸ್ಸು: **36**, ಪಕ್ಷ: **ಟಿ ಡಿ ಪಿ**
ವಿದ್ಯಾರ್ಹತೆ: **ಬಿ.ಟೆಕ್, ಎಂಬಿಎ**

• ಆಂಧ್ರಪ್ರದೇಶದ ಶ್ರೀಕಾಕುಳಂ ಸಂಸದರಾಗಿರುವ ಕೆ.ರಾಮಮೋಹನ್ ನಾಯ್ಡು ಮಾಜಿ ಕೇಂದ್ರ ಸಚಿವ ದಿವಂಗತ ಕಿಂಜರಾಪು ಯರ್ರನ್ನಾಯ್ಡು ಅವರ ಮಗ. ಸತತ ಮೂರನೇ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಇವರು ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರಿಗೆ ಅತ್ಯಾಪ್ತರು. ಇವರ ಚಿಕ್ಕಪ್ಪ, ಮಾವ ಸೇರಿದಂತೆ ಕುಟುಂಬದ ಹಲವರು ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ.

ಪೆಮ್ಮಸಾನಿ ಚಂದ್ರಶೇಖರ್ (ಆಂಧ್ರಪ್ರದೇಶ) ■
ವಯಸ್ಸು: **47**, ಪಕ್ಷ: **ಟಿಡಿಪಿ**
ವಿದ್ಯಾರ್ಹತೆ: **ಎಂಬಿಬಿಎಸ್, ಎಂಡಿ**

• ವೃತ್ತಿಯಿಂದ ವೈದ್ಯರಾಗಿರುವ ಚಂದ್ರಶೇಖರ್, ಆಂಧ್ರಪ್ರದೇಶದ ಗುಂಟೂರು ಕ್ಷೇತ್ರದ ಸಂಸದರು. 'ಯು ವರ್ಲ್ಡ್' ಎನ್ನುವ ಆನ್‌ಲೈನ್ ಕೋಚಿಂಗ್ ಸಂಸ್ಥೆ ನಡೆಸುವ ಮೂಲಕ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ತಂದೆಯ ಕಾಲದಿಂದಲೂ ಟಿಡಿಪಿಯ ನಿಷ್ಠಾವಂತ ಕಾರ್ಯಕರ್ತರಾಗಿರುವ ಇವರಿಗೆ ಸಂಸದರಾಗಿ ಗೆದ್ದ ಮೊದಲ ಅವಧಿಯಲ್ಲೇ ಮಂತ್ರಿಯಾಗುವ ಭಾಗ್ಯ ಒದಗಿಬಂದಿದೆ.

ಚಿರಾಗ್ ಪಾಸ್ವಾನ್ (ಬಿಹಾರ) ▲
ವಯಸ್ಸು: **41**, ಪಕ್ಷ: **ಎಲ್‌ಜೆಪಿ (ಆರ್‌ವಿ)**
ವಿದ್ಯಾರ್ಹತೆ: **ಎಂಜಿನಿಯರಿಂಗ್ (ಅಪೂರ್ಣ)**

• ಮಾಜಿ ಕೇಂದ್ರ ಸಚಿವ ರಾಮ್‌ವಿಲಾಸ್ ಪಾಸ್ವಾನ್ ಅವರ ಪುತ್ರನಾದ ಚಿರಾಗ್ ಪಾಸ್ವಾನ್, ಎಲ್‌ಜೆಪಿ (ರಾಮ್ ವಿಲಾಸ್ ಬಣ) ಅಧ್ಯಕ್ಷರಾಗಿದ್ದಾರೆ. ಸಿನಿಮಾದಲ್ಲಿ ಕಂಗನಾ ರನೌತ್ ಜತೆ ಹೀರೊ ಆಗಿ ನಟಿಸಿದ್ದ ಚಿರಾಗ್ ಪಾಸ್ವಾನ್, ನಂತರ ರಾಜಕೀಯಕ್ಕೆ ಬಂದರು. ಮೂರನೇ ಬಾರಿ ಸಂಸದರಾಗಿರುವ ಅವರು ಪ್ರಸ್ತುತ ಬಿಹಾರದ ಹಾಜಿಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಅನುಪ್ರಿಯಾ ಪಟೇಲ್ (ಉತ್ತರ ಪ್ರದೇಶ) ■
ವಯಸ್ಸು: **43**, ಪಕ್ಷ: **ಅಪ್ನಾ ದಳ (ಎಸ್)**
ವಿದ್ಯಾರ್ಹತೆ: **ಎಂಎ, ಎಂಬಿಎ**

• ಶಿಕ್ಷಕಿ, ಸಮಾಜ ಸೇವಕಿಯಾಗಿದ್ದ ಅನುಪ್ರಿಯಾ ಪಟೇಲ್ ಉತ್ತರ ಪ್ರದೇಶದ ಮಿರ್ಜಾಪುರ ಕ್ಷೇತ್ರದ ಸಂಸದೆ. ಅನುಪ್ರಿಯಾ ತಾಯಿ ಕೃಷ್ಣಾ ಪಟೇಲ್ ಅಪ್ನಾ ದಳ (ಕೆ) ಮುಖ್ಯಸ್ಥೆಯಾಗಿದ್ದರೆ, ಇವರು ಅಪ್ನಾ ದಳ (ಎಸ್) ಅಧ್ಯಕ್ಷೆಯಾಗಿದ್ದಾರೆ. 2016ರಿಂದ 2019ರವರೆಗೆ ಮೋದಿ ಅವರ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಸಚಿವೆಯಾಗಿದ್ದರು.

ಜಿತನ್ ರಾಮ್ ಮಾಂಝಿ (ಬಿಹಾರ) ▲
ವಯಸ್ಸು: **79**, ಪಕ್ಷ: **ಹಿಂದೂಸ್ಥಾನಿ ಅವಾಮ್ ಮೋರ್ಚಾ**
ವಿದ್ಯಾರ್ಹತೆ: **ಪದವಿ**

• ಬಿಹಾರದ ಪ್ರಮುಖ ದಲಿತ ನಾಯಕರಾದ ಮಾಂಝಿ, ಪ್ರಸ್ತುತ ಗಯಾ ಕ್ಷೇತ್ರದ ಸಂಸದರು. ಬಿಹಾರ ಸರ್ಕಾರದಲ್ಲಿ ಹಲವು ಬಾರಿ ಸಚಿವರಾಗಿ, ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಕಾಂಗ್ರೆಸ್, ಜನತಾ ದಳ, ಜೆಡಿಯು, ಆರ್‌ಜೆಡಿ ಸೇರಿ ಹಲವು ಪಕ್ಷಗಳಲ್ಲಿದ್ದ ಇವರು ನಂತರ ಹಿಂದೂಸ್ತಾನ್ ಅವಾಮ್ ಮೋರ್ಚಾ ಸ್ಥಾಪನೆ ಮಾಡಿದರು.

ಹರ್‌ದೀಪ್‌ಸಿಂಗ್ ಪುರಿ (ಉತ್ತರ ಪ್ರದೇಶ) ▲
ವಯಸ್ಸು: **72**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಐಎಫ್‌ಎಸ್**

• ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿಯಾಗಿದ್ದ ಹರ್‌ದೀಪ್ ಸಿಂಗ್ ಪುರಿ, ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿಯಾಗಿದ್ದವರು. 2014ರಲ್ಲಿ ಬಿಜೆಪಿಗೆ ಸೇರ್ಪಡೆಯಾದ ಪುರಿ, ನಂತರ ಉತ್ತರ ಪ್ರದೇಶದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು. ನರೇಂದ್ರ ಮೋದಿ ಅವರ ಸಂಪುಟದಲ್ಲಿ ಹಲವು ಖಾತೆಗಳ ಸಚಿವರಾಗಿದ್ದರು.

ರಾಮದಾಸ್ ಅಠಾವಳೆ (ಮಹಾರಾಷ್ಟ್ರ) ▲
ವಯಸ್ಸು: **64**, ಪಕ್ಷ: **ಆರ್‌ಪಿಐ (ಎ)**
ವಿದ್ಯಾರ್ಹತೆ: **ಪದವಿ**

• ಮಹಾರಾಷ್ಟ್ರದ ಪ್ರಮುಖ ದಲಿತ ನಾಯಕರಾದ ರಾಮದಾಸ್ ಅಠಾವಳೆ ಭಾರತೀಯ ರಿಪಬ್ಲಿಕನ್ ಪಕ್ಷದ (ಎ) ಅಧ್ಯಕ್ಷರು. ಹಿಂದೆ ಮಹಾರಾಷ್ಟ್ರ ಸರ್ಕಾರದಲ್ಲಿ ಸಚಿವರಾಗಿದ್ದ ಇವರು, ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಮೋದಿ ಅವರ ಸಂಪುಟದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವರಾಗಿದ್ದರು. ಪ್ರಸ್ತುತ ರಾಜ್ಯಸಭಾ ಸದಸ್ಯರಾಗಿದ್ದಾರೆ.

ಜಯಂತ್ ಚೌಧರಿ (ಉತ್ತರ ಪ್ರದೇಶ) ●
ವಯಸ್ಸು: **45**, ಪಕ್ಷ: **ಆರ್‌ಎಲ್‌ಡಿ**
ವಿದ್ಯಾರ್ಹತೆ:**ಎಂಎಸ್‌ಸಿ**

• ಆರ್‌ಎಲ್‌ಡಿಯ ರಾಷ್ಟ್ರೀಯ ಉಪಾಧ್ಯಕ್ಷರಾಗಿರುವ ಜಯಂತ್ ಚೌಧರಿ, ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಮೊಮ್ಮಗ. 2009ರಲ್ಲಿ ಮಥುರಾದಿಂದ ಸಂಸದರಾಗುವ ಮೂಲಕ ರಾಜಕೀಯ ಜೀವನ ಆರಂಭಿಸಿದ್ದರು. ಮೋದಿ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ನಂತರ ಎನ್‌ಡಿಎ ಸೇರಿದರು. ಪ್ರಸ್ತುತ ರಾಜ್ಯಸಭಾ ಸದಸ್ಯರು.

ಪ್ರತಾಪ್ ರಾವ್ ಜಾಧವ್ (ಮಹಾರಾಷ್ಟ್ರ) ●
ವಯಸ್ಸು: **63**, ಪಕ್ಷ: **ಶಿವಸೇನಾ (ಶಿಂದೆ ಬಣ)**
ವಿದ್ಯಾರ್ಹತೆ: **ಬಿಎ (ಅಪೂರ್ಣ)**

• ಮಹಾರಾಷ್ಟ್ರದ ಬುಲ್ಡಾನಾ ಕ್ಷೇತ್ರದ ಸಂಸದರಾಗಿರುವ ಪ್ರತಾಪ್ ರಾವ್ ಜಾಧವ್, ಸರಪಂಚ್ ಸ್ಥಾನದಿಂದ ಶಾಸಕನ ಪದವಿಯವರೆಗೆ ಏರಿದ ಪ್ರತಾಪ್ ರಾವ್, ಶಿವಸೇನಾ–ಬಿಜೆಪಿ ಸರ್ಕಾರದಲ್ಲಿ ಸಚಿವರೂ ಆಗಿದ್ದರು. ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಇವರು ಇದೀಗ ನಾಲ್ಕನೇ ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಜಿ.ಕಿಶನ್ ರೆಡ್ಡಿ (ತೆಲಂಗಾಣ) ▲
ವಯಸ್ಸು: **59**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಡಿಪ್ಲೊಮಾ**

• ಪ್ರಸ್ತುತ ತೆಲಂಗಾಣ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿರುವ ಜಿ.ಕಿಶನ್ ರೆಡ್ಡಿ, ಹಿಂದೆ ಅವಿಭಜಿತ ಆಂಧ್ರಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದರು. ಅವಿಭಜಿತ ಆಂಧ್ರಪ್ರದೇಶದ ವಿಧಾನಸಭೆಯಲ್ಲಿ ಶಾಸಕರಾಗಿ, ಪಕ್ಷದ ನಾಯಕರಾಗಿ, ಕೇಂದ್ರ ಸಚಿವರಾಗಿ ಅನುಭವ ಪಡೆದಿರುವ ಅವರು ಪ್ರಸ್ತುತ ಸಿಕಂದರಾಬಾದ್ ಲೋಕಸಭಾ ಕ್ಷೇತ್ರದಿಂದ ಸಂಸದರು.

ಜೆ.ಪಿ.ನಡ್ಡಾ (ಹಿಮಾಚಲ ಪ್ರದೇಶ) ▲
ವಯಸ್ಸು: **63**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ, ಎಲ್‌ಎಲ್‌ಬಿ**

• ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿರುವ ಜೆ.ಪಿ. ನಡ್ಡಾ ಅವರು ಮತ್ತೆ ಕೇಂದ್ರ ಸಂಪುಟಕ್ಕೆ ಮರಳಿದ್ದಾರೆ. ಈಚೆಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಅವರು 2014 ರಿಂದ 2019ರ ವರೆಗೆ ಕೇಂದ್ರ ಆರೋಗ್ಯ ಸಚಿವರಾಗಿದ್ದರು. 2019ರಲ್ಲಿ ಅವರಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷನ ಜವಾಬ್ದಾರಿ ನೀಡಲಾಗಿತ್ತು. ಅವರು ಈ ಹಿಂದೆ ಹಿಮಾಚಲ ಪ್ರದೇಶದಲ್ಲಿ ಶಾಸಕ ಮತ್ತು ಸಚಿವರೂ ಆಗಿದ್ದರು.

ಸುರೇಶ್ ಗೋಪಿ (ಕೇರಳ) ■
ವಯಸ್ಸು: **65**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **;ಬಿಎಸ್‌ಸಿ, ಎಂಎ**

• ತ್ರಿಶೂರ್ ಲೋಕಸಭಾ ಕ್ಷೇತ್ರವನ್ನು ಗೆಲ್ಲುವ ಮೂಲಕ ಕೇರಳ ರಾಜ್ಯದಲ್ಲಿ ಬಿಜೆಪಿಗೆ ಐತಿಹಾಸಿಕ ಜಯ ತಂದುಕೊಟ್ಟ ನಟ ಸುರೇಶ್ ಗೋಪಿ ಅವರಿಗೆ ಸಂಪುಟದಲ್ಲಿ ಅವಕಾಶ ಲಭಿಸಿದೆ. ಕಳೆದ ಚುನಾವಣೆಯಲ್ಲಿ ಸೋತಿದ್ದ ಅವರು ಈ ಬಾರಿ 70 ಸಾವಿರಕ್ಕೂ ಅಧಿಕ ಮತಗಳಿಂದ ಸಮೀಪದ ಪ್ರತಿಸ್ಪರ್ಧಿಯನ್ನು ಮಣಿಸಿದ್ದಾರೆ.

ಗಿರಿರಾಜ್ ಸಿಂಗ್ (ಬಿಹಾರ) ▲
ವಯಸ್ಸು: **71**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಪದವಿ**

• ಉಗ್ರ ಹಿಂದುತ್ವವನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಿರುವ ಗಿರಿರಾಜ್ ಸಿಂಗ್ ಅವರು ಬಿಜೆಪಿಯ ವಿವಾದಾತ್ಮಕ ನಾಯಕರಲ್ಲಿ ಒಬ್ಬರು. 2014 ರಲ್ಲೂ ಸಚಿವರಾಗಿದ್ದ ಅವರು 2019ರಲ್ಲಿ ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆಗಳನ್ನು ನಿಭಾಯಿಸಿದ್ದಾರೆ. ಈ ಬಾರಿ ಬಿಹಾರದ ಬೆಗುಸರಾಯ್ ಕ್ಷೇತ್ರದಿಂದ ಗೆದ್ದಿದ್ದಾರೆ.

ಕಿರಣ್ ರಿಜಿಜು (ಅರುಣಾಚಲ ಪ್ರದೇಶ) ▲
ವಯಸ್ಸು: **52**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ, ಎಎಲ್‌ಬಿ**

• 2014 ರಿಂದಲೂ ಅರುಣಾಚಲ ಪಶ್ಚಿಮ ಕ್ಷೇತ್ರದ ಸಂಸದರಾಗಿರುವ ಕಿರಣ್ ರಿಜಿಜು ಅವರು ಆಹಾರ ಸಂಸ್ಕರಣಾ ಉದ್ದಿಮೆ ಮತ್ತು ಕಾನೂನು ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಹಿಂದೆ 2004 ರಿಂದ 2009ರ ಅವಧಿಯಲ್ಲಿ ಸಂಸದರಾಗಿದ್ದರು. ಕ್ರೀಡಾ ಖಾತೆ ರಾಜ್ಯ ಸಚಿವರೂ ಆಗಿದ್ದರು

ಜುಯೆಲ್ ಓರಮ್ (ಒಡಿಶಾ) ▲
ವಯಸ್ಸು: **63**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಡಿಪ್ಲೊಮಾ**

• 2014 ರಿಂದ 2019ರ ಅವಧಿಯಲ್ಲಿ ಬುಡಕಟ್ಟು ವ್ಯವಹಾರಗಳ ಸಚಿವರಾಗಿದ್ದ ಜುಯೆಲ್ ಓರಮ್ ಅವರಿಗೆ ಈ ಬಾರಿಯೂ ಸಂಪುಟದಲ್ಲಿ ಸ್ಥಾನ ಲಭಿಸಿದೆ. ವಾಜಪೇಯಿ ಸರ್ಕಾರ 1999 ರಲ್ಲಿ ಬುಡಕಟ್ಟು ವ್ಯವಹಾರಗಳ ಖಾತೆ ಸೃಷ್ಟಿಸಿದ್ದ ಸಮಯದಲ್ಲೂ ಓರಮ್ ಅವರು ಸಚಿವ ಸ್ಥಾನದ ಜವಾಬ್ದಾರಿ ನಿಭಾಯಿಸಿದ್ದರು.

ಗಜೇಂದ್ರ ಸಿಂಗ್ ಶೆಖಾವತ್ (ರಾಜಸ್ಥಾನ) ▲
ವಯಸ್ಸು: **57**, ಪಕ್ಷ:**ಬಿಜೆಪಿ**
ವಿದ್ಯಾರ್ಹತೆ: **ಎಂಎ, ಎಂ.ಫಿಲ್**

• ರಾಜಸ್ಥಾನದ ಪ್ರಭಾವಿ ನಾಯಕ. ಆರ್‌ಎಸ್‌ಎಸ್‌ನ ಹಿನ್ನಲೆಯವರು. 2014ರ ಮೋದಿ ಸರ್ಕಾರದಲ್ಲಿ ಕೃಷಿ ಮತ್ತು ರೈತರ ಅಭಿವೃದ್ಧಿ ಖಾತೆಯ ರಾಜ್ಯ ಸಚಿವರಾಗಿದ್ದರು. 2019ರ ಮೋದಿ ಸಂಪುಟದಲ್ಲಿ ಜಲ ಶಕ್ತಿ ಖಾತೆಯ ಸಚಿವರಾಗಿದ್ದರು. ಮೋದಿ ಹಾಗೂ ಅಮಿತ್ ಶಾ ಅವರಿಗೆ ಆಪ್ತರು.

ಅರ್ಜುನ್ ರಾಮ್ ಮೇಘವಾಲ್ (ರಾಜಸ್ಥಾನ) ●
ವಯಸ್ಸು: **71**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಎ., ಕಾನೂನು, ಎಂಬಿಎ**

• ರಾಜಸ್ಥಾನ ಆಡಳಿತ ಸೇವೆಯಲ್ಲಿದ್ದ ಮೇಘವಾಲ್ ಅವರು ಐಎಎಸ್‌ಗೆ ಬಡ್ತಿ ಹೊಂದಿದ್ದರು. 2009ರಲ್ಲಿ ಸ್ವಯಂ ನಿವೃತ್ತಿಯ ಬಳಿಕ ರಾಜಕೀಯ ಪ್ರವೇಶಿಸಿದ್ದರು. 2016ರಲ್ಲಿ ಸಂಪುಟದಲ್ಲಿ ಹಣಕಾಸು–ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಖಾತೆ, 2019ರಲ್ಲಿ ಸಂಸ್ಕೃತಿ ಸಚಿವಾಲಯದ ರಾಜ್ಯ ಸಚಿವ, 2023ರಲ್ಲಿ ಕಾನೂನು ಸಚಿವರಾದರು.

ಭೂಪೇಂದ್ರ ಯಾದವ್ (ರಾಜಸ್ಥಾನ) ▲
ವಯಸ್ಸು: **55**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಕಾನೂನು ಪದವಿ**

• ಪಕ್ಷದ ಚುನಾವಣಾ ಕಾರ್ಯತಂತ್ರಜ್ಞರಲ್ಲಿ ಪ್ರಮುಖರು. 2021ರಲ್ಲಿ ಕಾರ್ಮಿಕ, ಉದ್ಯೋಗ, ಪರಿಸರ, ಅರಣ್ಯ ಸಚಿವರಾದರು. ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಇದಕ್ಕೂ ಮೊದಲು ಹಲವು ವರ್ಷಗಳ ಕಾಲ ರಾಜ್ಯಸಭಾ ಸದಸ್ಯರಾಗಿದ್ದರು. ಮೋದಿ ಹಾಗೂ ಶಾ ಅವರಿಗೆ ಆಪ್ತರು.

ಭಗೀರಥ್ ಚೌಧರಿ (ರಾಜಸ್ಥಾನ) ■
ವಯಸ್ಸು: **70**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ**

• ಅಜ್ಮೇರ್ ಕ್ಷೇತ್ರದಿಂದ 2019 ಹಾಗೂ 2024ರಲ್ಲಿ ಗೆಲುವು. ರಾಜಸ್ಥಾನದ ಜಾಟ್ ಸಮುದಾಯದ ನಾಯಕ. 2003 ಹಾಗೂ 2013ರಲ್ಲಿ ಶಾಸಕರಾಗಿದ್ದರು. ರಾಜ್ಯದ ನಾಯಕರಿಗೆ ಸಚಿವ ಸ್ಥಾನ ನೀಡುವಾಗ ನರೇಂದ್ರ ಮೋದಿ ಅವರ ಪ್ರಥಮ ಆಯ್ಕೆ ಚೌಧರಿ ಅವರದ್ದಾಗಿತ್ತು ಎನ್ನಲಾಗುತ್ತಿದೆ.

ಸತೀಶ್‌ಚಂದ್ರ ದುಬೆ (ಬಿಹಾರ) ■
ವಯಸ್ಸು: **49**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಸ್‌ಎಸ್‌ಎಲ್‌ಸಿ**

• ದುಬೆ ಅವರಿಗೆ ಸಚಿವ ಸ್ಥಾನ ದೊರೆಯಬಹುದು ಎಂಬುದನ್ನು ಯಾರೂ ಊಹಿಸಿರಲಿಲ್ಲ ಎನ್ನಲಾಗುತ್ತಿದೆ. 2003 ರಿಂದು 2014ರ ವರೆಗೆ ಶಾಸಕರಾಗಿದ್ದರು. 2014ರಲ್ಲಿ ಸಂಸದರಾದರು. 2019ರಲ್ಲಿ ಬಿಜೆಪಿ ಟಿಕೆಟ್ ನೀಡಲಿಲ್ಲ. ನಂತರ, ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಲಾಯಿತು. ಬ್ರಾಹ್ಮಣ ಸಮುದಾಯದ ಪ್ರಭಾವಿ ನಾಯಕ.

ಡಾ. ರಾಜ್‌ಭೂಷಣ್ ಚೌಧರಿ (ಬಿಹಾರ) ■
ವಯಸ್ಸು: **46**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಬಿಬಿಎಸ್, ಎಂ.ಡಿ**

• ವೃತ್ತಿಯಲ್ಲಿ ರಾಜ್‌ಭೂಷಣ್ ವೈದ್ಯರು. ಇವರು ಅತ್ಯಂತ ಹಿಂದುಳಿದ ನಿಶಾದ್ ಸಮುದಾಯಕ್ಕೆ ಸೇರಿದವರು. ಇವರು ಈ ಮೊದಲು ವಿಕಾಸ್‌ಶೀಲ್ ಇನ್ಸಾನ್ ಪಕ್ಷದಲ್ಲಿ ಇದ್ದರು. ಇತ್ತೀಚೆಗೆ ಬಿಜೆಪಿ ಸೇರ್ಪಡೆಗೊಂಡರು. ಇದೇ ಮೊದಲ ಬಾರಿಗೆ ಲೋಕಸಭಾ ಸದಸ್ಯರಾಗಿದ್ದಾರೆ. 2019ರಲ್ಲಿ ವಿಐಪಿ ಪಕ್ಷದಿಂದ ಲೋಕಸಭೆಗೆ ಸ್ಪರ್ಧಿಸಿ ಸೋತಿದ್ದರು.

ಲಲನ್ ಸಿಂಗ್ (ಬಿಹಾರ) ▲
ವಯಸ್ಸು: **69**, ಪಕ್ಷ: **ಜೆಡಿಯು**
ವಿದ್ಯಾರ್ಹತೆ: **ಬಿಎ**

• ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಆಪ್ತರು. 2000ರಲ್ಲಿ ರಾಜ್ಯಸಭೆ, 2004 ಮತ್ತು 2009ರಲ್ಲಿ ಲೋಕಸಭೆಗೆ ಆಯ್ಕೆ. ಯುಪಿಎ ಸರ್ಕಾರದಲ್ಲಿ ವಿವಿಧ ಸಮಿತಿಗಳ ಸದಸ್ಯರಾಗಿದ್ದರು. 2014ರಲ್ಲಿ ಶಾಸಕನಾಗಿ ಆಯ್ಕೆ ಮತ್ತು ಸಚಿವನಾಗಿ ಸೇವೆ. 2019ರಲ್ಲಿ ಮತ್ತೆ ಲೋಕಸಭೆಗೆ ಆಯ್ಕೆ.

ರಾಮ್‌ನಾಥ್ ಠಾಕೂರ್ (ಬಿಹಾರ) ■
ವಯಸ್ಸು: **61**, ಪಕ್ಷ: **ಜೆಡಿಯು**
ವಿದ್ಯಾರ್ಹತೆ: **ಪಿಯುಸಿ**

• ಸಮಾಜವಾದಿ ನಾಯಕ ಕರ್ಪೂರಿ ಠಾಕೂರ್ ಅವರಿಗೆ ಇತ್ತೀಚೆಗಷ್ಟೆ ಮರಣೋತ್ತರ ಭಾರತ ರತ್ನ ನೀಡಲಾಗಿತ್ತು. ಇವರ ಮಗ ರಾಮ್‌ನಾಥ್ ಠಾಕೂರ್. ಜೆಡಿಯುನಿಂದ ಎರಡು ಬಾರಿ ರಾಜ್ಯಸಭೆಗೆ ಆಯ್ಕೆ ಆಗಿದ್ದರು. ಈಗ ಲೋಕಸಭೆಗೆ ಆಯ್ಕೆಯಾಗಿ ಸಂಪುಟದಲ್ಲಿ ಸ್ಥಾನ.

ನಿತ್ಯಾನಂದ ರಾಯ್ (ಬಿಹಾರ) ■
ವಯಸ್ಸು: **58**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಪದವಿ**

• ಎಬಿವಿಪಿ ಕಾರ್ಯಕರ್ತರಾಗಿದ್ದ ನಿತ್ಯಾನಂದ ರಾಯ್, ನಂತರ ಬಿಜೆಪಿಯಲ್ಲಿ ಸಕ್ರಿಯರಾಗಿದ್ದರು. ಸತತ ನಾಲ್ಕು ಬಾರಿ ಬಿಹಾರ ವಿಧಾನಸಭೆಗೆ ಆಯ್ಕೆಯಾಗಿದ್ದ ಇವರು ಬಿಹಾರ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದರು. ನರೇಂದ್ರ ಮೋದಿ ಅವರ ಹಿಂದಿನ ಸಂಪುಟದಲ್ಲಿ ಗೃಹ ವ್ಯವಹಾರಗಳ ರಾಜ್ಯ ಸಚಿವರಾಗಿದ್ದರು. ಪ್ರಸ್ತುತ ಉಜಿಯಾರ್‌ಪುರ ಕ್ಷೇತ್ರದ ಸಂಸದರು.

ಮನೋಹರ ಲಾಲ್ ಖಟ್ಟರ್ (ಹರಿಯಾಣ) ▲
ವಯಸ್ಸು: **70**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ**

• 2014ರಲ್ಲಿ ಹರಿಯಾಣದ ಕರ್ನಾಲ್ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಆಕಸ್ಮಿಕವಾಗಿ ಸ್ಪರ್ಧಿಸಿದ್ದ ಖಟ್ಟರ್, ಗೆದ್ದು ಮುಖ್ಯಮಂತ್ರಿಯೂ ಆದರು. ಎರಡು ಬಾರಿ ಹರಿಯಾಣದ ಮುಖ್ಯಮಂತ್ರಿಯಾಗಿದ್ದ ಇವರು ನಂತರ ಕರ್ನಾಲ್ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದರು. ಈಗ ಮಂತ್ರಿ ಪದವಿ ಒಲಿದುಬಂದಿದೆ.

ಜಿತಿನ್ ಪ್ರಸಾದ್ (ಉತ್ತರ ಪ್ರದೇಶ) ■
ವಯಸ್ಸು: **50**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಬಿಎ**

• ರಾಜಕಾರಣದ ಹಿನ್ನೆಲೆಯ ಕುಟುಂಬದಿಂದ ಬಂದ ಜಿತಿನ್ ಪ್ರಸಾದ್, ಉತ್ತರ ಪ್ರದೇಶದ ಶಾಜಹಾನ್‌ಪುರದವರು. 2004ರಲ್ಲಿ ಕಾಂಗ್ರೆಸ್ ಸಂಸದರಾಗಿ ಆಯ್ಕೆಯಾಗಿದ್ದ ಜಿತಿನ್ ಪ್ರಸಾದ್, ಕೇಂದ್ರದಲ್ಲಿ ಸಚಿವರಾಗುವ ಮೂಲಕ ಅತ್ಯಂತ ಕಿರಿಯ ಸಚಿವರೆನಿಸಿದ್ದರು. ನಂತರ 2021ರಲ್ಲಿ ಬಿಜೆಪಿ ಸೇರಿದರು. ಪ್ರಸ್ತುತ ದೌರಾಹ್ರ ಕ್ಷೇತ್ರದ ಸಂಸದರು.

ಪಂಕಜ್ ಚೌಧರಿ (ಉತ್ತರ ಪ್ರದೇಶ) ■
ವಯಸ್ಸು: **59**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ**

• ಆರನೇ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಪಂಕಜ್ ಚೌಧರಿ ಅವರು, ಉತ್ತರ ಪ್ರದೇಶದ ಗೋರಖ್‌ಪುರದವರು. ನಗರಸಭೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಅವರು, 1991ರಲ್ಲಿ ಮೊದಲ ಬಾರಿಗೆ ಸಂಸದರಾದರು. ಮೋದಿ ಅವರ ಎರಡನೇ ಅವಧಿಯಲ್ಲಿ ಹಣಕಾಸು ಖಾತೆಯ ರಾಜ್ಯ ಸಚಿವರಾಗಿದ್ದರು

ಶ್ರೀನಿವಾಸ ವರ್ಮಾ (ಆಂಧ್ರಪ್ರದೇಶ) ■
ವಯಸ್ಸು: **57**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂಎ**

• ಶ್ರೀನಿವಾಸ ವರ್ಮಾ ಆಂಧ್ರಪ್ರದೇಶದ ಭೀಮವರಂನವರು. ತಳಮಟ್ಟದಲ್ಲಿ ಪಕ್ಷ ಕಟ್ಟಲು ಶ್ರಮಿಸಿದವರು. ಪಕ್ಷದ ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದವರು. ಪುರಸಭಾ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಇವರು, ಈ ಬಾರಿ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ. ಪ್ರಸ್ತುತ ನರಸಾಪುರ ಕ್ಷೇತ್ರದ ಸಂಸದರು.

ಬಂಡಿ ಸಂಜಯ್ ಕುಮಾರ್ (ತೆಲಂಗಾಣ) ■
ವಯಸ್ಸು: **52**, ಪಕ್ಷ:**ಬಿಜೆಪಿ**
ವಿದ್ಯಾರ್ಹತೆ: **ಎಂಎ**

• ಎಬಿವಿಪಿ ಕಾರ್ಯಕರ್ತರಾಗಿ ಕೆಲಸ ಮಾಡಿದ ಬಂಡಿ ಸಂಜಯ್, ತೆಲಂಗಾಣದವರು. ಕರೀಂನಗರ ನಗರಸಭೆಯ ಸದಸ್ಯರಾಗಿದ್ದವರು ಹಂತಹಂತವಾಗಿ ಮೇಲೇರಿ, ಕರೀಂನಗರದ ಸಂಸದರಾದರು. ತೆಲಂಗಾಣ ರಾಜ್ಯ ಬಿಜೆಪಿ ಘಟಕದ ಮಾಜಿ ಅಧ್ಯಕ್ಷರಾದ ಸಂಜಯ್, 2 ನೇ ಬಾರಿ ಲೋಕಸಭೆ ಪ್ರವೇಶಿಸಿದ್ದಾರೆ. ಹಿಂದುಳಿದ ವರ್ಗದ ನಾಯಕರಾದ ಸಂಜಯ್‌ಗೆ ಮಂತ್ರಿಯಾಗುವ ಅವಕಾಶ ಲಭಿಸಿದೆ.

ಎಲ್.ಮುರುಗನ್ (ತಮಿಳುನಾಡು) ■
ವಯಸ್ಸು: **47**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಲ್‌ಎಲ್‌ಬಿ**

• ದಲಿತ ಸಮುದಾಯಕ್ಕೆ ಸೇರಿದ ಎಲ್. ಮುರುಗನ್, ವಕೀಲರಾಗಿದ್ದವರು. 2011ರಲ್ಲಿ ರಾಸಿಪುರಂ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಕೇವಲ 1800 ಮತ ಪಡೆದಿದ್ದರು. 2020ರಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಮಧ್ಯಪ್ರದೇಶದಿಂದ ರಾಜ್ಯಸಭಾ ಸದಸ್ಯರಾಗಿರುವ ಮುರುಗನ್, ಕೇಂದ್ರ ಸಚಿವರಾಗಿಯೂ ಕೆಲಸ ಮಾಡಿದ್ದಾರೆ.

ಸಿ.ಆರ್.ಪಾಟೀಲ್ (ಗುಜರಾತ್) ▲
ವಯಸ್ಸು: **69**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಐಟಿಐ**

• ಬಿಜೆಪಿ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಚಂದ್ರಕಾಂತ್ ರಘುನಾಥ್ ಪಾಟೀಲ್ ಅವರಿಗೆ ಮೊದಲ ಬಾರಿ ಕೇಂದ್ರ ಸಂಪುಟದಲ್ಲಿ ಸ್ಥಾನ ಲಭಿಸಿದೆ. ಸೂರತ್ ಬಿಜೆಪಿ ಘಟಕದ ಖಜಾಂಚಿಯಾಗಿ ರಾಜಕೀಯ ಜೀವನ ಆರಂಭಿಸಿದ್ದರು. ಗುಜರಾತ್‌ನ ನವ್ಸಾರಿ ಕ್ಷೇತ್ರದಿಂದ ಮೂರನೇ ಬಾರಿ ಆಯ್ಕೆಯಾಗಿದ್ದಾರೆ.

ಕಮಲೇಶ್ ಪಾಸ್ವಾನ್ (ಉತ್ತರ ಪ್ರದೇಶ) ■
ವಯಸ್ಸು: **47**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಸ್‌ಎಸ್‌ಎಲ್‌ಸಿ**

• ಉತ್ತರ ಪ್ರದೇಶದ ಬಾನ್ಸ್‌ಗಾಂವ್ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಅಯ್ಕೆಯಾಗಿದ್ದಾರೆ. ಸಮಾಜವಾದಿ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸಿ ಶಾಸಕರಾಗಿದ್ದರು. 2009 ರಲ್ಲಿ ಬಿಜೆಪಿ ಸೇರಿ ಅದೇ ವರ್ಷ ಮೊದಲ ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಪಕ್ಷಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈಗ ಸಂಪುಟದಲ್ಲಿ ಸ್ಥಾನ ದೊರೆತಿದೆ.

ಸರ್ಬಾನಂದ ಸೋನೊವಾಲ್ (ಅಸ್ಸಾಂ) ▲
ವಯಸ್ಸು: **61**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ, ಎಲ್‌ಎಲ್‌ಬಿ**

• ಅಸ್ಸಾಂ ಗಣ ಪರಿಷತ್ ಮೂಲಕ ರಾಜಕೀಯ ಪ್ರವೇಶಿಸಿದ್ದ ಸೋನೊವಾಲ್ 2011 ರಲ್ಲಿ ಬಿಜೆಪಿ ಸೇರಿದರು. ಅಸ್ಸಾಂ ಮುಖ್ಯಮಂತ್ರಿಯಾಗಿದ್ದ ಅವರು ಎನ್‌ಡಿಎ ಸರ್ಕಾರದ ಎರಡನೇ ಅವಧಿಯಲ್ಲಿ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವರಾದರು. ಮೊದಲ ಅವಧಿಯಲ್ಲಿ ಕೌಶಲಾಭಿವೃದ್ಧಿ ಖಾತೆ ರಾಜ್ಯ ಸಚಿವರಾಗಿದ್ದರು.

ನಿಮುಬೆನ್ ಬಂಭಾನಿಯಾ (ಗುಜರಾತ್) ■
ವಯಸ್ಸು: 57, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎಸ್‌ಸಿ, ಬಿ.ಇಡಿ**

• ಗುಜರಾತ್ ರಾಜ್ಯದ ಭಾವ್‌ನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಇದೇ ಮೊದಲ ಬಾರಿ ಸಂಸತ್‌ಗೆ ಆಯ್ಕೆಯಾಗಿದ್ದಾರೆ. ಭಾವ್‌ನಗರ ಪಾಲಿಕೆ ಮೇಯರ್ ಆಗಿದ್ದರಲ್ಲದೆ, ಬಿಜೆಪಿ ಮಹಿಳಾ ಮೋರ್ಚಾ ಭಾವ್‌ನಗರ ಘಟಕದ ಅಧ್ಯಕ್ಷೆಯಾಗಿ ಮತ್ತು ಗುಜರಾತ್ ರಾಜ್ಯ ಘಟಕದ ಉಪಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ.

ರಕ್ಷಾ ಖಡ್ಸೆ (ಮಹಾರಾಷ್ಟ್ರ) ■
ವಯಸ್ಸು: **37**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎಸ್‌ಸಿ**

• ಮಹಾರಾಷ್ಟ್ರದ ರಾವೆರ್ ಕ್ಷೇತ್ರದಿಂದ ಸತತ ಮೂರನೇ ಬಾರಿ ಅಯ್ಕೆಯಾಗಿದ್ದಾರೆ. ಈ ಬಾರಿ ಎನ್‌ಸಿಪಿ ಶರದ್ ಪವಾರ್ ಬಣದ ಶ್ರೀರಾಮ್ ಪಾಟೀಲ್ ಅವರನ್ನು ಮಣಿಸಿದ್ದಾರೆ. 2014 ರಲ್ಲಿ ತಮ್ಮ 26ನೇ ವಯಸ್ಸಿನಲ್ಲಿ ಮೊದಲ ಬಾರಿ ಆಯ್ಕೆಯಾಗಿದ್ದ ಅವರು ಆ ಸಾಲಿನ ಅತಿಕಿರಿಯ ಸಂಸದೆ ಎನಿಸಿಕೊಂಡಿದ್ದರು

ರಾವ್ ಇಂದರ್‌ಜಿತ್ ಸಿಂಗ್ (ಹರಿಯಾಣ) ●
ವಯಸ್ಸು: **73**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಕಾನೂನು ಪದವಿ**

• ಇಂದರ್‌ಜಿತ್ ಸಿಂಗ್ ಹರಿಯಾಣದ ಮಾಜಿ ಮುಖ್ಯಮಂತ್ರಿ ಮಹಾರಾಜ ರಾವ್ ಬೀರೇಂದ್ರ ಸಿಂಗ್ ಅವರ ಪುತ್ರ. ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಇವರು 1999ರಲ್ಲಿ ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾದರು. ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಹಲವು ಬಾರಿ ಸಚಿವರಾಗಿ ಅನುಭವ ಪಡೆದಿದ್ದಾರೆ. ಪ್ರಸ್ತುತ ಗುರುಗ್ರಾಮ ಕ್ಷೇತ್ರದ ಸಂಸದರು.

ಕ್ರಿಶನ್ ಪಾಲ್ ಗುರ್ಜರ್ (ಹರಿಯಾಣ) ■
ವಯಸ್ಸು: **67**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಕಾನೂನು ಪದವಿ**

• ಕ್ರಿಶನ್ ಲಾಲ್ ಗುರ್ಜರ್ ಅವರು ಹರಿಯಾಣದ ಫರೀದಾಬಾದ್‌ನವರು. ಮೂರು ಬಾರಿ ಶಾಸಕರಾಗಿದ್ದ ಇವರು, ಬನ್ಸಿಲಾಲ್ ಸಂಪುಟದಲ್ಲಿ ಸಚಿವರಾಗಿದ್ದರು. ಮೂರನೇ ಬಾರಿ ಸಂಸದರಾಗಿ ಆಯ್ಕೆಯಾಗಿರುವ ಕ್ರಿಶನ್ ಪಾಲ್ ಗುರ್ಜರ್ ಹಲವು ಖಾತೆಗಳ ಸಚಿವರಾಗಿಯೂ ಕೇಂದ್ರದಲ್ಲಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಫರೀದಾಬಾದ್ ಕ್ಷೇತ್ರದ ಸಂಸದರು.

ತೋಖನ್ ಸಾಹು (ಛತ್ತೀಸಗಢ) ■
ವಯಸ್ಸು: **48**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಸ್ನಾತಕೋತ್ತರ ಪದವಿ**

• ಛತ್ತೀಸಗಢದ ಪ್ರಮುಖ ಒಬಿಸಿ ನಾಯಕರಲ್ಲಿ ಒಬ್ಬರು. 1994ರಲ್ಲಿ ತಾಲ್ಲೂಕು ಪಂಚಾಯಿತಿ ಚುನಾವಣೆ ಮೂಲಕ ರಾಜಕೀಯ ಪ್ರವೇಶ. 2013ರಲ್ಲಿ ಶಾಸಕನಾಗಿ ಆಯ್ಕೆ. ಸಾಹು ಸಮುದಾಯಕ್ಕೆ ಸಂಪುಟದಲ್ಲಿ ಪ್ರಾತಿನಿಧ್ಯ ಕೊಡಬೇಕು ಎಂಬ ಕಾರಣಕ್ಕೆ ಇವರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂದು ಹೇಳಲಾಗಿದೆ. ಇದೇ ಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಜಾರ್ಜ್ ಕುರಿಯನ್ (ಕೇರಳ) ■
ವಯಸ್ಸು: **63**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಪದವಿ**

• ಜನಸಂಘದ ಕಾಲದಿಂದಲೂ (1980) ಬಿಜೆಪಿ ಜತೆಗೆ ಇರುವ ಜಾರ್ಜ್ ಕುರಿಯನ್ ಅವರು ಪಕ್ಷಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಕೇರಳದಲ್ಲಿ ಬಿಜೆಪಿಗೆ ಶಕ್ತಿ ನೀಡಲು ಅವರು ಹಲವು ದಶಕಗಳಿಂದ ಶ್ರಮಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ಲಭಿಸಿರುವುದು ಅಚ್ಚರಿಗೆ ಕಾರಣವಾಗಿದೆ.

ಮುರಳೀಧರ ಮೊಹೋಲ್ (ಮಹಾರಾಷ್ಟ್ರ) ■
ವಯಸ್ಸು: **49**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿಎ**

• ಮುರಳೀಧರ ಮೊಹೋಲ್ ಅವರು ಪುಣೆ ಲೋಕಸಭಾ ಕ್ಷೇತ್ರದಿಂದ ಗೆದ್ದಿದ್ದಾರೆ. ಪಾಲಿಕೆ ಸದಸ್ಯರಾಗಿದ್ದ ಅವರು 2019 ರಲ್ಲಿ ಪುಣೆ ಮೇಯರ್ ಆಗಿದ್ದರು. ಪುಣೆಯಲ್ಲಿ ಪಕ್ಷದ ಬೆಳವಣಿಗೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಈ ಬಾರಿ ಬಿಜೆಪಿ ಟಿಕೆಟ್ ನೀಡಿತ್ತು.

ಸಂಜಯ್ ಸೇಠ್ (ಜಾರ್ಖಂಡ್) ■
ವಯಸ್ಸು: **65**, ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಕಾನೂನು ಪದವಿ**

• ಜಾರ್ಖಂಡ್‌ನ ಸಂಜಯ್ ಸೇಠ್ ಅವರು 2005ರಲ್ಲಿ ತಮ್ಮ ರಾಜಕೀಯ ಜೀವನ ಆರಂಭಿಸಿದರು. 2016ರಲ್ಲಿ ಜಾರ್ಖಂಡ್ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾಗುವ ಮೂಲಕ ಅವರ ರಾಜಕೀಯ ಜೀವನ ತಿರುವು ಪಡೆಯಿತು. 2019ರಲ್ಲಿ ರಾಂಚಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಗೆದ್ದು ಸಂಸದರಾದರು. ಈಗ ಎರಡನೇ ಬಾರಿಗೆ ಸಂಸದರಾಗಿ, ಕೇಂದ್ರ ಸಚಿವರೂ ಆಗಿದ್ದಾರೆ.

ಜಿತೇಂದರ್ ಸಿಂಗ್ (ಜಮ್ಮು–ಕಾಶ್ಮೀರ) ●
ವಯಸ್ಸು: **67**, ಪಕ್ಷ:**ಬಿಜೆಪಿ**
ವಿದ್ಯಾರ್ಹತೆ: **ಎಂಬಿಬಿಎಸ್**

• ಜಿತೇಂದ್ರ ಸಿಂಗ್ ಅವರು ಜಮ್ಮು–ಕಾಶ್ಮೀರದವರು. ವೈದ್ಯರಾಗಿ, ಅಂಕಣಕಾರರಾಗಿ ಹೆಸರು ಮಾಡಿದವರು. ಅಮರನಾಥ ಭೂ ಪರಭಾರೆ ವಿವಾದದಿಂದ ಇವರ ಹೆಸರು ಮುನ್ನೆಲೆಗೆ ಬಂತು. 2014ರಲ್ಲಿ ಮೊದಲ ಬಾರಿಗೆ ಉಧಮ್‌ಪುರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಇವರು ಕೇಂದ್ರದಲ್ಲಿ ಸಚಿವರೂ ಆಗಿದ್ದರು. ನಂತರ 2019ರಲ್ಲಿ ಗೆದ್ದು ಮತ್ತೆ ಸಚಿವರಾದರು. ಈ ಬಾರಿಯೂ ಉಧಮ್‌ಪುರದ ಸಂಸದರಾಗಿದ್ದಾರೆ.

▲ ಸಂಪುಟ ದರ್ಜೆ ಸಚಿವರು
● ಸ್ವತಂತ್ರ ಉಸ್ತುವಾರಿ ಹೊಂದಿರುವ ರಾಜ್ಯ ಸಚಿವರು
■ ರಾಜ್ಯ ಸಚಿವರು







1.ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮದಲ್ಲಿ ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ', ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು, ಶ್ರೀಲಂಕಾದ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ, ಸೆಷೆಲ್ಸ್‌ನ ಉಪಾಧ್ಯಕ್ಷ ಅಹ್ಮದ್ ಅಫೀಫ್, ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜಗನ್ನಾಥ್, ಭೂತಾನ್ ಪ್ರಧಾನಿ ಶೆರಿಂಗ್ ತೊಬ್ಗೆ ಭಾಗಿಯಾಗಿದ್ದರು. ಉಪರಾಷ್ಟ್ರಪತಿ ಜಗದೀಪ್ ಧನಕರ್, ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ಮೋದಿ ಚಿತ್ರದಲ್ಲಿದ್ದಾರೆ.–ಎಎಫ್‌ಪಿ ಚಿತ್ರ 2.ಸಮಾರಂಭದಲ್ಲಿ ಭಾಗಿಯಾಗಿದ್ದ ಜನಸೇನಾ ಪಕ್ಷದ ಮುಖ್ಯಸ್ಥ ಪವನ್ ಕಲ್ಯಾಣ್, ಬಿಹಾರ ಮುಖ್ಯಮಂತ್ರಿ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್, ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು 3. ಸಮಾರಂಭದಲ್ಲಿ ಭಾಗಿಯಾಗಿರುವ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಶ್ರೀಗಳು ಹಾಗೂ ಜಗದ್ಗುರು ರಮಾನಂದಾಚಾರ್ಯ ಸ್ವಾಮಿ ರಾಮಭದ್ರಾಚಾರ್ಯರು ಹಾಗೂ ಇತರ ಸ್ವಾಮೀಜಿಗಳು – ಪಿಟಿಐ ಚಿತ್ರಗಳು

ವಿನಯ, ವಿನಮ್ರತೆಯನ್ನು ಮೈಗೂಡಿಸಿಕೊಳ್ಳಿ: ನೂತನ ಸಚಿವರಿಗೆ ಮೋದಿ ಕಿವಿಮಾತು

'ಪಾರದರ್ಶಕತೆಯಲ್ಲಿ ರಾಜಿ ಬೇಡ'

ನವದೆಹಲಿ (ಪಿಟಿಐ): 'ವಿನಯ ಮತ್ತು ವಿನಮ್ರತೆಯನ್ನು ಮೈಗೂಡಿಸಿಕೊಳ್ಳಿ, ನಿಷ್ಠೆ ಮತ್ತು ಪಾರದರ್ಶಕತೆಯಲ್ಲಿ ಎಂದಿಗೂ ರಾಜಿ ಆಗಬೇಡಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮೂರನೇ ಅವಧಿಯ ಸರ್ಕಾರದಲ್ಲಿ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕಸಲಿದ್ದ ನಾಯಕರಿಗೆ ಭಾನುವಾರ ಕಿವಿಮಾತು ಹೇಳಿದರು.

ಪ್ರಮಾಣ ವಚನಕ್ಕೆ ಮುನ್ನ ತಮ್ಮ ನಿವಾಸದಲ್ಲಿ ನಿಯೋಜಿತ ಸಚಿವರನ್ನು ಭೇಟಿ ಮಾಡಿದ ಅವರು, 'ಜನರು ಭಾರಿ ನಿರೀಕ್ಷೆಗಳನ್ನು ಹೊಂದಿದ್ದಾರೆ. ಅವುಗಳನ್ನು ಪ್ರತಿಯೊಬ್ಬರೂ ಪೂರೈಸಬೇಕು' ಎಂದು ಕರೆ ನೀಡಿದರು.

'ನಿಮಗೆ ನಿಯೋಜಿಸುವ ಯಾವುದೇ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿ. ವಿನಮ್ರತೆ ಮತ್ತು ವಿನಯವಂತರನ್ನು ಜನರು ಇಷ್ಟಪಡುತ್ತಾರೆ ಎಂಬುದು ನೆನಪಿರಲಿ' ಎಂದರು.

ಸಚಿವರಾಗುವವರು ಎಲ್ಲ ಪಕ್ಷಗಳ ಸಂಸದರನ್ನು ಗೌರವದಿಂದ ಕಾಣಬೇಕು. ಸರ್ಕಾರಿ ನೌಕರರು ಮತ್ತು ಅಧಿಕಾರಿಗಳನ್ನೂ ಗೌರವದಿಂದ ನೋಡಬೇಕು ಸೌಜನ್ಯದಿಂದ ವರ್ತಿಸಬೇಕು ಎಂದರು.

'ಇಂಡಿಯಾ ಮೈತ್ರಿಕೂಟ ಎಷ್ಟು ದಿನ ಇರುವುದೊ'

ಬೆಂಗಳೂರು: 'ಇಂಡಿಯಾ ಮೈತ್ರಿಕೂಟದ ಸದಸ್ಯ ಪಕ್ಷದವರು ಕಾಂಗ್ರೆಸ್ ನಾಯಕರನ್ನು ಎಷ್ಟು ದಿನ ಸಹಿಸಿಕೊಳ್ಳುತ್ತಾರೊ ನೋಡೋಣ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶುಭಾಶಯ ಕೋರಿ ಪತ್ರ ಬರೆದಿರುವ ಅವರು, ಇಂಡಿಯಾ ಮೈತ್ರಿಕೂಟದಲ್ಲಿ ಶೀಘ್ರ ಬಿರುಕು ಕಾಣಿಸಿಕೊಳ್ಳಬಹುದು ಎಂದು ಉಲ್ಲೇಖಿಸಿದ್ದಾರೆ.

'ಈ ಚುನಾವಣೆಯಲ್ಲಿ ದೊಡ್ಡ ಸಾಧನೆ ಮಾಡಿರುವುದಾಗಿ ಕಾಂಗ್ರೆಸ್ ಪಕ್ಷ ಭಾವಿಸಿದೆ. ಆದರೆ, ಆ ಪಕ್ಷ ಅಧಿಕಾರದಲ್ಲಿರುವ ಕರ್ನಾಟಕ, ತೆಲಂಗಾಣ, ಹಿಮಾಚಲ ಪ್ರದೇಶ ರಾಜ್ಯಗಳಲ್ಲೇ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ. ಕೆಲವು ರಾಜ್ಯಗಳಲ್ಲಿ ಮಿತ್ರಪಕ್ಷಗಳ ಕಾರಣದಿಂದ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿದೆ' ಎಂದಿದ್ದಾರೆ.

'ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ನಿಮಗೆ ಅಭಿನಂದನೆ. ಇದೊಂದು ಐತಿಹಾಸಿಕ ಕ್ಷಣ. ನಾನು ಕೂಡ ಸಮಾರಂಭದಲ್ಲಿ ಹಾಜರಿರಬೇಕಿತ್ತು. ಅನಾರೋಗ್ಯದ ಕಾರಣದಿಂದ ಅದು ಸಾಧ್ಯವಾಗುತ್ತಿಲ್ಲ. ನಮ್ಮ ಪಕ್ಷವು ಎನ್‌ಡಿಎ ಮೈತ್ರಿಕೂಟವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. 'ಎಲ್ಲರೊಂದಿಗೆ ಎಲ್ಲರ ವಿಕಾಸ' ಎಂಬ ಘೋಷ ವಾಕ್ಯದಂತೆ ನಿಮ್ಮೊಂದಿಗೆ ಕೆಲಸ ಮಾಡುತ್ತೇವೆ' ಎಂದು ದೇವೇಗೌಡರು ಮೋದಿಯವರಿಗೆ ತಿಳಿಸಿದ್ದಾರೆ.

'ಈ ಚುನಾವಣೆಯು ಅಚ್ಚರಿಯ ಫಲಿತಾಂಶಗಳನ್ನು ನೀಡಿದೆ. ಭಾರತದ ಪ್ರಜಾಪ್ರಭುತ್ವದ ಶಕ್ತಿ ಈ ಚುನಾವಣೆಯಲ್ಲಿ ಗೋಚರಿಸಿದೆ. ನೀವು ಒಬ್ಬ ನೈಜ ಪ್ರಜಾಪ್ರಭುತ್ವವಾದಿ ಎಂಬುದನ್ನು ಈ ಚುನಾವಣೆ ಸಾಬೀತುಪಡಿಸಿದೆ. ನಮ್ಮ ಸಂಸ್ಥೆಗಳು ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಗಳನ್ನು ದುರ್ಬಲಗೊಳಿಸಲು ಕಾಂಗ್ರೆಸ್ ಪಕ್ಷವು ನಡೆಸಿದ ಅಪಪ್ರಚಾರಕ್ಕೆ ಚುನಾವಣಾ ಫಲಿತಾಂಶ ಉತ್ತರ ನೀಡಿದೆ. ಕಾಂಗ್ರೆಸ್ ಪಕ್ಷದವರ ದುರಹಂಕಾರ ಮತ್ತು ಋಣಾತ್ಮಕ ನಡೆಗೆ ದೇಶದ ಜನರು ತಕ್ಕ ಪಾಠ ಕಲಿಸುತ್ತಾರೆ' ಎಂದೂ ಹೇಳಿದ್ದಾರೆ.

ನೆರೆ ದೇಶಗಳ ನಾಯಕರು ಭಾಗಿ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭದಲ್ಲಿ ಭಾರತದ ನೆರೆಹೊರೆಯ ದೇಶಗಳ ನಾಯಕರು ಭಾಗವಹಿಸಿದ್ದರು.

ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು, ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ', ಶ್ರೀಲಂಕಾ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ, ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜಗನ್ನಾಥ್, ಭೂತಾನ್ ಪ್ರಧಾನಿ ಶೆರಿಂಗ್ ತೊಬ್ಗೆ ಅವರು ಪಾಲ್ಗೊಂಡಿದ್ದರು.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ಸೆಷೆಲ್ಸ್ ಉಪಾಧ್ಯಕ್ಷ ಅಹಮದ್ ಆಫೀಫ್ ಅವರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮುಯಿಜು ಅವರು ಮಾಲ್ದೀವ್ಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಭಾರತಕ್ಕೆ ಭೇಟಿ ನೀಡಿದ್ದು ಇದೇ ಮೊದಲು.

ಸಂಪುಟಕ್ಕೆ ಆರು ಮಾಜಿ ಸಿಎಂಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ನರೇಂದ್ರ ಮೋದಿ ಸಂಪುಟದಲ್ಲಿ ಆರು ಮಾಜಿ ಮುಖ್ಯಮಂತ್ರಿಗಳು ಸ್ಥಾನ ಪಡೆದಿದ್ದಾರೆ.

ಕರ್ನಾಟಕದ ಎಚ್.ಡಿ.ಕುಮಾರಸ್ವಾಮಿ, ಉತ್ತರ ಪ್ರದೇಶದ ರಾಜನಾಥ ಸಿಂಗ್, ಮಧ್ಯಪ್ರದೇಶದ ಶಿವರಾಜ್ ಸಿಂಗ್ ಚೌಹಾಣ್, ಹರಿಯಾಣದ ಮನೋಹರ್ ಲಾಲ್ ಖಟ್ಟರ್, ಬಿಹಾರದ ಜಿತನ್ ರಾಮ್ ಮಾಂಝಿ ಹಾಗೂ ಅಸ್ಸಾಂನ ಸರ್ಬಾನಂದ ಸೊನೊವಾಲ್ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಕುಮಾರಸ್ವಾಮಿ ಹಾಗೂ ಮಾಂಝಿ ಹೊರತುಪಡಿಸಿ ಉಳಿದವರು ಬಿಜೆಪಿಯವರು. ನರೇಂದ್ರ ಮೋದಿ ಅವರು ಈ ಹಿಂದೆ ಗುಜರಾತ್ ಮುಖ್ಯಮಂತ್ರಿಯಾಗಿದ್ದರು.

ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಮಹಾರಾಷ್ಟ್ರದ ನಾರಾಯಣ ರಾಣೆ, ತ್ರಿಪುರದ ಬಿಪ್ಲವ್ ಕುಮಾರ್ ದೇವ್ ಹಾಗೂ ಉತ್ತರಾಖಂಡದ ತ್ರಿವೇಂದ್ರ ಸಿಂಗ್ ರಾವತ್ ಅವರಿಗೆ ಸಂಪುಟಕ್ಕೆ ಸೇರ್ಪಡೆ ಆಗುವ ಭಾಗ್ಯ ಸಿಕ್ಕಿಲ್ಲ. ಬಿಪ್ಲವ್ ರಾಜ್ಯಸಭಾ ಸದಸ್ಯರಾಗಿದ್ದಾರೆ. ಉಳಿದ ನಾಲ್ವರು ಮಾಜಿ ಮುಖ್ಯಮಂತ್ರಿಗಳು ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ವಿಜೇತರಾಗಿದ್ದರು. ರಾಣೆ ಅವರು ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದರು.

ಜೆಡಿಯು, ಟಿಡಿಪಿಗೆ ತಲಾ ಎರಡು ಖಾತೆ

ಮೈತ್ರಿಕೂಟದ ಪ್ರಮುಖ ಮಿತ್ರ ಪಕ್ಷಗಳಾದ ಜೆಡಿಯು ಹಾಗೂ ಟಿಡಿಪಿಗೆ ತಲಾ ಎರಡು ಸಚಿವ ಸ್ಥಾನಗಳನ್ನು ನೀಡಲಾಗಿದೆ. ಮಿತ್ರ ಪಕ್ಷಗಳಿಗೆ ಒಟ್ಟು 11 ಸ್ಥಾನಗಳನ್ನು ಬಿಟ್ಟುಕೊಡಲಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಟಿಡಿಪಿ 16 ಕ್ಷೇತ್ರಗಳಲ್ಲಿ ಹಾಗೂ ಜೆಡಿಯು 12 ಕ್ಷೇತ್ರಗಳಲ್ಲಿ ಗೆದ್ದಿದ್ದವು. ನಾಲ್ಕು ಸಚಿವ ಸ್ಥಾನ ಹಾಗೂ ಲೋಕಸಭಾಧ್ಯಕ್ಷ ಸ್ಥಾನ ನೀಡಬೇಕು ಎಂದು ಟಿಡಿಪಿ ನಾಯಕರು ಪಟ್ಟು ಹಿಡಿದಿದ್ದರು. ಲೋಕಸಭಾಧ್ಯಕ್ಷ ಸ್ಥಾನ ನೀಡುವ ಸಾಧ್ಯತೆ ಕಡಿಮೆ. ಲೋಕಸಭೆಯ ಉಪಸಭಾಧ್ಯಕ್ಷ ಸ್ಥಾನ ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಉತ್ಸುಕರಾಗಿದ್ದಾರೆ. ಇನ್ನೊಂದೆಡೆ, ಏಳು ಸ್ಥಾನಗಳನ್ನು ಗೆದ್ದಿರುವ ಶಿವಸೇನಾಕ್ಕೆ ಸದ್ಯ ಒಂದು ಸಚಿವ ಸ್ಥಾನ ನೀಡಲಾಗಿದೆ. ಮಿತ್ರ ಪಕ್ಷಗಳಾದ ಜೆಡಿಎಸ್, ಎಲ್‌ಜೆಪಿ, ಅಪ್ನಾದಳ್, ಎಚ್‌ಎಎಂ, ಆರ್‌ಎಲ್‌ಡಿ, ಆರ್‌ಪಿಐ ಹಾಗೂ ಎಜೆಎಸ್‌ಯು ಪಕ್ಷಕ್ಕೆ ತಲಾ ಒಂದು ಖಾತೆ ನೀಡಲಾಗಿದೆ. ಎನ್‌ಸಿಪಿ ಹಾಗೂ ಜನಸೇನಾ ಪಕ್ಷಗಳಿಗೆ ಯಾವುದೇ ಸಚಿವ ಸ್ಥಾನ ಸಿಕ್ಕಿಲ್ಲ. ಜತೆಗೆ, ಮೂರರಿಂದ ಐದು ಖಾತೆಗಳನ್ನು ಕೇಳಿದ್ದ ಜೆಡಿಯು, ಟಿಡಿಪಿ ಹಾಗೂ ಶಿವಸೇನಾ ಪಕ್ಷಗಳ ಒತ್ತಡಗಳಿಗೆ ಬಿಜೆಪಿ ವರಿಷ್ಠರು ಮಣಿದಿಲ್ಲ.

ಮಲ್ಲಿಕಾರ್ಜುನ ಖರ್ಗೆ ಭಾಗಿ

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಿದರು. ಆದರೆ, 'ಇಂಡಿಯಾ' ಮೈತ್ರಿಕೂಟದ ಇತರ ಪಕ್ಷಗಳ ನಾಯಕರು ಗೈರುಹಾಜರಾದರು.

ಪ್ರತಿಪಕ್ಷದ ನಾಯಕರಾಗಿ ಖರ್ಗೆ ಅವರು ಸಮಾರಂಭದಲ್ಲಿ ಪಾಲ್ಗೊಂಡರು. ಆದರೆ, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಆರ್‌ಜೆಡಿ, ಡಿಎಂಕೆ, ಶಿವಸೇನೆ (ಯುಬಿಟಿ), ಎಎಪಿ, ಸಿಪಿಎಂ, ಸಿಪಿಐ, ಸಿಪಿಐ (ಎಂಎಲ್), ಜೆಎಂಎಂ ಮತ್ತು ಆರ್‌ಎಸ್‌ಪಿ ಸೇರಿದಂತೆ ಇತರ ನಾಯಕರು ಕಾರ್ಯಕ್ರಮಕ್ಕೆ ಹಾಜರಾಗದಿರಲು ನಿರ್ಧರಿಸಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಕಾಂಗ್ರೆಸ್‌ನ ಈ ನಡೆ ಮಿತ್ರ ಪಕ್ಷಗಳಿಗೆ ಸಮಾಧಾನ ತಂದಿಲ್ಲ.

ಬ್ರಾಹ್ಮಣರು, ಒಕ್ಕಲಿಗರಿಗೆ ಮಣೆ

ಒಂದನೇ ಪುಟದಿಂದ....

ಅಚ್ಚರಿಯ ನಿಲುವು: ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅಥವಾ ಜಗದೀಶ ಶೆಟ್ಟರ್ ಅವರಿಗೆ ಲಿಂಗಾಯತ ಕೋಟಾದಡಿ ಅವಕಾಶ ಕಲ್ಪಿಸಬಹುದು ಎಂಬ ನಿರೀಕ್ಷೆ ಬಿಜೆಪಿ ಮುಖಂಡರಲ್ಲಿತ್ತು. ಸತತ ಐದನೇ ಬಾರಿ ಗೆದ್ದಿರುವ ಗಾಣಿಗ ಲಿಂಗಾಯತ ಸಮುದಾಯದ ಪಿ.ಸಿ. ಗದ್ದಿಗೌಡರ್ ಈ ಬಾರಿ ಸಂಪುಟ ಸೇರುವ ನಿರೀಕ್ಷೆ ಇತ್ತು. ಸೋಮಣ್ಣ ಕೊನೆಯ ಆಯ್ಕೆ ಆಗಬಹುದು ಎಂಬ ಮಾತೂ ಪಕ್ಷದೊಳಗೆ ಇತ್ತು.

ಬಿಜೆಪಿ ನಾಯಕ ಅಮಿತ್ ಶಾ ಸೂಚನೆಯಂತೆ 2023ರ ವಿಧಾನಸಭಾ ಚುನಾವಣೆಯಲ್ಲಿ ವರುಣ ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸೋಮಣ್ಣ, ಎರಡೂ ಕ್ಷೇತ್ರಗಳಲ್ಲಿ ಸೋತಿದ್ದರು. ತಮ್ಮನ್ನು ಮೂಲೆಗುಂಪು ಮಾಡುವುದಕ್ಕಾಗಿ ಎರಡು ಕಡೆ ಸ್ಪರ್ಧೆಗೆ ಸೂಚಿಸಲಾಗಿತ್ತು ಎಂದು ಮುನಿಸಿಕೊಂಡಿದ್ದ ಅವರು, ಕಾಂಗ್ರೆಸ್‌ನತ್ತ ಮುಖ ಮಾಡುವ ಪ್ರಯತ್ನ ನಡೆಸಿದ್ದರು. ಬಿಜೆಪಿ ವರಿಷ್ಠರ ಮನವೊಲಿಕೆ ಬಳಿಕ ಸುಮ್ಮನಾಗಿದ್ದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧವೂ ಸೋಮಣ್ಣ ಮುನಿಸಿಕೊಂಡಿದ್ದರು.

ತುಮಕೂರು ಕ್ಷೇತ್ರದಲ್ಲಿ ಕಣಕ್ಕಿಳಿದು ಗೆದ್ದ ಅವರು ಲಿಂಗಾಯತ ಕೋಟಾದಡಿ ಸಂಪುಟ ಸೇರಿದ್ದಾರೆ. ಮಾಜಿ ಮುಖ್ಯಮಂತ್ರಿಗಳಿಬ್ಬರನ್ನೂ ಪಕ್ಕಕ್ಕಿಟ್ಟು ಸೋಮಣ್ಣ ಅವರಿಗೆ ವರಿಷ್ಠರು ಸಂಪುಟದಲ್ಲಿ ಅವಕಾಶ ನೀಡಿದ್ದಾರೆ.

ಜೆಡಿಎಸ್ ನಾಯಕ ಕುಮಾರಸ್ವಾಮಿ ಸಂಪುಟ ಸೇರುವುದು ನಿರೀಕ್ಷಿತವಾಗಿಯೇ ಇತ್ತು. ಆದರೆ, ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಸೋಲಿನ ಭೀತಿಯಿಂದ ಬೆಂಗಳೂರು ಉತ್ತರಕ್ಕೆ ವಲಸೆ ಬಂದು ಗೆದ್ದಿರುವ ಶೋಭಾ ಕರಂದ್ಲಾಜೆ ಅವರಿಗೆ ಪುನಃ ಅವಕಾಶ ಸಿಕ್ಕಿದೆ.

ದಕ್ಷಿಣ ಭಾರತದಿಂದ ಗೆದ್ದ ಬಿಜೆಪಿಯ ಏಕೈಕ ಸಂಸದೆ ಎಂಬುದು ಇದಕ್ಕೆ ಒಂದು ಕಾರಣ. ಒಕ್ಕಲಿಗರ ಕೋಟಾದ ಜತೆಯಲ್ಲೇ ಗಟ್ಟಿ ಧ್ವನಿಯಲ್ಲಿ ಪಕ್ಷ ಮತ್ತು ಸಂಘ ಪರಿವಾರದ ಸಮರ್ಥನೆಗೆ ನಿಲ್ಲುವ ಗುಣ ಕೂಡ ಅವರ ಬೆನ್ನಿಗೆ ನಿಂತಿದೆ ಎಂಬ ವಿಶ್ಲೇಷಣೆ ಬಿಜೆಪಿಯಲ್ಲಿದೆ. ಪರಿಶಿಷ್ಟ ಜಾತಿಯ ಕೋಟಾದಡಿ ಗೋವಿಂದ ಕಾರಜೋಳ ಅಥವಾ ರಮೇಶ ಜಿಗಜಿಣಗಿ ಇಬ್ಬರಲ್ಲಿ ಒಬ್ಬರಿಗೆ ಸಂಪುಟ ಸೇರುವ ಅವಕಾಶ ದೊರಕಲಿದೆ ಎಂದೇ ನಿರೀಕ್ಷಿಸಲಾಗಿತ್ತು. ಸತತ ನಾಲ್ಕನೇ ಬಾರಿ ಸಂಸದರಾಗಿರುವ ಪಿ.ಸಿ. ಮೋಹನ್ ಹೆಸರು ಕೂಡ ಹಿಂದುಳಿದ ವರ್ಗಗಳ ಕೋಟಾದಡಿ ಚಾಲ್ತಿಗೆ ಬಂದಿತ್ತು. ಬೆಂಗಳೂರಿಗೆ ಪ್ರಾತಿನಿಧ್ಯ ನೀಡುವಾಗಲೂ ಸತತ ನಾಲ್ಕನೇ ಬಾರಿ ಗೆದ್ದಿರುವ ಮೋಹನ್ ಹೆಸರು ಪರಿಗಣಿಸಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ದಲಿತರು ಮತ್ತು ಹಿಂದುಳಿದವರಿಗೆ ಪ್ರಾತಿನಿಧ್ಯವೇ ದೊರಕಿಲ್ಲ.

ಮಂಜುನಾಥ್‌ಗೆ ನಿರಾಸೆ: ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯಿಂದ ಕಣಕ್ಕಿಳಿದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ತಮ್ಮ, ಹಾಲಿ ಸಂಸದ ಡಿ.ಕೆ. ಸುರೇಶ್ ಅವರನ್ನು ದೊಡ್ಡ ಅಂತರದಿಂದ ಸೋಲಿಸಿರುವ ಡಾ.ಸಿ.ಎನ್. ಮಂಜುನಾಥ್ ಸಂಪುಟ ಸೇರುವ ನಿರೀಕ್ಷೆಯಲ್ಲಿದ್ದರು. ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಪ್ರಮುಖರೂ ಅವರ ಪರ ಪ್ರಯತ್ನ ನಡೆಸಿದ್ದರು. ಆದರೆ, ಮೊದಲ ಹಂತದಲ್ಲೇ ಸಂಪುಟ ಸೇರುವ ಆಸೆಯಲ್ಲಿದ್ದ ಮಂಜುನಾಥ್ ಅವರಿಗೆ ನಿರಾಸೆಯಾಗಿದೆ.

ಮತ್ತೆ ಸಂತೋಷ್ ಮೇಲುಗೈ?

ಈ ಬಾರಿ ಕೇಂದ್ರ ಸಂಪುಟ ಸೇರಿರುವವರಲ್ಲಿ ಬಿ.ಎಸ್. ಯಡಿಯೂರಪ್ಪ ಬೆಂಬಲಿಗರ ಸಂಖ್ಯೆ ಕಡಿಮೆ ಇದೆ. ಪ್ರಲ್ಹಾದ ಜೋಶಿ ಮತ್ತು ವಿ. ಸೋಮಣ್ಣ ಇಬ್ಬರೂ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಣದಲ್ಲಿ ಗುರುತಿಸಿಕೊಂಡಿದ್ದಾರೆ. ಶೋಭಾ ಕರಂದ್ಲಾಜೆ ಕೂಡ ಈಗ ಯಡಿಯೂರಪ್ಪ ಬಣದಲ್ಲಿ ಸಕ್ರಿಯವಾಗಿಲ್ಲ. ಪಕ್ಷದಲ್ಲಿ ಯಡಿಯೂರಪ್ಪ ಮತ್ತು ಅವರ ಕುಟುಂಬದ ಹಿಡಿತ ತಪ್ಪಿಸುವುದಕ್ಕಾಗಿ ಸಂತೋಷ್ ಬಣಕ್ಕೆ ಆದ್ಯತೆ ನೀಡಲಾಗಿದೆಯೇ ಎಂಬ ಚರ್ಚೆ ಬಿಜೆಪಿಯೊಳಗೆ ನಡೆದಿದೆ.

ವಿಧಾನ ಪರಿಷತ್ ಚುನಾವಣೆಯಲ್ಲೂ ತಮ್ಮ ಆಪ್ತ ಸಿ.ಟಿ. ರವಿ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವುದರಲ್ಲಿ ಸಂತೋಷ್ ಯಶಸ್ಸು ಕಂಡಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಸೋತವರಿಗೆ ಪರಿಷತ್ ಸ್ಥಾನ ನೀಡಬಾರದೆಂಬ ಒತ್ತಡ ಮಧ್ಯೆಯೂ ಯಡಿಯೂರಪ್ಪ ಬಣದವರಿಗೆ ಅವಕಾಶ ದೊರಕದಂತೆ ತಡೆದ ಸಂತೋಷ್, ರವಿ ಅವರ ಹೆಸರಿಗೆ ಒಪ್ಪಿಗೆ ಕೊಡಿಸಿದ್ದರು ಎಂಬ ಸುದ್ದಿಯೂ ಬಿಜೆಪಿ ಪಡಸಾಲೆಯೊಳಗೆ ಇದೆ.

ಪ್ರಾದೇಶಿಕ ಸಮತೋಲನವೂ ಇಲ್ಲ

ರಾಜ್ಯದಿಂದ ಸಚಿವರಾಗಿರುವವರ ಪೈಕಿ ನಿರ್ಮಲಾ ಸೀತಾರಾಮನ್ ತಮಿಳುನಾಡಿನವರು. ಉಳಿದ ನಾಲ್ಕರಲ್ಲಿ ಮೂರು ಸಚಿವ ಸ್ಥಾನಗಳು ಹಳೆ ಮೈಸೂರು ಭಾಗಕ್ಕೆ ದೊರಕಿವೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ಬಂದಿದ್ದರೂ ಪ್ರಲ್ಹಾದ ಜೋಶಿ ಒಬ್ಬರಿಗೇ ಸಚಿವ ಸ್ಥಾನ ನೀಡಲಾಗಿದೆ. ಅಲ್ಲಿ ಬಿಜೆಪಿಯನ್ನು ಗೆಲುವಿನ ದಡ ಸೇರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಲಿಂಗಾಯತರ ನಿರೀಕ್ಷೆಯನ್ನು ಬಿಜೆಪಿ ಹುಸಿಗೊಳಿಸಿದೆ.

ಬಿಟ್ಟೂ, ಕುರಿಯನ್ ಅಚ್ಚರಿ ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಪಂಜಾಬ್‌ನ ಲುಧಿಯಾನ ಕ್ಷೇತ್ರದಲ್ಲಿ ಸೋತಿರುವ ರವನೀತ್ ಸಿಂಗ್ ಬಿಟ್ಟೂ ಅವರಿಗೆ ಅದೃಷ್ಟ ಖುಲಾಯಿಸಿದೆ. ಅವರು ಕೇಂದ್ರ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಬಿಜೆಪಿ ಕೇರಳ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಜಾರ್ಜ್ ಕುರಿಯನ್ ಅವರನ್ನು ಕೇಂದ್ರ ಸಚಿವರನ್ನಾಗಿ ಮಾಡಲಾಗಿದೆ. ಅವರು ಉಭಯ ಸದನಗಳ ಸದಸ್ಯರಲ್ಲ. ಇವರಿಬ್ಬರದ್ದೂ ಅಚ್ಚರಿಯ ಆಯ್ಕೆ.

ಬಿಟ್ಟೂ ಅವರು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಮೊಮ್ಮಗ. 2014ರಿಂದ ಲುಧಿಯಾನ ಕ್ಷೇತ್ರದ ಕಾಂಗ್ರೆಸ್ ಸಂಸದರಾಗಿದ್ದ ಅವರು ಲೋಕಸಭಾ ಚುನಾವಣೆಗೆ ಮುನ್ನ ಕಮಲ ಪಾಳಯಕ್ಕೆ ಸೇರ್ಪಡೆಯಾಗಿದ್ದರು. ಆದರೆ, ಚುನಾವಣೆಯಲ್ಲಿ ಸೋತಿದ್ದರು. 2019ರಲ್ಲಿ ಪಂಜಾಬ್‌ನಲ್ಲಿ ಬಿಜೆಪಿ ಎರಡು ಸ್ಥಾನಗಳನ್ನು ಗೆದ್ದಿತ್ತು. ಈ ಸಲ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಪಕ್ಷವು ಯಾವುದೇ ಸ್ಥಾನಗಳನ್ನು ಗೆಲ್ಲುವಲ್ಲಿ ವಿಫಲವಾಗಿದೆ, ಆದರೆ, ಪಕ್ಷದ ಮತ ಗಳಿಕೆ ಪ್ರಮಾಣ ಹೆಚ್ಚಾಗಿದೆ. ಪಂಜಾಬ್‌ನಲ್ಲಿ ಹೊಸ ತಲೆಮಾರಿನ ನಾಯಕರನ್ನು ಬೆಳೆಸುವ ಉದ್ದೇಶದಿಂದ ಬಿಟ್ಟೂ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಕ್ಯಾಥಲಿಕ್ ಸಮುದಾಯದ ಕುರಿಯನ್ ಅವರು 40 ವರ್ಷಗಳಿಂದ ಬಿಜೆಪಿಯಲ್ಲಿದ್ದಾರೆ. ಈ ಲೋಕಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಬಿಜೆಪಿ ಖಾತೆ ತೆರೆದಿದೆ. ಜತೆಗೆ, ಪಕ್ಷದ ಮತ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದೆ. ಸುರೇಶ್ ಗೋಪಿ ಗೆಲುವಿನಲ್ಲಿ ಕ್ರೈಸ್ತ ಸಮುದಾಯದ ಮತಗಳು ಪ್ರಮುಖ ಪಾತ್ರ ವಹಿಸಿವೆ. ಹೀಗಾಗಿ, ಕ್ರೈಸ್ತ ಮತ ಬ್ಯಾಂಕ್ ಅನ್ನು ಇನ್ನಷ್ಟು ಗಟ್ಟಿಗೊಳಿಸಲು ಕುರಿಯನ್ ಅವರನ್ನು ಸಚಿವರನ್ನಾಗಿ ಮಾಡಲಾಗಿದೆ. ಕೇರಳ ವಿಧಾನಸಭೆಗೆ 2026ರಲ್ಲಿ ಚುನಾವಣೆ ನಡೆಯಲಿದೆ.

ಸಂಪುಟಕ್ಕೆ ನಡ್ಡಾ: ಬಿಜೆಪಿಗೆ ಶೀಘ್ರ ನೂತನ ಅಧ್ಯಕ್ಷರು?

2000ರಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿರುವ ಜೆ.ಪಿ.ನಡ್ಡಾ ಅವರು ಕೇಂದ್ರ ಸಂಪುಟಕ್ಕೆ ಸೇರ್ಪಡೆಯಾದರು. ಹೀಗಾಗಿ, ಬಿಜೆಪಿ ರಾಷ್ಟ್ರೀಯ ಘಟಕಕ್ಕೆ ಶೀಘ್ರ ನೂತನ ಅಧ್ಯಕ್ಷರ ನೇಮಕವಾಗುವ ಸಂಭವ ಇದೆ.

2014ರಲ್ಲಿ ರಾಜನಾಥ್ ಸಿಂಗ್ ಅವರು ಬಿಜೆಪಿ ಅಧ್ಯಕ್ಷರಾಗಿದ್ದರು. ಕೇಂದ್ರ ಸಂಪುಟಕ್ಕೆ ಸೇರಿದ ಬಳಿಕ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ಅಮಿತ್ ಶಾ ಅವರು ಪಕ್ಷದ ಅಧ್ಯಕ್ಷರಾಗಿದ್ದರು. ಅವರು 2019ರಲ್ಲಿ ಕೇಂದ್ರ ಸಂಪುಟಕ್ಕೆ ಸೇರ್ಪಡೆಯಾಗಿದ್ದರು. 2020ರಲ್ಲಿ ನಡ್ಡಾ ಪಕ್ಷದ ಅಧ್ಯಕ್ಷರಾಗಿ ನೇಮಕರಾಗಿದ್ದರು. ಅವರ ಅವಧಿಯನ್ನು ಎರಡು ಬಾರಿ ವಿಸ್ತರಿಸಲಾಗಿತ್ತು.

ರಾಣೆ, ರೂಪಾಲಾ, ಠಾಕೂರ್‌ಗೆ ಕೊಕ್

2014ರಿಂದ 19ರ ಅವಧಿಗೆ ಮೋದಿ ಸಂಪುಟದಲ್ಲಿ ಸಚಿವರಾಗಿದ್ದ ನಾರಾಯಣ ರಾಣೆ, ಪುರುಷೋತ್ತಮ ರೂಪಾಲಾ, ಅನುರಾಗ್ ಠಾಕೂರ್ ಸೇರಿದಂತೆ ಏಳರಿಂದ ಎಂಟು ಮಂದಿಗೆ ಈ ಸಲ ಅವಕಾಶ ಸಿಕ್ಕಿಲ್ಲ.

ಲೋಕಸಭಾ ಚುನಾವಣೆಯಲ್ಲಿ ರಾಜೀವ್ ಚಂದ್ರಶೇಖರ್, ಸ್ಮೃತಿ ಇರಾನಿ, ಅರ್ಜುನ್ ಮುಂಡಾ ಸೇರಿದಂತೆ 15ಕ್ಕೂ ಅಧಿಕ ಸಚಿವರು ಸೋತಿದ್ದರು.

ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ರಾಜ್ ಕೋಟ್‌ನಲ್ಲಿ ನಡೆದ ಸಭೆಯಲ್ಲಿ ಪುರುಷೋತ್ತಮ ರೂಪಾಲಾ, 'ರಜಪೂತ ದೊರೆಗಳು ಬ್ರಿಟಿಷರಿಗೆ ಸಹಕರಿಸಿದ್ದರು ಮತ್ತು ಅವರಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದರು' ಎಂದು ಹೇಳಿಕೆ ನೀಡಿದ್ದರು. ಈ ಹೇಳಿಕೆಯನ್ನು ವಿರೋಧಿಸಿ ಕ್ಷತ್ರಿಯರು ರಾಜ್ಯದಾದ್ಯಂತ ಹೋರಾಟ ನಡೆಸಿದ್ದರು. ಇದರಿಂದ ಬಿಜೆಪಿ ಇಕ್ಕಟ್ಟಿಗೆ ಸಿಲುಕಿತ್ತು.

ಮೋದಿ 3.0: 'ಮೈತ್ರಿ' ಸಂಪುಟಕ್ಕೆ 72 ಗರಿ

ಒಂದನೇ ಪುಟದಿಂದ

ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್, ಮನೋಹರ್ ಲಾಲ್ ಖಟ್ಟರ್ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ಸರತಿಯಲ್ಲಿ ಐದನೇ, ಎಂಟನೇ ಹಾಗೂ ಒಂಬತ್ತನೆಯವರಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಮೂವರ ಆಡಳಿತದ ಅನುಭವವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಸಂದೇಶವನ್ನು ಪ್ರಧಾನಿಯವರು ಈ ಮೂಲಕ ರವಾನಿಸಿದರು.

ಎನ್‌ಡಿಎ ಒಕ್ಕೂಟದ ಮಿತ್ರ ಪಕ್ಷಗಳಲ್ಲಿ ಮೊದಲನೆಯವರಾಗಿ ಕುಮಾರಸ್ವಾಮಿ ಅವರು ಪ್ರಮಾಣವಚನ ಸ್ವೀಕರಿಸಿದ್ದು ವಿಶೇಷ. ಅವರು ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಸಭಿಕರೊಬ್ಬರು ಕನ್ನಡದಲ್ಲಿ ಘೋಷಣೆ ಕೂಗಿದರು.

ಕಾಂಗ್ರೆಸ್‌ನಿಂದ ವರ್ಷಗಳ ಹಿಂದೆ ವಲಸೆ ಬಂದಿರುವ ಜ್ಯೋತಿರಾದಿತ್ಯ ಸಿಂಧಿಯಾ, ಜಿತಿನ್ ಪ್ರಸಾದ್ ಹಾಗೂ ಚುನಾವಣೆಗೆ ಮುನ್ನ ಪಕ್ಷಕ್ಕೆ ಸೇರ್ಪಡೆಯಾದ ರವನೀತ್ ಸಿಂಗ್ ಬಿಟ್ಟೂ ಅವರು ಸಂಪುಟದಲ್ಲಿ ಜಾಗ ಪಡೆದಿದ್ದಾರೆ. ಸಿಂಧಿಯಾ ಹಾಗೂ ಜಿತಿನ್ ಅವರು ಈ ಹಿಂದೆ ರಾಹುಲ್ ಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು.

ಮಹಾರಾಷ್ಟ್ರ, ಹರಿಯಾಣ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗಳಿಗೆ ಈ ವರ್ಷ ಚುನಾವಣೆ ನಡೆಯಲಿದೆ. ದೆಹಲಿ, ಜಾರ್ಖಂಡ್ ಹಾಗೂ ಬಿಹಾರ ವಿಧಾನಸಭೆಗಳಿಗೆ ಮುಂದಿನ ವರ್ಷ ಚುನಾವಣೆ ಜರುಗಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ರಾಜ್ಯಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ಮೈತ್ರಿಕೂಟವು ಈ ಸಲ ಕಳಪೆ ಸಾಧನೆ ಮಾಡಿತ್ತು. ಆದರೂ, ಆ ರಾಜ್ಯದ ಆರು ಮಂದಿಯನ್ನು ಸೇರಿಸಿಕೊಳ್ಳಲಾಗಿದೆ.

ರಾಜ್ಯವಾರು ಪ್ರಾತಿನಿಧ್ಯ

ಉತ್ತರ ಪ್ರದೇಶ	9 (ಪ್ರಧಾನಿ ಹೊರತುಪಡಿಸಿ)	ತೆಲಂಗಾಣ	2
ಬಿಹಾರ	8	ಪಶ್ಚಿಮ ಬಂಗಾಳ	2
ಮಹಾರಾಷ್ಟ್ರ	6	ಜಾರ್ಖಂಡ್	2
ಮಧ್ಯಪ್ರದೇಶ	5	ಗೋವಾ	1
ಗುಜರಾತ್	5	ಜಮ್ಮು ಮತ್ತು ಕಾಶ್ಮೀರ	1
ಕರ್ನಾಟಕ	5	ಹಿಮಾಚಲ ಪ್ರದೇಶ	1
ರಾಜಸ್ಥಾನ	4	ಅರುಣಾಚಲ ಪ್ರದೇಶ	1
ಒಡಿಶಾ	3	ಪಂಜಾಬ್	1
ಹರಿಯಾಣ	3	ಉತ್ತರಾಖಂಡ	1
ಆಂಧ್ರ ಪ್ರದೇಶ	3	ದೆಹಲಿ	1
ಅಸ್ಸಾಂ	2	ತಮಿಳುನಾಡು	1
ಕೇರಳ	2	ಛತ್ತೀಸಗಢ	1

'ಮೋದಿ 'ನರೇಂದ್ರ ವಿಧ್ವಂಸಕ ಮೈತ್ರಿಕೂಟದ' ನಾಯಕ'

ನವದೆಹಲಿ (ಪಿಟಿಐ): 'ಕಾನೂನುಬದ್ಧತೆಯ ಕೊರತೆಯಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ನರೇಂದ್ರ ವಿಧ್ವಂಸಕ ಮೈತ್ರಿಕೂಟದ' (ಎನ್‌ಡಿಎ) ನಾಯಕ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ಮೋದಿ ಅವರು ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಮುನ್ನ ರಾಜ್‌ಘಾಟ್‌ಗೆ ಭೇಟಿ ನೀಡಿದ್ದನ್ನು 'ಬೂಟಾಟಿಕೆ' ಎಂದು ಅವರು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

ಉಮ್ಮತ್ತೂರು ವರ್ಷಾ ಭಾಗಿ



ಚಾಮರಾಜನಗರ: ನರೇಂದ್ರ ಮೋದಿ ಅವರು 3ನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭದಲ್ಲಿ ತಾಲ್ಲೂಕಿನ ಉಮ್ಮತ್ತೂರಿನ ವರ್ಷಾ ಭಾಗವಹಿಸಿದ್ದರು. ಎಂ.ಟೆಕ್. ಪದವೀಧರೆಯಾಗಿರುವ ವರ್ಷಾ ಅವರು ಪ್ರಧಾನಿ ಮೋದಿ ಅವರ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲಿ ಪ್ರಸ್ತಾಪವಾದ ಸಂಗತಿಯಿಂದ ಪ್ರೇರಣೆ ಗೊಂಡು ಬಾಳೆದಂಡಿನ ನಾರಿನಿಂದ ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸಲು ಆರಂಭಿಸಿದ್ದರು. ವರ್ಷಾ ಅವರ ಈ ಪ್ರಯತ್ನವನ್ನು ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಶ್ಲಾಘಿಸಿದ್ದರು. 'ಶನಿವಾರ ಸಂಜೆ 4ಕ್ಕೆ ಪ್ರಧಾನಿ ಕಚೇರಿಯಿಂದ ಕರೆ ಬಂತು ಟಿವಿಯಲ್ಲೂಮಾಹಿತಿ ಬಂತು. ಹಾಗಾಗಿ, ಬೆಳಿಗ್ಗೆ ಬೇಗ ಹೊರಟು ಕಾರ್ಯಕ್ರಮದಲ್ಲಿ ಭಾಗಿಯಾದೆ' ಎಂದು ವರ್ಷಾ 'ಪ್ರಜಾವಾಣಿ'ಗೆ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in



ಸುಭಾಷಿತ

ಸೋಲುಗಳ ಪರಾಮರ್ಶೆ ಮಾಡು. ಆಗ ಗೆಲುವಿಗಾಗಿ ನೀನು ಹೆಚ್ಚಿನ ಶ್ರಮ ಹಾಕಬೇಕಾದ ಅಗತ್ಯ ಬರುವುದಿಲ್ಲ.

—ಸಿದ್ಧೇಶ್ವರ ಸ್ವಾಮೀಜಿ

ಮಹಿಳೆಯರಿಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ರಾಜಕೀಯ ಪಕ್ಷಗಳಲ್ಲಿ ಕಾಣದ ಬದ್ಧತೆ

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕಲ್ಪಿಸಲು ಅವಕಾಶ ನೀಡುವ ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್ತು ಅಂಗೀಕಾರ ಕೊಟ್ಟು ತಿಂಗಳುಗಳು ಕಳೆದಿವೆ. ಆದರೆ ಹೊಸದಾಗಿ ರಚನೆಯಾಗಿರುವ ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಇದೆ. ಮಹಿಳೆಯರಿಗೆ ಸೂಕ್ತ ರೀತಿಯಲ್ಲಿ ಪ್ರಾತಿನಿಧ್ಯ ಒದಗಿಸುವ ವಿಚಾರದಲ್ಲಿ ಯಾವ ಪಕ್ಷವೂ ಬದ್ಧತೆಯನ್ನು ಪ್ರದರ್ಶಿಸಿಲ್ಲ. 18ನೇ ಲೋಕಸಭೆಯಲ್ಲಿ 74 ಮಹಿಳಾ ಸದಸ್ಯರು ಇರಲಿದ್ದಾರೆ. ಕಳೆದ ಲೋಕಸಭೆಯಲ್ಲಿ ಇದ್ದ ಮಹಿಳಾ ಸದಸ್ಯರಿಗಿಂತ ಈ ಸಂಖ್ಯೆ ಕಡಿಮೆ. ಹಿಂದಿನ ಬಾರಿ 78 ಸದಸ್ಯೆಯರು ಇದ್ದರು. ಶೇ 48ರಷ್ಟು ಮಹಿಳಾ ಮತದಾರರು ಇರುವ ದೇಶದಲ್ಲಿ, ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯದ ಪ್ರಮಾಣ ಶೇ 13ರಷ್ಟು ಮಾತ್ರ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಣದಲ್ಲಿ ಇದ್ದ ಅಭ್ಯರ್ಥಿಗಳ ಒಟ್ಟು ಸಂಖ್ಯೆ 8,360. ಇವರಲ್ಲಿ ಮಹಿಳೆಯರ ಪ್ರಮಾಣ ಶೇ 10ರಷ್ಟು ಇತ್ತು. 155 ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳೇ ಇರಲಿಲ್ಲ.

ಬಿಜೆಪಿಯು 69 ಮಂದಿ ಮಹಿಳೆಯರನ್ನು ಕಣಕ್ಕೆ ಇಳಿಸಿತ್ತು, ಈ ಪೈಕಿ 32 ಮಂದಿ ಜಯ ಗಳಿಸಿದ್ದಾರೆ. ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ್ದ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 41. ಇವರಲ್ಲಿ 13 ಮಂದಿ ಗೆದ್ದಿದ್ದಾರೆ. ಇಲ್ಲಿ ಟಿಎಂಸಿ ಸಾಧನೆ ಉತ್ತಮವಾಗಿದೆ. ಟಿಎಂಸಿ ಪಕ್ಷವು 12 ಮಂದಿ ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸಿತ್ತು. ಈ ಪೈಕಿ 11 ಮಂದಿ ಗೆಲುವು ಸಾಧಿಸಿದ್ದಾರೆ. ಟಿಎಂಸಿಯ ಒಟ್ಟು 29 ಸಂಸದರ ಪೈಕಿ ಮಹಿಳೆಯರ ಪಾಲು ಶೇ 38ರಷ್ಟಿದೆ. ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯವು ಬಹಳ ನಿಧಾನವಾಗಿ ಏರಿಕೆ ಕಾಣುತ್ತಿದೆ. ಮಹಿಳೆಯರು ಜೀವನದ ಇತರ ಕ್ಷೇತ್ರಗಳಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಮುನ್ನಡೆ ಸಾಧಿಸಿದ್ದಾರೆ. ಆದರೆ ರಾಜಕಾರಣವು ಅವರ ಪಾಲಿಗೆ ಅನುಕೂಲಕರ ಆಗುತ್ತಿಲ್ಲ. ಚುನಾಯಿತರಾದ ಮಹಿಳಾ ಅಭ್ಯರ್ಥಿಗಳ ಪೈಕಿ, ರಾಜಕೀಯವಾಗಿ ಪ್ರಭಾವಿಯಾಗಿರುವ ಕುಟುಂಬಗಳ ಮಹಿಳೆಯರ ಸಂಖ್ಯೆ ಜಾಸ್ತಿ ಇದೆ. ಅಲ್ಲದೆ, ಸಿನಿಮಾ ಕ್ಷೇತ್ರದಿಂದ ಬಂದ ಮಹಿಳೆಯರ ಸಂಖ್ಯೆಯೂ ಹೆಚ್ಚಿದೆ. ಇಂತಹ ಹಿನ್ನೆಲೆಯ ಮಹಿಳೆಯರಿಗೆ ಇತರ ಮಹಿಳೆಯರಿಗಿಂತ ಹೆಚ್ಚಿನ ಅನುಕೂಲಗಳು ಇರುತ್ತವೆ ಎಂಬುದು ಗಮನಾರ್ಹ. ಮಹಿಳೆಯರಲ್ಲಿ ರಾಜಕೀಯವನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗಬೇಕು, ಅವರು ರಾಜಕಾರಣಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಆಗಬೇಕು; ಯಾವುದೋ ಕುಟುಂಬದ ಪ್ರತಿನಿಧಿಯಾಗಿ ಕಣಕ್ಕೆ ಇಳಿಯುವ ಸ್ಥಿತಿ ಇರಬಾರದು. ಮಹಿಳೆಯರು ಪುರುಷರಿಗೆ ಸರಿಸಮಾನರಾಗಿ ರಾಜಕಾರಣದಲ್ಲಿ ಮೇಲೆ ಬರಲು ಅಗತ್ಯವಿರುವ ವಾತಾವರಣವನ್ನು ರೂಪಿಸುವುದು ಎಲ್ಲರ ಹೊಣೆ.



ಶಾಸನಸಭೆಗಳು ಹಾಗೂ ರಾಜಕೀಯ ಅಧಿಕಾರದ ಸ್ಥಾನಗಳಲ್ಲಿ ಮಹಿಳೆಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಾಗ ಮಾತ್ರ ಆಕೆಯ ಸಬಲೀಕರಣವು ನಿಜ ಅರ್ಥದಲ್ಲಿ ಸಾಕಾರ ಆದಂತೆ ಆಗುತ್ತದೆ

ಆದರೆ, ಮಹಿಳೆಯರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲು ಸಿದ್ಧರಿಲ್ಲದ, ಮಹಿಳೆಯರ ಜೊತೆ ಅಧಿಕಾರ ಹಂಚಿಕೊಳ್ಳಲು ಒಲ್ಲದ ಪುರುಷರೇ ಇಂದಿನ ರಾಜಕಾರಣದಲ್ಲಿ ಪ್ರಾಬಲ್ಯ ಸಾಧಿಸಿದ್ದಾರೆ. ಅವರು ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲು ಒಪ್ಪದೇ ಇರುವುದಕ್ಕೆ ಕಾರಣ ಪುರುಷಪ್ರಧಾನ ಮನೋಭಾವ. ಹೀಗಿದ್ದರೂ, ಈಚಿನ ವರ್ಷಗಳಲ್ಲಿ ಮಹಿಳೆಯರು ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿರುವುದು ಹೆಚ್ಚಾಗುತ್ತಿದೆ. ಈಗ ಮುಕ್ತಾಯಗೊಂಡಿರುವ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರು ಮತ ಚಲಾಯಿಸಿದ ಪ್ರಮಾಣ ಶೇ 66ರಷ್ಟು ಇತ್ತು. ಇದು ಪುರುಷರು ಮತ ಚಲಾಯಿಸಿದ ಪ್ರಮಾಣಕ್ಕೆ ಸರಿಸಮನಾಗಿದೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ಸರ್ಕಾರಗಳು ಹಲವು ಯೋಜನೆಗಳನ್ನು ರೂಪಿಸುತ್ತಿವೆ, ರಾಜಕೀಯ ಪಕ್ಷಗಳು ಮಹಿಳೆಯರ ಮತ ಪಡೆಯಲು ವಿಶೇಷ ಪ್ರಯತ್ನಗಳನ್ನು ನಡೆಸುತ್ತವೆ. ಆದರೆ, ಅಧಿಕಾರ ಹಿಡಿಯುವ ಪುರುಷರಿಗೆ ಅನುಕೂಲ ಕಲ್ಪಿಸಿಕೊಡುವ ಮತಬ್ಯಾಂಕ್ ಆಗಿ ಮಾತ್ರವೇ ಮಹಿಳೆಯರನ್ನು ಕಾಣಲಾಗುತ್ತಿದೆ, ಆ ಕಾರಣಕ್ಕಾಗಿ ಅವರನ್ನು ಓಲೈಸಲು ಯತ್ನಿಸಲಾಗುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯು ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಅನುಷ್ಠಾನಕ್ಕೆ ಬರುವುದು ಕೂಡ ಅನುಮಾನ. ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯದ ವಿಚಾರದಲ್ಲಿ ಬೇರೆ ಹಲವು ದೇಶಗಳು ಭಾರತಕ್ಕಿಂತ ಮುಂದೆ ಇವೆ. ದಕ್ಷಿಣ ಆಫ್ರಿಕಾದಲ್ಲಿ ಶೇ 46ರಷ್ಟು ಸಂಸದರು, ಬ್ರಿಟನ್ನಿನಲ್ಲಿ ಶೇ 35ರಷ್ಟು, ಅಮೆರಿಕದಲ್ಲಿ ಶೇ 29ರಷ್ಟು ಸಂಸದರು ಮಹಿಳೆಯರು. ಶಾಸನಸಭೆಗಳಲ್ಲಿ ಹಾಗೂ ರಾಜಕೀಯ ಅಧಿಕಾರದ ಸ್ಥಾನಗಳಲ್ಲಿ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಾಗ ಮಾತ್ರ ಮಹಿಳೆಯ ಸಬಲೀಕರಣವು ನಿಜ ಅರ್ಥದಲ್ಲಿ ಸಾಕಾರಗೊಂಡಂತೆ ಆಗುತ್ತದೆ.

ರಾಷ್ಟ್ರ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಮತ್ತೆ ದೊರೆಯಿತು ಮಹತ್ವ

ಗ್ರಹಿಸಬೇಕಿದೆ ಫಲಿತಾಂಶದ ಸಂದೇಶ



ವಿಶ್ಲೇಷಣೆ

ಜ್ಯೋತಿ

ಈ ಬಾರಿಯ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಅವಲೋಕಿಸಿದಾಗ ಮತದಾರರು ಅತ್ಯಂತ ಪ್ರಬುದ್ಧರಾಗಿ ಮತ ಚಲಾಯಿಸಿದ್ದಾರೆ ಎನ್ನುವುದು ಮನವರಿಕೆ ಆಗುತ್ತದೆ. ಈ ಫಲಿತಾಂಶವು ನಿಸ್ಸಂಶಯವಾಗಿ ದೇಶದ ಪ್ರಜಾಪ್ರಭುತ್ವಕ್ಕೆ ಸಿಕ್ಕಂತಹ ಐತಿಹಾಸಿಕ ಗೆಲುವು. ಇಂತಹ ವಿಸ್ಮಯಕಾರಿ ಫಲಿತಾಂಶವನ್ನು ಯಾವುದೇ ಮತಗಟ್ಟೆ ಸಮೀಕ್ಷೆಗೂ ಗ್ರಹಿಸಲು ಸಾಧ್ಯವಾಗಲಿಲ್ಲ. ಈ ಫಲಿತಾಂಶವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ದೇಶದ ಪ್ರಜೆಗಳು ಮತ್ತು ಪಕ್ಷಗಳಿಗೆ ಇದು ಹಲವಾರು ಒಳನೋಟಗಳನ್ನು ನೀಡುತ್ತದೆ.

ಇಲ್ಲಿನ ಮೊದಲ ಪಾಠ, ಇಲ್ಲಿ 'ಯಾರೂ ಮುಖ್ಯರಲ್ಲ, ಅಮುಖ್ಯರೂ ಅಲ್ಲ'. ಅಭಿವೃದ್ಧಿಯ ಬಗ್ಗೆ ನೇತಾರರು ಏನೇ ಹೇಳಿಕೊಳ್ಳಲಿ, ಅದರ ಫಲ ತಮಗೆಷ್ಟು ತಲುಪಿದೆ ಎನ್ನುವುದಷ್ಟೇ ನಮ್ಮ ಮತದಾರರಿಗೆ ಮುಖ್ಯವಾಗುತ್ತದೆ. ಜಾಹೀರಾತುಗಳ ಮೂಲಕ ಪಕ್ಷಗಳು ಬಿಂಬಿಸುವ 'ಅಭಿವೃದ್ಧಿ' ಚಿತ್ರಣಕ್ಕೆ ಜನ ಮರುಳಾಗಿಲ್ಲ.

ಈ ಫಲಿತಾಂಶದ ಇನ್ನೊಂದು ವಿಶೇಷ ಅಂಶವೆಂದರೆ, ಕಣದಲ್ಲಿರುವ ಅಭ್ಯರ್ಥಿ ಎಂತಹವರು ಎನ್ನುವುದನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಜನ ಮತದಾನ ಮಾಡಿದಂತಿದೆ. ಅಂದರೆ, ಪಕ್ಷದ ಒಬ್ಬಿಬ್ಬರು ನಾಯಕರನ್ನೇ ಕೇಂದ್ರಬಿಂದುವಾಗಿಸಿ ಚುನಾವಣೆ ಎದುರಿಸಿದರೂ ಸ್ಥಳೀಯ ಅಭ್ಯರ್ಥಿ ಅರ್ಹನಾಗಿಲ್ಲದಿದ್ದರೆ ಮತದಾರರು ಅಂತಹವರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸುತ್ತಾರೆ ಎಂಬ ಸಂದೇಶ ಕೆಲವಾದರೂ ಕ್ಷೇತ್ರಗಳಲ್ಲಿ ದಾಖಲಾಗಿದೆ. ಹಾಗಾಗಿ, ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ಅವರ ಜಾತಿ, ಹಣಬಲ, ತೋಳ್ಬಲಕ್ಕಿಂತ ಹೆಚ್ಚಾಗಿ ಶಾಸನಸಭೆಗೆ ಹೋಗಲು ಇರಬೇಕಾದ ಅರ್ಹತೆಯತ್ತಲೂ ಗಮನಹರಿಸಬೇಕಾಗುತ್ತದೆ. ನಾಯಕರ ನಾಮಬಲ ಮಾತ್ರದಿಂದ ಒಂದು ಚುನಾವಣೆಯನ್ನೇನೋ ಗೆಲ್ಲಬಹುದು, ಆದರೆ, ಮತ್ತೆ ಮತ್ತೆ ಅದೇ ಅಭ್ಯರ್ಥಿಯನ್ನು ಆ ಒಂದೇ ಕಾರಣಕ್ಕಾಗಿ ಜನ ಗೆಲ್ಲಿಸಲಾರರು.

ಈ ಚುನಾವಣೆಯಲ್ಲಿ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಿದವರಲ್ಲಿ ಕೆಳವರ್ಗದವರು, ಆರ್ಥಿಕವಾಗಿ ಹಿಂದುಳಿದವರು, ಯುವಜನ, ಗೃಹಿಣಿಯರು ಮತ್ತು ಅಲ್ಪಸಂಖ್ಯಾತರ ಪಾತ್ರ ಹೆಚ್ಚಿನದು. ಯಾಕೆಂದರೆ, ಸಾಮಾನ್ಯವಾಗಿ ಈ ಸಮೂಹದ ಜನರ ದೈನಂದಿನ ಬದುಕಿನ ಮೇಲೆ ಸರ್ಕಾರದ ಕಾರ್ಯಕ್ರಮಗಳು ಅತಿ ಹೆಚ್ಚು ಪ್ರಭಾವ ಬೀರುತ್ತವೆ. ವಸ್ತುಸ್ಥಿತಿ ಅವರ ಗ್ರಹಿಕೆಗೆ ತ್ವರಿತವಾಗಿ ನಿಲುಕುತ್ತದೆ. ಅದಕ್ಕೆ ಅನುಗುಣವಾಗಿ ಮತ ನೀಡುವುದು ಸಹಜ ವಿದ್ಯಮಾನ. ಈ ದಿಸೆಯಲ್ಲಿ, ಪ್ರಸಕ್ತ ಚುನಾವಣಾ ಫಲಿತಾಂಶವು ದೇಶ ಇಂದು ಎದುರಿಸುತ್ತಿರುವ ಕೆಲವು ಗಂಭೀರ ಸಮಸ್ಯೆಗಳ ಸತ್ಯದರ್ಶನ ಮಾಡಿಸುತ್ತದೆ.


ವಿದೇಶಿ ನೆಲದಲ್ಲಿ ಭಾರತದ ಕುರಿತು ಒಳ್ಳೆಯ ಚಿತ್ರಣ ಮೂಡುತ್ತಿದೆ ಎನಿಸಿದರೂ ಮಾಧ್ಯಮಗಳ ಮುಂದೆ ಮಾತನಾಡುವ 'ಉಳ್ಳವರು' ಸಂತುಷ್ಟರಂತೆ ಕಂಡುಬಂದರೂ ತೆರೆಮರೆಯಲ್ಲಿ ಹೊಗೆಯಾಡುತ್ತಿರುವ ನಿರುದ್ಯೋಗ, ಬಡತನ, ಬೆಲೆ ಏರಿಕೆ, ಉಳ್ಳವರು ಮತ್ತು ಇಲ್ಲದವರ ನಡುವೆ ಹೆಚ್ಚಾಗುತ್ತಿರುವ ಅಂತರದಂತಹ ಅಸಲಿ ಸಮಸ್ಯೆಗಳು ಪರಿಣಾಮ ಬೀರದೇ ಇರುವುದಿಲ್ಲ.

ಸಿಎಸ್‌ಡಿಎಸ್– ಲೋಕನೀತಿ ಸಂಸ್ಥೆ ನಡೆಸಿದ ಚುನಾವಣಾಪೂರ್ವ ಸಮೀಕ್ಷೆಯಲ್ಲಿ ಕಂಡುಬಂದಂತೆ, ದೇಶ ಇಂದು ಎದುರಿಸುತ್ತಿರುವ ಎರಡು ಬಹುದೊಡ್ಡ ಸಮಸ್ಯೆಗಳೆಂದರೆ- ನಿರುದ್ಯೋಗ ಮತ್ತು ಬೆಲೆ ಏರಿಕೆ. ಬಡವರ್ಗಗಳ ಯುವಜನ ಈ ಮತದಾನದ ಮೂಲಕ ದೇಶದ ಉದ್ಯೋಗ ಸ್ಥಿತಿಗತಿ ಕುರಿತಂತೆ ತಮ್ಮ ಅಸಮಾಧಾನವನ್ನು ಹೊರಹಾಕಿರುವುದು ಸ್ಪಷ್ಟವಾಗಿದೆ. ಈ ಮಾತು ಬೆಲೆ ಏರಿಕೆಗೂ ಅನ್ವಯಿಸುತ್ತದೆ. ಬೆಲೆ ಏರಿಕೆಗೆ ಅನುಗುಣವಾಗಿ ಕೆಳ ಮಧ್ಯಮ ವರ್ಗದವರ ಖರೀದಿ ಶಕ್ತಿ ಹೆಚ್ಚಿಸಲು ಬೇಕಾದ ಆದಾಯ ಮೂಲಗಳು ಹೆಚ್ಚಾಗಲಿಲ್ಲ. ಇದು, ಬಹಳಷ್ಟು ಕುಟುಂಬಗಳಲ್ಲಿ ಸಿಟ್ಟು ಮತ್ತು ಅಸಮಾಧಾನ ಹೆಚ್ಚಿಸಿರುವ ಸಾಧ್ಯತೆ ಇದೆ.

ಇನ್ನು ಆರ್ಥಿಕವಾಗಿ ಹಿಂದುಳಿದ ಎಲ್ಲಾ ವರ್ಗದವರಿಗೆ, ತಮ್ಮ ದೈನಂದಿನ ಬದುಕಿನ ನಿರ್ವಹಣೆಗೆ ಪೂರಕವಾದ ವಿಚಾರಗಳಿಗೆ ಸರ್ಕಾರಗಳು ಹೇಗೆ ಸ್ಪಂದಿಸುತ್ತವೆ ಎನ್ನುವುದು ಮುಖ್ಯವಾಗುತ್ತದೆ. ಈ ದಿಸೆಯಲ್ಲಿ, ಇವರು ಸರ್ಕಾರಗಳಿಂದ ಹೆಚ್ಚಿನ ಧನಸಹಾಯವನ್ನು ನಿರೀಕ್ಷಿಸುತ್ತಾರೆ. ಅವರ ಮೊದಲ ಆದ್ಯತೆ ತಮ್ಮ ಕುಟುಂಬ 'ವಿಕಸಿತ' ಆಗುವುದು. ಅಂದರೆ, ದೇಶ ವಿಕಸಿತವಾಗುವಾಗ ತಮ್ಮ ಬದುಕು ಕೂಡ ಅದರೊಂದಿಗೆ ವಿಕಸಿತವಾಗಬೇಕು ಎನ್ನುವ ನಿಲುವು ಅವರದ್ದು. ತಮ್ಮ ಬದುಕಿನ ಸಹನೀಯ ಮುಂದುವರಿಕೆಗೆ ಅವರು ಸಾಮಾಜಿಕ ಭದ್ರತಾ ಯೋಜನೆಗಳನ್ನು ಬಯಸುತ್ತಾರೆ ಎನ್ನುವುದು ಈಗ ಸ್ಪಷ್ಟವಾಗಿದೆ.

ಇತಿಹಾಸವು ನಮ್ಮ ಭವಿಷ್ಯದ ದಾರಿಗೆ ದೀವಿಗೆ ಆಗಬೇಕೇ ವಿನಾ ಗಾಯಗಳನ್ನು ಕೆರೆದುಕೊಂಡು ದೇಹವನ್ನೆಲ್ಲಾ ಹುಣ್ಣಾಗಿಸುವುದಕ್ಕಲ್ಲ ಎನ್ನುವ ತತ್ವದ ಆಧಾರದಲ್ಲಿ ದೇಶವನ್ನು ಮುನ್ನಡೆಸುವುದು ಒಳ್ಳೆಯದು ಎನ್ನುವ ಸಂದೇಶವನ್ನು ಸಹ ಈ ಫಲಿತಾಂಶ ನೀಡಿದೆ ಎನ್ನಬಹುದು.

ಈ ಮಹಾಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷಗಳು ತಮ್ಮ ನೆಲೆಯನ್ನು ಮರಳಿ ಕಂಡುಕೊಂಡಿವೆ, ವಿರೋಧ ಪಕ್ಷಗಳು ತಮ್ಮ ಅಸ್ತಿತ್ವವನ್ನು ಸಾರಿವೆ. ಆರೋಗ್ಯಕರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಬಹಳ ಮುಖ್ಯ. ಯಾವುದೇ ಒಂದು ಪಕ್ಷ ಮಾತ್ರ ನಿರಂತರವಾಗಿ ಗೆಲ್ಲುತ್ತಿದ್ದರೆ ಮತ್ತು ವಿರೋಧ ಪಕ್ಷಗಳು ನೆಲ ಕಚ್ಚಿದರೆ, ಇದಕ್ಕೆ ಪ್ರಜಾಪ್ರಭುತ್ವವು ಹೆಚ್ಚಿನ ಬೆಲೆ ತೆರಬೇಕಾಗುತ್ತದೆ. ಹೀಗಾದಲ್ಲಿ, ದೇಶ ನಿಧಾನವಾಗಿ ನಿರಂಕುಶ ಪ್ರಭುತ್ವದತ್ತ ವಾಲುತ್ತದೆ.



ವಿಶೇಷವಾಗಿ, ಉತ್ತರಪ್ರದೇಶದ ಫಲಿತಾಂಶ ಹಲವು ನೆಲೆಗಳಲ್ಲಿ ಅಚ್ಚರಿ ಮೂಡಿಸಿರುವುದು ನಿಜ. ಅಲ್ಲಿನ ಸ್ಥಿತಿಯನ್ನು ಮತ್ತು ದೇಶದ ಒಟ್ಟಾರೆ ಮತದಾನ ಪ್ರವೃತ್ತಿಯನ್ನು ಯಾವ ಮತಗಟ್ಟೆ ಸಮೀಕ್ಷೆಯೂ ಯಾಕೆ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಲಿಲ್ಲ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅಗತ್ಯ. ಜನ ತಮ್ಮ ರಾಜಕೀಯ ಆಯ್ಕೆಯನ್ನು ಬಹಿರಂಗವಾಗಿ ಹಂಚಿಕೊಳ್ಳಲು ಹಿಂಜರಿದಿರಬಹುದು. ಅವ್ಯಕ್ತ ಭಯ ಮತ್ತು ಪ್ರಧಾನ ಮಾಧ್ಯಮಗಳು ಬಿಂಬಿಸುತ್ತಿದ್ದ ಜನಪ್ರಿಯ ವ್ಯಾಖ್ಯಾನಗಳು ಇದಕ್ಕೆ ಕಾರಣ ಆಗಿರಲೂಬಹುದು. ಆದರೆ, ಈ ಪ್ರಕ್ರಿಯೆಗೆ ವ್ಯತಿರಿಕ್ತವಾಗಿ, ಅಂದರೆ, ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಭಯಪಟ್ಟವರು, ಅವಕಾಶ ಸಿಗದವರು, ಅಂಚಿಗೆ ತಳ್ಳಲ್ಪಟ್ಟವರು ಹಿಂದಿನ ಎರಡು ತಿಂಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಮೂಲಕ ಅವರು ಒಂದು ಪರ್ಯಾಯ ಜನಾಭಿಪ್ರಾಯವನ್ನು ಮೂಡಿಸಿದ್ದಂತೂ ಹೌದು.

ಪ್ರಬಲ ವಿರೋಧ ಪಕ್ಷ ಮತ್ತು ಸರ್ಕಾರದ ಜನವಿರೋಧಿ ನೀತಿಗಳನ್ನು ಪ್ರಶ್ನಿಸುವ ನಾಗರಿಕ ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಎರಡು ಆಧಾರಸ್ತಂಭಗಳು. ಈಗ ಪ್ರಬಲ ವಿರೋಧ ಪಕ್ಷವಂತೂ ಇರಲಿದೆ. ಇದರಿಂದಾಗಿ, ಸರ್ಕಾರವು ಯಾವುದೇ ಅಸಾಂವಿಧಾನಿಕ ನಿರ್ಣಯವನ್ನು ಜನರ ಮೇಲೆ ಒತ್ತಾಯಪೂರ್ವಕವಾಗಿ ಹೇರಬಹುದು ಎನ್ನುವ ಆತಂಕ ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಿದೆ.

ತಮ್ಮ ವಿರುದ್ಧ ಧ್ವನಿ ಎತ್ತುವವರ ಬಗ್ಗೆ ಅಧಿಕಾರದಲ್ಲಿ ಇರುವವರಿಗೆ ಅಸಹನೆ ಇರುತ್ತದೆ. ಅಂಥವರನ್ನು ದಮನ ಮಾಡುವ ಪ್ರಯತ್ನಗಳು ನಡೆಯುತ್ತವೆ. ಅದಕ್ಕೆ ಪ್ರತಿರೋಧ ತೋರಲು ಚುನಾವಣೆಯೂ ಒಂದು ಅವಕಾಶವಾಗಿ ಒದಗಿಬರುತ್ತದೆ. ಸಣ್ಣಮಟ್ಟಿಗೆ ಅದಕ್ಕೂ ಈ ಚುನಾವಣೆ ಬಳಕೆಯಾಗಿದೆ. ಸಾಮಾನ್ಯವಾಗಿ ನಮ್ಮ ಚುನಾವಣಾ ಸಮೀಕ್ಷೆಗಳು, ಪ್ರಧಾನ ಮಾಧ್ಯಮಗಳು ಮತ್ತು ಹೆಚ್ಚಾಗಿ ನಗರಕೇಂದ್ರಿತವಾಗಿ ಕಾರ್ಯನಿರ್ವಹಿಸುವ ಸರ್ಕಾರಗಳು ಕೂಡ ಹಳ್ಳಿಗಳ ಸಮಸ್ಯೆ, ರೈತರ ಸಂಕಷ್ಟಗಳು, ವಿನಾಶದ ಅಂಚಿನಲ್ಲಿರುವ ಜೀವವೈವಿಧ್ಯ ಮತ್ತು ಅದರಿಂದ ಉದ್ಭವಿಸಿರುವ ಪ್ರಾಕೃತಿಕ ವಿಕೋಪಗಳಂತಹವನ್ನು ಸೂಕ್ಷ್ಮವಾಗಿ ಮತ್ತು ಕೂಲಂಕಷವಾಗಿ ಗ್ರಹಿಸುವಲ್ಲಿ ಸೋಲುತ್ತವೆ. ಜನರ ನಾಡಿಮಿಡಿತ ಎಟುಕದೇ ಇರುವುದಕ್ಕೆ ಇದೂ ಕಾರಣವಾಗಿರಬಹುದು.

ಒಟ್ಟಿನಲ್ಲಿ ಇದು ದೇಶದ ಬಹುತ್ವ, ಸಂವಿಧಾನ ರಕ್ಷಣೆಗೆ ಪೂರಕವಾದ, 'ಅಭಿವೃದ್ಧಿ'ಯ ವ್ಯಾಪ್ತಿಯಿಂದ ಹೊರಗೆ ಉಳಿದವರನ್ನು ಒಳಗೊಳ್ಳಬೇಕಾದ ಅನಿವಾರ್ಯವನ್ನು ಜಾಗೃತಗೊಳಿಸುವಂತಹ ಫಲಿತಾಂಶ. ಈ ಫಲಿತಾಂಶದ ಮೂಲಕ ಜನರ ನಾಡಿಮಿಡಿತವನ್ನು ಗ್ರಹಿಸಿ, ಎನ್‌ಡಿಎ ಮೈತ್ರಿಕೂಟವು ಅದರಂತೆ ಕಾರ್ಯ ನಿರ್ವಹಿಸಬೇಕಾಗಿದೆ. ರಾಷ್ಟ್ರೀಯ ಪಕ್ಷಗಳು ಎಷ್ಟೇ ಪ್ರಬಲವಾಗಿರಲಿ, ಅವು ಪ್ರಾದೇಶಿಕ ಪಕ್ಷಗಳನ್ನು ಒಳಗೊಂಡು ಕೆಲಸ ಮಾಡುವುದು ಒಕ್ಕೂಟ ವ್ಯವಸ್ಥೆಗೆ ಹಿತಕರ ಎಂಬ ಸಂದೇಶವೂ ಈ ಫಲಿತಾಂಶದಲ್ಲಿದೆ.

ಚುರುಮುರಿ



ಮ್ಯಾನ್ ಆಫ್ ದಿ ಮ್ಯಾಚ್

• ಸುಮಂಗಲಾ

ಬೆಕ್ಕಣ್ಣ ಘನಗಂಭೀರವಾಗಿ ಕೂತು ಚುನಾವಣಾ ಫಲಿತಾಂಶದ ವಿಶ್ಲೇಷಣೆಗಳ ಸುದ್ದಿಗಳನ್ನು ಓದುತ್ತಿತ್ತು.

'ಇಂಡಿಯಾ ಟೀಮ್ ಸೋತರೂ ರಾಹುಲಂಕಲ್ಲು ಭರ್ಜರಿ ರನ್ ಗಳಿಸ್ಯಾನೆ. ಹಿಂಗಾಗಿ ರಾಹುಲಂಕಲ್ಲನೇ ಮ್ಯಾನ್ ಆಫ್ ದಿ ಮ್ಯಾಚ್ ಅಂತ ತರೂರು ಮಾಮ ಹೊಗಳ್ಯಾನೆ. ಏನಂತೀಯಾ?' ಬೆಕ್ಕಣ್ಣ ಕೂರಂಬು ಎಸೆಯಿತು.

'ಹಂಗ ನೋಡಿದರೆ ಚಂದ್ರಬಾಬು ನಾಯ್ಡು ಮ್ಯಾನ್ ಆಫ್ ದಿ ಮ್ಯಾಚ್... ಎಷ್ಟೆಲ್ಲ ಷಡ್ಯಂತ್ರ ಮಾಡಿ ಜೈಲಿಗೆ ಕಳಿಸಿದ್ದರು, ನೋಡೀಗ... ಹಂಗ ಭರ್ಜರಿಯಾಗಿ ಗೆದ್ದು, ಎನ್‌ಡಿಎಗೆ ಮೂಗುದಾರ ಹಾಕ್ಯಾನೆ' ಎಂದೆ.

'ಹಿಂದೆ ವಾಜಪೇಯಿ ನೇತೃತ್ವದ ಸರ್ಕಾರದ ಟೈಮ್‌ನಾಗೆ ಮೂಗುದಾರ ಹಿಡದು ಅವಂಗೆ ಅನುಭವಾ ಐತಿ ಅಂತ ಮೋದಿಮಾಮನೇ ಈಸಲನೂ ಅಂವನ ಕೈಯಾಗೆ ಮೂಗುದಾರ ಕೊಟ್ಟಾರೇಳು. ಅಂವಾ ಒಂಥರಾ ಕಿಂಗ್‌ಮೇಕರ್' ಎಂದಿತು.

'ಅಂವಾ ಒಬ್ಬನೇ ಕಿಂಗ್‌ಮೇಕರ್ ಅಲ್ಲ, ನಾನೂ ಕಿಂಗ್‌ಮೇಕರ್ ಅದೀನಿ ಅಂತ ನಿತೀಶಂಕಲ್ಲು ಗುರಗುಡತಾನೆ' ಎಂದೆ.

'ಹೌದು... ನಮ್ ಮೋದಿಮಾಮನ ಮೂರನೇ ಸಲ ಕಿಂಗ್ ಮಾಡಕೆ ಇಬ್ಬರು ಮೇಕರ್ ಬೇಕಾಗತಾರೆ! ಅಂದಂಗ ನಮ್ ಕಂಗನಾಕ್ಕ ಖರೇ ಅಂದ್ರ ಕ್ವೀನ್ ಆಫ್ ದಿ ಮ್ಯಾಚ್, ಹೌದಿಲ್ಲೋ?'

'ನನ್ನ ಪ್ರಕಾರ ಕ್ವೀನ್ ಆಫ್ ದಿ ಮ್ಯಾಚ್ ಮಹುವಾ ಮೊಯಿತ್ರಾ. ಸಂಸತ್ತಿನಿಂದ ಹೊರಗೆ ಹಾಕಿದ್ರೂ, ಹೆಂಗೆ ಗೆದ್ದು ಬಂದಾಳೆ ನೋಡು'.

'ಏನಾದರೇನು, ವಿರೋಧಪಕ್ಷದ ಗ್ಯಾಲರಿವಳಗೇ ಕೂಡಬೇಕಲ್ಲ!'

'ಮತ್ತ ಕುಮಾರಣ್ಣನ ಮರತೇಬಿಟ್ಟೀಯಲ್ಲ! ಬಂಡೆನೇ ಅಲ್ಲಾಡಿಸಿದ ಅಂವನೂ ಮ್ಯಾನ್ ಆಫ್ ದಿ ಮ್ಯಾಚ್' ಎಂದೆ.

'ಖರೇ ಅಂದರೆ ಗೆಲ್ಲುತೀವಂತ ಭಯಂಕರವಾಗಿ ಮೆರೀತಿದ್ದವರನ್ನೆಲ್ಲ ಕೆಳಗೆ ಎತ್ತಾಕಿದ ಮತದಾರಪ್ರಭುಗಳು ಮ್ಯಾನ್ ಆಫ್ ದಿ ಮ್ಯಾಚ್! ನಮ್ ಮೋದಿಮಾಮ ಎಂದಿನಂತೆ ಕಿಂಗ್ ಆಫ್ ದಿ ಆಲ್ ಮ್ಯಾಚಸ್! ಕಿಂಗ್‌ಮೇಕರ್ ತಂಡದವರಿಗೆ ಯಾವ್ಯಾವ ಖಾತೆ ಕೊಡಬಕು ಎನ್ನೋದಷ್ಟೇ ಕಿಂಗ್ ಚಿಂತೆ' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ದಿನದ ಟ್ವೀಟ್


ನೆನಪಾಗುವುದು ಏನೆಂದರೆ...



**ಟಿ-20 ವಿಶ್ವಕಪ್‌ನಲ್ಲಿ ಭಾರತ– ಪಾಕ್ ಪಂದ್ಯ ನಡೆದಾಗಲೆಲ್ಲ ನೆನಪಾಗುವುದು 2007ರ ಟಿ-20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ಗೆದ್ದ ಆ ಕ್ಷಣ.
ಯಾರೂ ಇಲ್ಲದ ಜಾಗವೆಂದು ಮಿಸ್ಬಾ ಚೆಂಡು ಹೊಡೆದ, ಮಲಯಾಳಿ ಭಾಷಿಕರು ಇಲ್ಲದ ಜಾಗ ಉಂಟೆ, ಶ್ರೀಶಾಂತ್ ಚೆಂಡು ಹಿಡಿದ!**

ಎಚ್.ಡುಂಡಿರಾಜ್, ಕವಿ

ಕಿಡಿನುಡಿ



ನಿರ್ಮಲಾ ಸೀತಾರಾಮನ್ ಒಬ್ಬ ಅದ್ಭುತ ಹಣಕಾಸು ಸಚಿವೆ, ಕೋವಿಡ್ ಸಂದರ್ಭವನ್ನು ಅವರು ನಿರ್ವಹಿಸಿದ ರೀತಿ ಶ್ಲಾಘನೀಯ, ಭಾರತದ ಆರ್ಥಿಕತೆಯ ಗಾತ್ರವನ್ನು 4 ಟ್ರಿಲಿಯನ್ ಡಾಲರ್‌ಗೆ ಕೊಂಡೊಯ್ಯುವಲ್ಲಿ ಅವರು ವಹಿಸಿದ ಪಾತ್ರ ನಿರ್ಣಾಯಕ ಎಂದೆಲ್ಲಾ ಐ.ಟಿ. ಸೆಲ್ ಈಗ ಹೇಳುತ್ತಿದೆ. ಅಷ್ಟಾದರೂ ಮಧ್ಯಮ ವರ್ಗಕ್ಕೆ ಅವರು ಮಾಡಿದ್ದೇನು ಎಂಬ ನಮ್ಮ ಪ್ರಶ್ನೆ ಮಾತ್ರ ಉತ್ತರವಿಲ್ಲದೆ ಹಾಗೇ ಉಳಿಯುತ್ತದೆ.

ಕಿರಣ್ ರಜಪೂತ್

25 ವರ್ಷಗಳ ಹಿಂದೆ

ಗುರುವಾರ, 10-6-1999

• **ಹಿಮ್ಮೆಟ್ಟಲು ಪಾಕ್‌ಗೆ ಅಮೆರಿಕ ಸೂಚನೆ**

ವಾಷಿಂಗ್ಟನ್, ಜೂನ್ 9 (ಯುಎನ್‌ಐ, ಪಿಟಿಐ)– ಕಾಶ್ಮೀರ ಗಡಿಯ ನಿಯಂತ್ರಣ ರೇಖೆ ಉಲ್ಲಂಘಿಸಿರುವ ಪಾಕಿಸ್ತಾನಿ ಪಡೆಗಳು 'ತಮ್ಮ ಮೊದಲಿನ ಸ್ಥಾನಕ್ಕೆ ಹಿಂದಿರುಗಲೇಬೇಕು' ಎಂದು ಅಮೆರಿಕ ಇಂದು ಹೇಳಿಕೆ ನೀಡಿದೆ. ಇದರಿಂದಾಗಿ ಪಾಕಿಸ್ತಾನಕ್ಕೆ ಮುಖಭಂಗ ಆದಂತಾಗಿದೆ. ಈ ಮಧ್ಯೆ, ಕಾರ್ಗಿಲ್ ವಲಯದಲ್ಲಿ ನುಸುಳಿ ಬಂದಿರುವ ಅತಿಕ್ರಮಣಕಾರರ ವಿರುದ್ಧ ಭಾರತದ ಕಾರ್ಯಾಚರಣೆ ಮುಂದುವರಿದಿದ್ದು, ಇಂದು ಪಾಕಿಸ್ತಾನದ ಐವರು ಸೈನಿಕರು ಸತ್ತಿದ್ದಾರೆ.

• **ಒಳಜಗಳಕ್ಕೆ ತೆರೆ ಎಳೆಯಲು ಗೌಡರ ಕರೆ**

ಬೆಂಗಳೂರು, ಜೂನ್ 9– 'ಮುಂದಿನ ಚುನಾವಣೆ ದೃಷ್ಟಿಯಿಂದ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಿ; ಒಳಜಗಳಗಳಿಗೆ ಅಂತಿಮ ತೆರೆ ಎಳೆಯಿರಿ' ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಪಕ್ಷದ ಮುಖಂಡರಿಗೆ ಕಿವಿಮಾತು ಹೇಳಿದ್ದಾರೆ.

ಪಕ್ಷದಲ್ಲಿನ ಮುಖಂಡರು ಮತ್ತು ಪ್ರಮುಖರು ಭಿನ್ನಾಭಿಪ್ರಾಯ ತೊರೆದು ಒಗ್ಗಟ್ಟಿನಿಂದ ಚುನಾವಣೆ ಎದುರಿಸಲು ಉತ್ತಮ ವಾತಾವರಣ ಕಲ್ಪಿಸುವ ಪ್ರಯತ್ನ ನಡೆದಿದೆ. ಪರಿಸ್ಥಿತಿ ಹೀಗಿರುವಾಗ ಕೆಲವರು ಪುನಃ ಗುಂಪುಗಾರಿಕೆಯಲ್ಲಿ ತೊಡಗಿ, ಪತ್ರಿಕೆಗಳಿಗೆ ಹೇಳಿಕೆಗಳನ್ನು ನೀಡುತ್ತಿರುವುದು ಸರಿಯಲ್ಲ. ಇಂಥವುಗಳಿಗೆ ಅಂತಿಮ ತೆರೆ ಎಳೆಯಬೇಕು ಎಂದು ದೇವೇಗೌಡರು ತಿಳಿಸಿದರು ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 10-6-1974

• **ಹರಿಯಾಣ ಡಿಐಜಿ ಕೊಲೆಗೆ ಹಿಂದಿ ಚಿತ್ರದ ಪ್ರೇರಣೆ**

ಚಂಡೀಗಢ, ಜೂನ್ 9– ಅಪರಾಧಾತ್ಮಕ ಚಿತ್ರಗಳು ಕೊಲೆ ನಡೆಸಲು ಅಪ್ರಬುದ್ಧ ಮನಸ್ಸುಗಳನ್ನು ಪ್ರೇರೇಪಿಸಬಹುದೇ?

ಜೂನ್ ನಾಲ್ಕರಂದು ತಮ್ಮ ನಿವಾಸದಲ್ಲಿ ಮರಣಕ್ಕೀಡಾದ ಹರಿಯಾಣ ಜೈಲುಗಳ ಡಿ.ಐ.ಜಿ. ಈಶ್ವರಸಿಂಗ್ ಕದನ್ ಅವರ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ವಿಶ್ಲೇಷಿಸಿದರೆ ಇದು ಸತ್ಯವೇನೋ ಅನ್ನಿಸದಿರದು.

ಅವರ ಮನೆ ಸೇವಕ, ಹತ್ತೊಂಬತ್ತು ವರ್ಷದ ಲೀಲಾರಾಮ್ ಕುಚ್‌ನನ್ನು ಪ್ರಶ್ನಿಸಿದಾಗ ಹೊರಬಂದ ಸಂಗತಿಗಳಲ್ಲಿ ಈ ಅಂಶ ಸಾಬೀತಾಗಿದೆ. ಅಪರಾಧವನ್ನು ತೋರುವ ಹಿಂದಿ ಚಿತ್ರವೊಂದರಿಂದ ತನಗೆ ಈ ಕೊಲೆಗೆ ಪ್ರೇರಣೆ ದೊರೆಯಿತೆಂದು ಆತ ಒಪ್ಪಿಕೊಂಡಿದ್ದಾನೆ.

• **ಪರ್ವತಾರೋಹಿಗಳ ಕಣ್ಮರೆ: ತನಿಖಾ ಆಯೋಗ ನೇಮಕ**

ನವದೆಹಲಿ, ಜೂನ್ 9– ಭಾರತ-ನ್ಯೂಜಿಲೆಂಡ್ ಮಹಿಳಾ ಪರ್ವತಾರೋಹಿಗಳ ತಂಡಕ್ಕೆ ಸೇರಿದ 4 ಮಂದಿ ಕಣ್ಮರೆಯಾಗಿರುವುದಕ್ಕೆ ಕಾರಣವಾದಂಥ ಸಂದರ್ಭಗಳ ಬಗ್ಗೆ ತನಿಖೆ ನಡೆಸಲು ಆಯೋಗವೊಂದನ್ನು ನೇಮಿಸಿರುವುದಾಗಿ ಭಾರತೀಯ ಪರ್ವತಾರೋಹಿ ಪ್ರತಿಷ್ಠಾನ ಇಂದು ಪ್ರಕಟಿಸಿದೆ.

ಈ ಪ್ರತಿಷ್ಠಾನದ ಮಾಜಿ ಅಧ್ಯಕ್ಷರೂ ಕೇಂದ್ರ ಸಚಿವ ಸಂಪುಟದ ಮಾಜಿ ಕಾರ್ಯದರ್ಶಿಯೂ ಆದ ಎಸ್.ಎಸ್. ಖೇರಾ ಅವರು ತನಿಖಾ ಆಯೋಗದ ಅಧ್ಯಕ್ಷರು.

ಸಂಗತ

ಆಸಕ್ತಿ ಕಳೆಯುವ ನಕಾರಾತ್ಮಕ ನಡೆ

ಯುವಕರು ದುಡಿಮೆಯ ಹುಮ್ಮಸ್ಸು ಕಳೆದುಕೊಳ್ಳುವುದು ಅಪಾಯಕಾರಿ ಬೆಳವಣಿಗೆ

• ಮಲ್ಲಿಕಾರ್ಜುನ ಹೆಗ್ಗಳಗಿ

'ಹೋಳಿಗೆ' ಎಂಬುದು ಸಾಹಿತಿ ಬಸವರಾಜ ಕಟ್ಟೀಮನಿ ಅವರ ಪ್ರಸಿದ್ಧ ಕಥೆ. ಸಮಾರಂಭಕ್ಕೆ ಆಗಮಿಸಿದ ಅತಿಥಿಗಳ ಊಟಕ್ಕೆ ಹೋಳಿಗೆ ಮಾಡಲು ಬಂದ ಕೂಲಿಕಾರ್ಮಿಕ ಮಹಿಳೆಯ ಜೊತೆಗೆ ಆಕೆಯ ಕಿರಿಯ ಮಗನೂ ಬಂದಿರುತ್ತಾನೆ. ಬುಟ್ಟಿ ತುಂಬಾ ಹೋಳಿಗೆಗಳು ಸಿದ್ಧವಾಗುತ್ತವೆ. ಆಕೆಯ ಮಗ ಒಂದು ಹೋಳಿಗೆ ಎತ್ತಿಕೊಳ್ಳುತ್ತಾನೆ. ಇದನ್ನು ಗಮನಿಸಿದ ಒಡೆಯ ಧಾವಿಸಿ ಬಂದು ಬಾಲಕನನ್ನು ಥಳಿಸುತ್ತಾನೆ. ಮಗನ ಆಕ್ರಂದನಕ್ಕೆ ತಾಯಿಯ ಕಣ್ಣೀರ ಹನಿಗಳು ಹೋಳಿಗೆಯ ಹೂರಣದಲ್ಲಿ ಬೀಳುತ್ತವೆ. ಅತಿಥಿಗಳು ಊಟ ಸವಿಯುತ್ತಾರೆ. ಅವರಿಗೆ ಮಹಿಳೆಯ ದುಃಖ ದುಮ್ಮಾನ ಕಾಣುವುದೇ ಇಲ್ಲ.

ಲಖನೌನ ಚಂದೋಯಿಯ ಖೇಡಾ ಗ್ರಾಮದಲ್ಲಿ ಇರುವ ಕಲ್ಲುಗಣಿಯಲ್ಲಿ ಮಧ್ಯಾಹ್ನದ ಊಟದ ಬಳಿಕ ಮಲಗಿ ವಿರಮಿಸುತ್ತಿದ್ದ ದಲಿತ ದಿನಗೂಲಿ ಕಾರ್ಮಿಕ ರಾಜಕುಮಾರ್ ರಾವತ್ ಅವರನ್ನು ಎಚ್ಚರಗೊಳಿಸಲು ಗಣಿ ಮಾಲೀಕ ಆತನ ಮುಖದ ಮೇಲೆ ಮೂತ್ರ ವಿಸರ್ಜನೆ ಮಾಡಿ, ಆ ಕೃತ್ಯವನ್ನು ಸ್ವತಃ ಚಿತ್ರೀಕರಿಸಿ ಜಾಲತಾಣದಲ್ಲಿ ಪೋಸ್ಟ್ ಮಾಡಿ ಅಟ್ಟಹಾಸ ಮೆರೆದ ವರದಿ (ಪ್ರ.ವಾ., ಜೂನ್ 4) ಓದಿದಾಗ, ಹೃದಯ ಕಲಕುವ ಹೋಳಿಗೆ ಕಥೆ ನೆನಪಾಯಿತು.

ಮನೆ, ಮಹಲು ಕಟ್ಟುವವರು, ಹೆದ್ದಾರಿ ನಿರ್ಮಾಣ, ವಿದ್ಯುತ್ ಕಂಬಗಳನ್ನು ನೆಡುವುದು, ನಳ ಜೋಡಿಸುವುದು, ಬೀದಿ ಕಸ ಗುಡಿಸುವುದು, ವಾಹನ ರಿಪೇರಿ ಮಾಡುವಂತಹವರೆಲ್ಲ ಕಾರ್ಮಿಕರು. ಸಂಪತ್ತು ಸೃಷ್ಟಿಸುವವರು ಮತ್ತು ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತವರೂ ಅವರೇ. ಆದರೆ ದುಡಿಸಿಕೊಳ್ಳುವವರಿಗೆ ಕಾರ್ಮಿಕರ ಬಗ್ಗೆ ಪ್ರೀತಿ, ಗೌರವ, ಕಾಳಜಿ ಇಲ್ಲದಿರುವುದು ನೋವಿನ ಸಂಗತಿ.

ಜನಪರ ಚಳವಳಿಗಳು, ಪ್ರತಿಭಟನೆಗಳು ದುರ್ಬಲವಾದ ಕಾಲದಲ್ಲಿ ತೀವ್ರ ಅಪಮಾನದ ಹಿಂಸೆಗಳು ಚಾಲ್ತಿಗೆ ಬರುತ್ತವೆ ಎನ್ನುವ ಮಾತೊಂದಿದೆ. ಪ್ರತಿಭಟನೆಯು ಆರೋಗ್ಯಪೂರ್ಣ ಸಮಾಜದ ಲಕ್ಷಣ. 'ನಾನು ಪ್ರತಿಭಟಿಸುತ್ತೇನೆ, ಆದ್ದರಿಂದ ನಾವೆಲ್ಲ ಇದ್ದೇವೆ' ಎಂದು ಚಿಂತಕ ಆಲ್ಬರ್ಟ್ ಕಮೂ ಹೇಳುತ್ತಾರೆ. ದುಡಿಯುವ ವರ್ಗ ಸಂಘಟಿತವಾಗಿ, ಗಟ್ಟಿ ಧ್ವನಿಯಾಗಿ ನಿಂತಾಗ ಮಾತ್ರ ಶೋಷಣೆಗೆ ಕಡಿವಾಣ ಬೀಳುತ್ತದೆ.

ಕಲೆ, ಸಾಹಿತ್ಯ, ನಾಟಕಗಳ ಮೂಲಕ ನಡೆಯುವ ಪ್ರತಿರೋಧ ಬಹಳ ಶಕ್ತಿಶಾಲಿಯಾಗಿರುತ್ತದೆ. ಕಲೆ ಸದಾ ಪ್ರತಿಪಕ್ಷದಂತೆ ಕೆಲಸ ಮಾಡುತ್ತದೆ. 'ಕವಿಗೆ ಅರಸು ಗಿರಿಸುಗಳ ಹಂಗಿಲ್ಲ ಅವನು ಅಗ್ನಿಮುಖಿ' ಎಂದು ಕುವೆಂಪು ಹಾಡಿದ್ದು ಇದೇ ಕಾರಣಕ್ಕೆ. 'ಶೋಷಕರು ಬರುತ್ತಲೇ ಇರುತ್ತಾರೆ, ಅವರನ್ನು ಓಡಿಸುತ್ತಲೇ ಇರಬೇಕು. ಪ್ರತಿಭಟನೆ ಕೂಡ ನಿರಂತರ ಕ್ರಿಯೆ ಆಗಿರಬೇಕು. ಅಹಿಂಸಾತ್ಮಕ ಹೋರಾಟಗಳು ಹೆಚ್ಚು ಶಕ್ತಿಶಾಲಿ ಆಗಿರುತ್ತವೆ' ಎಂದು ಕಾದಂಬರಿಕಾರ ರಾವಬಹಾದ್ದೂರ ಹೇಳುತ್ತಿದ್ದರು.

ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ಪರಿಚಿತ ಯುವಕ ಈಗ ನಿರುದ್ಯೋಗಿಯಾಗಿದ್ದಾನೆ. ವಿಚಾರಿಸಿದಾಗ 'ಮಾಲೀಕರು ಒದೆಯುವುದು, ಬೈಯುವುದು ಮಾಡುತ್ತಾರೆ. ಕೆಲಸಕ್ಕೆ ಹೋಗುವುದಕ್ಕೆ ಮನಸ್ಸಾಗುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ. ಕೆಲಸದ ಸ್ಥಳದಲ್ಲಿ ಪ್ರೀತಿ, ನೆಮ್ಮದಿ ಇಲ್ಲದಿದ್ದರೆ ಕಾರ್ಮಿಕರು ದುಡಿಯುವ ಮನೋಭಾವವನ್ನು ಕಳೆದುಕೊಳ್ಳುತ್ತಾರೆ.

ದೇಶದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಶೇ 70ರಷ್ಟು ಮಂದಿ ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಹೋಟೆಲ್, ಗ್ಯಾರೇಜ್, ಸಣ್ಣ ಕೈಗಾರಿಕೆಗಳು, ವ್ಯಾಪಾರಿ ಮಳಿಗೆಗಳು, ಖಾಸಗಿ ಮತ್ತು ಸಹಕಾರಿ ಸಂಸ್ಥೆಗಳು, ಗಣಿ, ರಸ್ತೆ ನಿರ್ಮಾಣದಂತಹ ವಲಯಗಳಲ್ಲಿರುವ ಕಾರ್ಮಿಕರು ಸಂಘಟಿತರಾಗಿಲ್ಲ. ಇದು ಶೋಷಣೆ, ದಬ್ಬಾಳಿಕೆಗೆ ಪ್ರಮುಖ ಕಾರಣವಾಗಿದೆ. ವಲಸೆ ಕಾರ್ಮಿಕರ ರಕ್ಷಣೆಗೆ ಬಹಳಷ್ಟು ಕಾನೂನುಗಳಿವೆ. ಇವರೂ ಅಸಂಘಟಿತರಾಗಿರುವುದರಿಂದ ಕಾನೂನಿನ ಪಾಲನೆ ಸಮರ್ಪಕವಾಗಿ ಆಗುತ್ತಿಲ್ಲ. ಕೊರೊನಾ ಉಲ್ಬಣಿಸಿದ ಸಂದರ್ಭದಲ್ಲಿ ವಲಸೆ ಕಾರ್ಮಿಕರು ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ.

ಜೀತಪದ್ಧತಿಯನ್ನು ಕೇಂದ್ರ ಸರ್ಕಾರವು 1976ರಷ್ಟು ಹಿಂದೆಯೇ ನಿಷೇಧಿಸಿದೆ. ಇದನ್ನು ಒಂದು ಅಪರಾಧ ಎಂದು ಪರಿಗಣಿಸಲಾಗುತ್ತದೆ. ಆದರೂ ಗಣಿಗಾರಿಕೆ ಪ್ರದೇಶಗಳಲ್ಲಿ ಜೀತದ ದುಡಿಮೆ ಈಗಲೂ ಜೀವಂತವಾಗಿರುವುದು ಕಂಡುಬರುತ್ತದೆ. ಮಾನವ ಕಳ್ಳಸಾಗಾಣಿಕೆಯ ಮೂಲಕವೂ ಜೀತಕ್ಕೆ ದೂಡಲಾಗುತ್ತದೆ. ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ಗಣಿ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಬಂಧನದಲ್ಲಿದ್ದು ಕೆಲಸ ಮಾಡುತ್ತಿದ್ದ 235 ಕಾರ್ಮಿಕರನ್ನು ಮುಕ್ತಗೊಳಿಸಲಾಗಿದೆ ಎಂದು ಸರ್ಕಾರಿ ವರದಿ ಹೇಳಿದೆ.



ಹಿಂಸೆ, ಅಪಮಾನ, ಸಂಬಳ ಕಡಿತ, ದಿನವಿಡೀ ದುಡಿಮೆ, ಕಾನೂನುಗಳನ್ನು ಪಾಲಿಸದೇ ಇರುವ ನಕಾರಾತ್ಮಕ ನಡೆಗಳು ಕಾರ್ಮಿಕರ ದುಡಿಯುವ ಮನೋಭಾವವನ್ನು ಕುಗ್ಗಿಸುತ್ತವೆ. ಅವರು ಕೆಲಸದ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳುವಂತೆ ಮಾಡುತ್ತವೆ. ಇದರಿಂದ ಆರ್ಥಿಕ, ಸಾಮಾಜಿಕ ಪ್ರಗತಿಗೆ ಹಿನ್ನಡೆ ಆಗುತ್ತಿದೆ ಮಾತ್ರವಲ್ಲ ಯುವಕರು ದುಡಿಮೆಯ ಹುಮ್ಮಸ್ಸು ಕಳೆದುಕೊಳ್ಳುವುದು ಅಪಾಯಕಾರಿ ಬೆಳವಣಿಗೆ ಆಗಿದೆ.

ಶೋಷಣೆಯಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗುತ್ತದೆ. ಗಾಂಧೀಜಿ ತುಂಡು ಪಂಚೆ ಉಟ್ಟುಕೊಂಡು, ಬ್ರಿಟನ್ ಅರಮನೆಯಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಮೈತುಂಬ ಎರಡೆರಡು ಬಟ್ಟೆ ಧರಿಸಿಕೊಂಡು ನಿಂತಿದ್ದ ಇಂಗ್ಲೆಂಡಿನ ದೊರೆಯು ಗಾಂಧಿಯವರನ್ನು ಕೆಣಕಲು 'ಮಿಸ್ಟರ್ ಗಾಂಧಿ, ನೀವು ಅರೆಬೆತ್ತಲೆ ಏಕೆ?' ಎಂದು ಪ್ರಶ್ನಿಸುತ್ತಾರೆ. 'ದೊರೆಯೇ, ನನ್ನ ಪಾಲಿನ ಬಟ್ಟೆಯನ್ನೂ ನೀವು ಧರಿಸಿದ್ದೀರಿ' ಎಂದು ಗಾಂಧೀಜಿ ಮಾರ್ಮಿಕವಾಗಿ ಉತ್ತರಿಸುತ್ತಾರೆ. ಅವರ ಚುಟುಕು ಉತ್ತರದಲ್ಲಿ ಬಡತನಕ್ಕೆ ಶೋಷಣೆಯೇ ಕಾರಣ ಎಂಬ ಧ್ವನಿ ಕೇಳಿಸುತ್ತದೆ. ಅದು ಗಾಂಧೀಜಿ ಪ್ರತಿಭಟನೆಯ ಧ್ವನಿ!

ವಾಚಕರ ವಾಣಿ

ಮಂಗಗಳ ಹತ್ಯೆ ಹೇಯ ಕೃತ್ಯ

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಸಮೀಪದಲ್ಲಿ ನಡೆದಿರುವ 30 ಮಂಗಗಳ ಹತ್ಯೆ ಸುದ್ದಿ ಕೇಳಿ ಆಘಾತವಾಯಿತು. ಒಂದೆಡೆ, ಮಂಗನ ಕಾಯಿಲೆ ಭೀತಿ ಮಲೆನಾಡಿನ ಜನರಲ್ಲಿದ್ದರೆ, ಮತ್ತೊಂದೆಡೆ, ಮಂಗಗಳಿಗೆ ವಿಷಪ್ರಾಶನ ಮಾಡಿಸಿ, ದೊಣ್ಣೆಯಿಂದ ಹೊಡೆದು ಸಾಯಿಸಿರಬಹುದಾದ ಸಾಧ್ಯತೆಯು ವಿಕೃತ ಮನಃಸ್ಥಿತಿಯ ದ್ಯೋತಕವೇ ಆಗಿದೆ. ಮಲೆನಾಡು ಹೇಳಿ ಕೇಳಿ ತೋಟ, ಗದ್ದೆಗಳಿರುವ ಪ್ರದೇಶ. ಇಲ್ಲಿ ವನ್ಯಜೀವಿಗಳ ಉಪಟಳ ಸಾಮಾನ್ಯ. ಹಾಗಾಗಿ, ಪ್ರಾಣಿಗಳನ್ನು ಹೆದರಿಸಲು ಪಟಾಕಿ ಸಿಡಿಸುವುದನ್ನೋ ಸದ್ದುಗದ್ದಲ ಮಾಡುವುದನ್ನೋ ಕೇಳಿರುತ್ತೇವೆ. ಆದರೆ ವಿಷ ಹಾಕಿ, ಹೊಡೆದು ಸಾಯಿಸುವುದು ಎಷ್ಟು ಸರಿ?

ಹುಲಿ ಉಗುರಿನ ವಿಷಯದಲ್ಲಿ ಇತ್ತೀಚೆಗೆ ಅಧಿಕಾರಿಗಳು ಮತ್ತು ಜನ ಉತ್ತಮವಾಗಿ ಸ್ಪಂದಿಸಿದ್ದು ನಮ್ಮ ಕಣ್ಣ ಮುಂದಿದೆ. ವನ್ಯಜೀವಿಗಳ ಪಳೆಯುಳಿಕೆಯನ್ನು ಸಂಗ್ರಹಿಸುವುದು ಅಪರಾಧ ಎಂಬ ತಿಳಿವಳಿಕೆ ಜನರಿಗೆ ಬಂದಿದೆ. ಅದೇ ರೀತಿ ಈ ಪ್ರಕರಣವನ್ನು ಸಹ ಅಷ್ಟೇ ಸೂಕ್ತವಾಗಿ ಪರಿಗಣನೆಗೆ ತೆಗೆದುಕೊಂಡು ಕಠಿಣ ಕ್ರಮ ಕೈಗೊಂಡರೆ ಪ್ರಾಣಿಗಳ ಮಾರಣಹೋಮ ತಪ್ಪುತ್ತದೆ.

ಉಮರ್ ಫಾರುಕ್, ಕೊಪ್ಪ

ಮತದಾರರ ದೂಷಣೆ ಸಭ್ಯ ನಡೆಯಲ್ಲ

'ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಬರೀ 9 ಕ್ಷೇತ್ರಗಳಲ್ಲಿ ಜಯ ಸಾಧಿಸಿರುವುದು, ಜನರಿಗೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಉಚಿತ ಯೋಜನೆಗಳು ಇಷ್ಟವಾಗಿಲ್ಲ ಎನ್ನುವುದನ್ನು ತೋರಿಸುತ್ತದೆ. ಹೀಗಾಗಿ, ಈ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದೇ ಒಳ್ಳೆಯದು' ಎಂದು ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರು ಮತದಾರರ ವಿರುದ್ಧ ಕಿಡಿಕಾರಿರುವುದಾಗಿ ವರದಿಯಾಗಿದೆ. ಸಿದ್ದರಾಮಯ್ಯ ಅವರಿಗೆ ಎಷ್ಟು ಬಾರಿ ಅಪಮಾನ ಮಾಡುತ್ತೀರಿ ಎಂದು ಸಹ ಅವರು ತಮ್ಮ ಸೋಲಿನ ಹಿನ್ನೆಲೆಯಲ್ಲಿ ಮತದಾರರನ್ನು ಪ್ರಶ್ನಿಸಿದ್ದಾರೆ.

ಚುನಾವಣೆಯಲ್ಲಿ ಸೋಲು ಗೆಲುವನ್ನು ಸಹಜವಾಗಿ, ಕ್ರೀಡಾ ಸ್ಫೂರ್ತಿಯಿಂದ ಸ್ವೀಕರಿಸಬೇಕು. ಸೋತ ಕಾರಣಕ್ಕೆ ಮತದಾರರಿಗೆ ಬಾಯಿಗೆ ಬಂದಂತೆ ಅನ್ನುವುದು ಸಭ್ಯ ರಾಜಕಾರಣಿಯ ಲಕ್ಷಣವಲ್ಲ. ಲಕ್ಷ್ಮಣ್ ಅವರ ಉದ್ಧಟತನದ ಹೇಳಿಕೆ ಖಂಡನೀಯ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಜನರ ಹಕ್ಕಿನ ಆಯ್ಕೆ ಗೌರವಿಸಿ

ಅಯೋಧ್ಯೆಯನ್ನು ಒಳಗೊಂಡ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸೋತಿರುವುದರಿಂದ ಅಲ್ಲಿನ ಮತದಾರರ ಮೇಲೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿರುವ ಆಕ್ರೋಶ ಸರಿಯಲ್ಲ ಎಂಬ ಸುರೇಂದ್ರ ಪೈ ಅವರ ವಾದ (ವಾ.ವಾ., ಜೂನ್ 9) ಸೂಕ್ತವಾಗಿದೆ. ತಮಿಳುನಾಡಿನಲ್ಲಿ ಅಣ್ಣಾಮಲೈ ಅವರ ಸೋಲಿಗೂ ಇಂತಹುದೇ ಟೀಕೆಗಳು ಕೇಳಿಬರುತ್ತಿರುವುದು ಸರಿಯಲ್ಲ. ಆ ಕ್ಷೇತ್ರದ ಜನರು ಪ್ರಜಾಪ್ರಭುತ್ವದ ಅಡಿಯಲ್ಲಿ ತಮ್ಮ ಸಿದ್ಧಾಂತಕ್ಕೆ ಒಪ್ಪಿಗೆಯಾಗುವಂತಹ ಜನನಾಯಕನನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಹೀಗಿರುವಾಗ, ಅಣ್ಣಾಮಲೈ ಅವರ ಸೋಲಿನ ಕಾರಣದಿಂದ ಮತದಾರರನ್ನು ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ದೂಷಿಸುತ್ತಿರುವುದು, ಅದಕ್ಕೆ ಧಾರ್ಮಿಕತೆಯ ಬಣ್ಣ ಬಳಿಯುತ್ತಿರುವುದು ಮಿತಿಮೀರಿದ ನಡೆಯಾಗಿದೆ.

ಆಯಾ ಕ್ಷೇತ್ರದ ಜನರಿಗೆ ತಮಗೆ ಬೇಕಾದ ನಾಯಕನನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಇರುತ್ತದೆ. ಅದನ್ನು ಟೀಕಿಸುವುದು ತರವಲ್ಲ. ಯಾವುದೇ ಚುನಾವಣೆಯಿರಲಿ, ಸಂವಿಧಾನದ ಅಡಿಯಲ್ಲಿ ಜನರ ಹಕ್ಕಿನ ಆಯ್ಕೆಗೆ ನಮ್ಮ ಸಮ್ಮತಿ ಇರಬೇಕು. ಅಸಾಂವಿಧಾನಿಕವಾಗಿ ವಾದ ಮಾಡುವುದರಲ್ಲಿ ಅರ್ಥವಿಲ್ಲ.

ಬೀರಪ್ಪ ಡಿ. ಡಂಬಳಿ, ಕೋಹಳ್ಳಿ, ಅಥಣಿ

ಅಯೋಧ್ಯೆ ನಿವಾಸಿಗಳ 'ವನವಾಸ'!

ಲೋಕಸಭಾ ಚುನಾವಣಾ ಫಲಿತಾಂಶ ಕುರಿತಂತೆ ಅಯೋಧ್ಯೆ ಮತದಾರರ ಕುರಿತು ಅನೇಕ ರೀತಿಯ ಟೀಕೆ ಟಿಪ್ಪಣಿಗಳು ವ್ಯಕ್ತವಾಗುತ್ತಿವೆ. ಕೆಲವು ವರ್ಷಗಳ ಹಿಂದೆ ಉತ್ತರಪ್ರದೇಶದ ಪ್ರವಾಸ ಕಾಲಕ್ಕೆ ನಾವು ಅಯೋಧ್ಯೆಗೆ ಭೇಟಿ ನೀಡಿದ್ದೆವು. ಆಗಿನ್ನೂ ಸುಪ್ರೀಂ ಕೋರ್ಟಿನಲ್ಲಿ ಶ್ರೀರಾಮ ಮಂದಿರ ಕುರಿತ ವ್ಯಾಜ್ಯ ಇತ್ಯರ್ಥವಾಗಿರಲಿಲ್ಲ. ವಾದ ವಿವಾದಗಳು ಜೋರಾಗಿ ನಡೆಯುತ್ತಿದ್ದವು. ನಮ್ಮ ಪ್ರವಾಸಿ ಮಾರ್ಗದರ್ಶಿಯಾಗಿದ್ದ ವ್ಯಕ್ತಿ ಅಯೋಧ್ಯೆ ಕುರಿತು ಒಂದು ಕುತೂಹಲಕರ ವಿಷಯವನ್ನು ನಮಗೆ ಹೇಳಿದ: 'ಶ್ರೀರಾಮನನ್ನು ವರಿಸಿ ಅಯೋಧ್ಯೆಗೆ ಬಂದ ಕೆಲವೇ ದಿನಗಳಲ್ಲಿ ಪಿತೃವಾಕ್ಯ ಪರಿಪಾಲನೆಗಾಗಿ, ಶ್ರೀರಾಮನೊಂದಿಗೆ ಸೀತೆ 14 ವರ್ಷ ವನವಾಸಕ್ಕೆ ತೆರಳಬೇಕಾಯಿತು. ಆ ಅವಧಿಯಲ್ಲಿ ಪಡಬಾರದ ಕಷ್ಟಗಳನ್ನು ಅನುಭವಿಸಿ, ಅಗ್ನಿಪರೀಕ್ಷೆಗೆ ಒಳಗಾಗಿ, ಅಯೋಧ್ಯೆಗೆ ಹಿಂದಿರುಗಿದ ಮೇಲೆ ಇನ್ನೇನು ನೆಮ್ಮದಿಯಿಂದ ಇರಬಹುದು ಅಂದುಕೊಂಡರೆ, ಶ್ರೀರಾಮ ಜನಾಭಿಪ್ರಾಯಕ್ಕೆ ಅಂಜಿ ಮತ್ತೆ ಸೀತೆಯನ್ನು ಕಾಡಿಗೆ ಅಟ್ಟುತ್ತಾನೆ. ಹೀಗಾಗಿ, ಸೀತಾಮಾತೆಯ ಶಾಪವಿರುವುದರಿಂದ ಅಯೋಧ್ಯೆ ಮತ್ತು ಅಲ್ಲಿನ ನಿವಾಸಿಗಳಿಗೆ ಎಂದೂ ನೆಮ್ಮದಿ ಇಲ್ಲ'. ಇವೆಲ್ಲ ಅಂತೆಕಂತೆಗಳೇ ಇರಬಹುದು. ಆದರೆ ಇಂತಹ ಒಂದು ಭಾವನೆ ಅಲ್ಲಿಯ ಜನಮಾನಸದಲ್ಲಿ ಇರುವುದಾಗಿ ತಿಳಿದುಬಂತು.

ಅಯೋಧ್ಯೆ ಒಂದುಕಾಲಕ್ಕೆ ಇಡೀ ದೇಶದ ನೆಮ್ಮದಿಯನ್ನು ಕಲಕಿದ್ದು ನಮಗೆ ಗೊತ್ತಿದೆ. ವ್ಯಾಜ್ಯದಿಂದಾಗಿ ಅನೇಕ ವರ್ಷಗಳ ಕಾಲ ಅಯೋಧ್ಯೆಯಲ್ಲಿ ನೆಮ್ಮದಿ ಇರಲಿಲ್ಲ. ಇತ್ತೀಚೆಗೆ ವ್ಯಾಜ್ಯ ಇತ್ಯರ್ಥವಾದ ಮೇಲೆ, ಭೂಸ್ವಾಧೀನ ಪ್ರಕ್ರಿಯೆಯಂಥ ವಿಷಯಗಳು ಕೂಡ ಹಲವಾರು ವಿವಾದಗಳಿಗೆ ಕಾರಣವಾಗಿ ಅನೇಕರ ನೆಮ್ಮದಿಯನ್ನು ಕದಡಿದವು. ಶ್ರೀರಾಮ, ಚುನಾವಣೆ ಪ್ರಚಾರದ ವಿಷಯವಾಗಿ ವಿವಾದಕ್ಕೀಡಾದ. ಈಗ ಚುನಾವಣೆ ಫಲಿತಾಂಶದ ಪರ– ವಿರೋಧ ಅಭಿಪ್ರಾಯಗಳಿಂದಾಗಿ ಅಯೋಧ್ಯೆವಾಸಿಗಳಿಗೆ ನೆಮ್ಮದಿ ಎಂಬುದು ಮರೀಚಿಕೆಯಾಗಿಯೇ ಉಳಿಯುವಂತಾಗಿದೆ!

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕೇಂದ್ರ ಸಂಪುಟದಲ್ಲಿ ರಾಜ್ಯದ ಪ್ರತಿನಿಧಿಗಳು



ನಿರ್ಮಲಾ ಸೀತಾರಾಮನ್

ವಯಸ್ಸು: **65,** ಪಕ್ಷ: **ಬಿಜೆಪಿ**
ಜಾತಿ: **ಬ್ರಾಹ್ಮಣ**
ವಿದ್ಯಾರ್ಹತೆ: **ಎಂ.ಎ (ಅರ್ಥಶಾಸ್ತ್ರ) ಎಂ.ಫಿಲ್**

- ರಾಜ್ಯದಿಂದ ಮೂರನೇ ಅವಧಿಗೆ ರಾಜ್ಯಸಭಾ ಸದಸ್ಯರಾಗಿರುವ ನಿರ್ಮಲಾ ಸೀತಾರಾಮನ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಹೊಸ ಸರ್ಕಾರದಲ್ಲೂ ಸಚಿವರಾಗಿದ್ದಾರೆ. ತಮಿಳುನಾಡಿನ ಮಧುರೈನವರಾದ ಅವರನ್ನು ಅಲ್ಲಿನ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರಿಲ್ಲದ ಕಾರಣದಿಂದ ಕರ್ನಾಟಕದಿಂದ ಸತತವಾಗಿ ಆಯ್ಕೆ ಮಾಡಲಾಗುತ್ತಿದೆ. 2014ರಲ್ಲಿ ನರೇಂದ್ರ ಮೋದಿ ಅವರು ಮೊದಲ ಬಾರಿ ಅಧಿಕಾರಕ್ಕೇರಿದಾಗಲೇ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರಾಗಿ ಸಂಪುಟ ಸೇರಿದ್ದರು. ಸತತ ಹತ್ತು ವರ್ಷಗಳ ಕಾಲ ಸಚಿವರಾಗಿದ್ದ ನಿರ್ಮಲಾ, ಮೂರನೇ ಅವಧಿಗೆ ಮೋದಿ ಸಂಪುಟ ಸೇರುತ್ತಿದ್ದಾರೆ.
- ಮೂರನೇ ಅವಧಿಗೆ ರಾಜ್ಯಸಭಾ ಸದಸ್ಯೆ
- 2003–2005– ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ
- ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಖಾತೆ ರಾಜ್ಯ ಸಚಿವೆ
- ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ಸಚಿವೆ (ಸ್ವತಂತ್ರ ಸ್ಥಾನಮಾನ)
- ರಕ್ಷಣಾ ಸಚಿವೆ
- 2019–2024 ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ



ಎಚ್.ಡಿ. ಕುಮಾರಸ್ವಾಮಿ

ವಯಸ್ಸು: **65,** ಪಕ್ಷ: **ಜೆಡಿಎಸ್**
ಜಾತಿ: **ಒಕ್ಕಲಿಗ**
ವಿದ್ಯಾರ್ಹತೆ: **ಬಿ.ಎಸ್‌ಸಿ**

- ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮಗ ಎಚ್.ಡಿ. ಕುಮಾರಸ್ವಾಮಿ, ರಾಜ್ಯದಲ್ಲಿ ಎರಡು ಬಾರಿ ಅಲ್ಪಾವಧಿಗೆ ಮುಖ್ಯಮಂತ್ರಿಯಾಗಿದ್ದರು. ಮೂರನೇ ಬಾರಿ ಸಂಸದರಾಗಿರುವ ಅವರು, ಜೆಡಿಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟ ಸೇರಿರುವ ಕಾರಣದಿಂದಾಗಿ ಕೇಂದ್ರ ಸಂಪುಟದ ಸದಸ್ಯರಾಗಿದ್ದಾರೆ. ತಾವು ಗೆಲ್ಲುವುದರ ಜತೆಯಲ್ಲೇ ಒಕ್ಕಲಿಗ ಮತದಾರರ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಗೆಲುವಿನ ದಡ ಸೇರಿಸಿರುವುದಕ್ಕಾಗಿ ನರೇಂದ್ರ ಮೋದಿಯವರ ಸಂಪುಟದಲ್ಲಿ ಆದ್ಯತೆ ಸಿಕ್ಕಿದೆ. ಒಕ್ಕಲಿಗ ನಾಯಕತ್ವಕ್ಕಾಗಿ ಕುಮಾರಸ್ವಾಮಿ ಮತ್ತು ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಧ್ಯೆ ಹಣಾಹಣಿ ಜೋರಾಗಿದೆ. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಅವರನ್ನು ಕೇಂದ್ರ ಸಚಿವರಾಗಿ ಮಾಡುವುದರ ಹಿಂದೆ ಅವರೇ ಒಕ್ಕಲಿಗ ಸಮುದಾಯದ ನಾಯಕ ಎಂದು ಬಿಂಬಿಸುವ ಲೆಕ್ಕಾಚಾರವೂ ಇದೆ.
- ಎರಡು ಬಾರಿ ಅಲ್ಪಾವಧಿಗೆ ರಾಜ್ಯದ ಮುಖ್ಯಮಂತ್ರಿ
- ಮೂರು ಬಾರಿ ಸಂಸದ
- ಐದು ಬಾರಿ ಶಾಸಕ
- ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ



ಪ್ರಲ್ಹಾದ ಜೋಶಿ

ವಯಸ್ಸು: **62,** ಪಕ್ಷ: **ಬಿಜೆಪಿ**
ಜಾತಿ: **ಬ್ರಾಹ್ಮಣ**
ವಿದ್ಯಾರ್ಹತೆ: **ಬಿ.ಎ**

- ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಸತತ ಐದನೇ ಬಾರಿ ಗೆಲುವು ಸಾಧಿಸಿರುವ ಪ್ರಲ್ಹಾದ ಜೋಶಿ, ನರೇಂದ್ರ ಮೋದಿಯವರ ಸಂಪುಟದಲ್ಲಿ ಎರಡನೇ ಬಾರಿ ಸಚಿವರಾಗುತ್ತಿದ್ದಾರೆ. ಕಳೆದ ಬಾರಿ ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಖಾತೆಗಳ ಸಚಿವರಾಗಿದ್ದರು. ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯ ನೀಡುವ ಬಿಜೆಪಿ ಕಾರ್ಯತಂತ್ರದ ಭಾಗವಾಗಿ ಪ್ರಲ್ಹಾದ ಜೋಶಿ ಅವರಿಗೆ ಮತ್ತೆ ಸಚಿವ ಸ್ಥಾನ ಒಲಿದಿದೆ. ಇತ್ತೀಚಿನ ಕೆಲವು ವರ್ಷಗಳಿಂದ ಜೋಶಿ ಬಿಜೆಪಿಯ ವರಿಷ್ಠರಿಗೆ ನಿಕಟರಾಗಿದ್ದಾರೆ. ಇದೂ ಕೂಡ ಅವರು ಮತ್ತೊಮ್ಮೆ ಸಂಪುಟ ಸೇರಲು ಕಾರಣವಾಗಿದೆ. ಆರ್‌ಎಸ್‌ಎಸ್ ನಾಯಕರಿಗೂ ನಿಕಟರಾಗಿದ್ದಾರೆ.
- 2004 ರಿಂದ ಸತತವಾಗಿ ಐದನೇ ಬಾರಿ ಸಂಸದ
- 2014ರಿಂದ 2016ರವರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ
- 2019 ರಿಂದ 2024ರವರೆಗೆ ಕೇಂದ್ರ ಸಚಿವ
- ಲೋಕಸಭೆ ವ್ಯವಹಾರಗಳ ಸಮಿತಿ, ರೈಲ್ವೆ ಸ್ಥಾಯಿ ಸಮಿತಿ ಮತ್ತು ನಗರಾಭಿವೃದ್ಧಿ ಸಲಹಾ ಸಮಿತಿ ಸದಸ್ಯರಾಗಿದ್ದರು
- ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಂಸದೀಯ ಸಮಿತಿಯ ಅಧ್ಯಕ್ಷ ಸ್ಥಾನ, ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಖಾತೆಗಳನ್ನು ನಿಭಾಯಿಸಿದ್ದಾರೆ



ವಿ. ಸೋಮಣ್ಣ

ವಯಸ್ಸು: **73** ಪಕ್ಷ: **ಬಿಜೆಪಿ** ಜಾತಿ: **ಲಿಂಗಾಯತ**
ವಿದ್ಯಾರ್ಹತೆ: **ಬಿ.ಎ**

- ಜನತಾ ಪರಿವಾರದಲ್ಲಿ ರಾಜಕೀಯ ಆರಂಭಿಸಿದ್ದ ವಿ.ಸೋಮಣ್ಣ, ಕಾಂಗ್ರೆಸ್‌ನಲ್ಲಿ ದಶಕಗಳ ಕಾಲ ಇದ್ದರು. ಈಗ ಬಿಜೆಪಿಯಲ್ಲಿ ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣ ಪ್ರವೇಶಿಸಿದ್ದಾರೆ. ಪಾಲಿಕೆ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ್ದ ಸೋಮಣ್ಣ, ಈಗ ತುಮಕೂರು ಲೋಕಸಭಾ ಕ್ಷೇತ್ರದ ಸಂಸದ. ರಾಜ್ಯದಲ್ಲಿ ಹಲವು ಖಾತೆಗಳ ಸಚಿವರಾಗಿ ಕೆಲಸ ಮಾಡಿರುವ ಅನುಭವಿ ರಾಜಕಾರಣಿ. 2023ರ ವಿಧಾನಸಭಾ ಚುನಾವಣೆಯಲ್ಲಿ ವರುಣ ಮತ್ತು ಚಾಮರಾಜನಗರ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಸೋತಿದ್ದ ಅವರು, ಪುನಃ ರಾಜ್ಯ ರಾಜಕಾರಣದಲ್ಲಿ ಮುಂಚೂಣಿಗೆ ಬರುವ ಪ್ರಯತ್ನ ಮಾಡುತ್ತಿದ್ದರು. ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು, ಸಂಸತ್ ಪ್ರವೇಶಿಸಿದ್ದಾರೆ. ಮೊದಲ ಅವಧಿಯಲ್ಲೇ ಲಿಂಗಾಯತ ಕೋಟಾದಲ್ಲಿ ಮೋದಿಯವರ ಸಂಪುಟದಲ್ಲಿ ಸ್ಥಾನ ಒಲಿದಿದೆ.
- ಎರಡು ಅವಧಿಗೆ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ
- ಐದು ಬಾರಿ ಶಾಸಕ
- ಎರಡು ಅವಧಿಗೆ ವಿಧಾನ ಪರಿಷತ್ ಸದಸ್ಯ
- ರಾಜ್ಯದಲ್ಲಿ ಆರು ಬಾರಿ ಸಚಿವರಾಗಿ ಕಾರ್ಯನಿರ್ವಹಣೆ




ಶೋಭಾ ಕರಂದ್ಲಾಜೆ

ವಯಸ್ಸು: **58** ಪಕ್ಷ: **ಬಿಜೆಪಿ** ಜಾತಿ: **ಒಕ್ಕಲಿಗ**
ವಿದ್ಯಾರ್ಹತೆ: **ಎಂಎಸ್‌ಡಬ್ಲ್ಯು, ಎಂ.ಎ**

- ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಕೃಷಿ ಖಾತೆ ರಾಜ್ಯ ಸಚಿವರಾಗಿದ್ದ ಶೋಭಾ ಕರಂದ್ಲಾಜೆ, ಎರಡನೇ ಅವಧಿಗೆ ಸಂಪುಟ ಸೇರಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ಸಂಘ ಪರಿವಾರ ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಲ್ಲಿ ಸಕ್ರಿಯವಾಗಿದ್ದ ಶೋಭಾ, ರಾಜ್ಯದಲ್ಲಿ ಬಿಜೆಪಿಯ ನಾಯಕಿಯರಲ್ಲಿ ಪ್ರಮುಖರು. ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೇರುವ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಅವರು, ವಿಧಾನ ಪರಿಷತ್ ಸದಸ್ಯರಾಗುವ ಮೂಲಕ ಶಾಸನಸಭೆ ಪ್ರವೇಶಿಸಿದ್ದರು. ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು, ಮೊದಲ ಅವಧಿಯ ಬಿಜೆಪಿ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಇಂಧನ ಸಚಿವರಾಗಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಗೆದ್ದು ಸಂಸತ್ ಪ್ರವೇಶಿಸಿದ್ದರು. ಮೂರನೇ ಅವಧಿಗೆ ಬೆಂಗಳೂರು ಉತ್ತರದಿಂದ ಸ್ಪರ್ಧಿಸಿ ಗೆದ್ದಿದ್ದಾರೆ. ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಬಿಜೆಪಿಯ ಏಕೈಕ ಸಂಸದೆ.
- ಒಂದು ಅವಧಿಗೆ ವಿಧಾನ ಪರಿಷತ್ ಸದಸ್ಯೆ
- ಒಂದು ಅವಧಿಗೆ ವಿಧಾನಸಭಾ ಸದಸ್ಯೆ
- ರಾಜ್ಯದಲ್ಲಿ ಸಚಿವೆಯಾಗಿ ಕಾರ್ಯನಿರ್ವಹಣೆ
- ಮೂರನೇ ಅವಧಿಗೆ ಸಂಸದೆ


ಕೇಂದ್ರದ ನೂತನ ಸಚಿವರು



ಹರ್ಷ ಮಲ್ಹೋತ್ರ (ದೆಹಲಿ)

ವಯಸ್ಸು: **47,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಎಸ್.ಸಿ, ಕಾನೂನು ಪದವಿ**

- ಪೂರ್ವ ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಆಗಿದ್ದವರು. ಕ್ರಿಕೆಟಿಗ ಗೌತಮ್ ಗಂಭೀರ್ ಅವರ ಸ್ಪರ್ಧಿಸಿ ಗೆದ್ದಿದ್ದ, ಪೂರ್ವ ದೆಹಲಿ ಕ್ಷೇತ್ರದಿಂದ ಹರ್ಷ ಅವರು ಈ ಬಾರಿ ಜಯಶಾಲಿಯಾಗಿದ್ದಾರೆ. ದೆಹಲಿ ಘಟಕದ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದಾರೆ



ಅಜಯ್ ಟಮ್ಟಾ (ಉತ್ತರಾಖಂಡ)

ವಯಸ್ಸು: **51,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಎ.**

- 23ನೇ ವಯಸ್ಸಿನಲ್ಲಿಯೇ ರಾಜಕೀಯ ಪ್ರವೇಶ. ಜಿಲ್ಲಾ ಪಂಚಾಯಿಯ ಸದಸ್ಯ, ಜಿಲ್ಲಾ ಪಂಚಾಯ್ತಿಯ ಉಪಾಧ್ಯಕ್ಷ ಸ್ಥಾನದಿಂದ ಮೊದಲುಗೊಂಡು, ಈಗ ಎರಡನೇ ಬಾರಿಗೆ ಸಂಸದರಾಗಿದ್ದಾರೆ. 2014ರ ಮೋದಿ ಸಂಪುಟದಲ್ಲಿ ಜವಳಿ ಸಚಿವಾಲಯದ ರಾಜ್ಯ ಸಚಿವರಾಗಿದ್ದವರು. ಉತ್ತರಾಖಂಡ ಸರ್ಕಾರದಲ್ಲಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ



ಪಬಿತ್ರಾ ಮಾರ್ಗರೀಟಾ (ಅಸ್ಸಾಂ)

ವಯಸ್ಸು: **47,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೊಮೊ**

- ನಟ, ಬರಹಗಾರ, ನಿರ್ಮಾಪಕ, ನಿರೂಪಕರಾಗಿ ಪಬಿತ್ರಾ ಅವರು ಅಸ್ಸಾಂನಲ್ಲಿ ಪರಿಚಿತರು. 2014ರಲ್ಲಿ ಬಿಜೆಪಿ ಸೇರಿದ ಇವರು ಅಸ್ಸಾಂ ಬಿಜೆಪಿಯ ವಕ್ತಾರರಾಗಿದ್ದರು. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಆಪ್ತರು. 2022ರಲ್ಲಿ ರಾಜ್ಯಸಭೆಗೆ ಆಯ್ಕೆ. ಸರ್ಕಾರದ ವಿವಿಧ ಸಮಿತಿಗಳ ಸದಸ್ಯರಾಗಿದ್ದಾರೆ



ರವನೀತ್ ಸಿಂಗ್ ಬಿಟ್ಟು (ಪಂಜಾಬ್)

ವಯಸ್ಸು: **49,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಸಿ.ಎ**

- ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಮೊಮ್ಮಗ. 2009, 2014, 2019ರಲ್ಲಿ ಕಾಂಗ್ರೆಸ್‌ನಿಂದ ಸಂಸದರಾಗಿದ್ದರು. ಇತ್ತೀಚೆಗಷ್ಟೇ ಬಿಜೆಪಿ ಸೇರಿಕೊಂಡಿದ್ದರು. 'ನನ್ನ ಸ್ನೇಹಿತ ಬಿಟ್ಟು ಅವರಿಗೆ ನೀವೆಲ್ಲರೂ ಮತ ನೀಡಬೇಕು' ಎಂದು ಅಮಿತ್ ಶಾ ಅವರ ಚುನಾವಣೆಯ ಪ್ರಚಾರ ಸಭೆಯೊಂದರಲ್ಲಿ ಹೇಳಿದ್ದರು



ಶಂತನು ಠಾಕೂರ್ (ಪಶ್ಚಿಮ ಬಂಗಾಳ)

ವಯಸ್ಸು: **41,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಎ., ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್**

- ಶಂತನು ಅವರ ತಂದೆ ಮಂಜುಲ್ ಕೃಷ್ಣಾ ಠಾಕೂರ್ ಅವರು ಟಿಎಂಸಿಯ ನಾಯಕರಾಗಿದ್ದರು. ಇವರ ಸಹೋದರ ಕೂಡ ಟಿಎಂಸಿ ನಾಯಕರಾಗಿದ್ದರು. ಶಂತನು ಹಾಗೂ ಇವರ ಸಹೋದರ ಹಾಗೂ ಕೃಷ್ಣಾ ಠಾಕೂರ್ ಅವರು 2014ರಲ್ಲಿಯೇ ಬಿಜೆಪಿ ಸೇರಿದ್ದರು. 2019ರಲ್ಲಿಯೂ ಶಂತನು ಅವರು ಸಂಸದರಾಗಿದ್ದರು



ಸುಕಾಂತ ಮಜುಂದಾರ್ (ಪಶ್ಚಿಮ ಬಂಗಾಳ)

ವಯಸ್ಸು: **45,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂ.ಎಸ್ಸಿ, ಬಿ.ಇಡಿ, ಪಿ.ಎಚ್‌ಡಿ**


- ಆರ್‌ಎಸ್‌ಎಸ್ ಜೊತೆಗೆ ಹಲವು ವರ್ಷಗಳ ನಂಟು. 2019ರಲ್ಲಿಯೂ ಸಂಸದರಾಗಿ ಆಯ್ಕೆಯಾಗಿದ್ದರು. 2021ರಲ್ಲಿ ಬಿಜೆಪಿಯ ಪಶ್ಚಿಮ ಬಂಗಾಳ ಘಟಕ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಟಿಎಂಸಿ ಪ್ರಾಬಲ್ಯವನ್ನು ಎದುರಿಸುವ ರಾಜ್ಯ ಬಿಜೆಪಿಯ ಪ್ರಮುಖ ಮುಖವಾಗಿದ್ದಾರೆ



ಎಸ್.ಪಿ. ಸಿಂಗ್ ಬಘೇಲ್ (ಉತ್ತರ ಪ್ರದೇಶ)

ವಯಸ್ಸು: **64,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂ.ಎಸ್‌ಸಿ, ಎಲ್‌ಎಲ್‌ಬಿ, ಪಿ.ಎಚ್‌ಡಿ, ಎಂ.ಎ (ಇತಿಹಾಸ)**

- ಐದು ಬಾರಿ ಲೋಕಸಭೆಗೆ ಆಯ್ಕೆ. ಹಲವು ಸಂಸದೀಯ ಸ್ಥಾಯಿ ಸಮಿತಿಗಳ ಸದಸ್ಯನಾಗಿ, ಹಲವು ಸಚಿವಾಲಯಗಳ ರಾಜ್ಯ ಸಚಿವನಾಗಿ ಕಾರ್ಯನಿರ್ವಹಣೆ. ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದ ಅವರು 90ರ ದಶಕದಲ್ಲಿ ರಾಜಕೀಯಕ್ಕೆ ಪ್ರವೇಶ. ಆಡ್ವಾಣಿ ಹಾಗೂ ವಾಜಪೇಯಿ ಅವರಿಗೆ ಆಪ್ತರಾಗಿದ್ದರು



ಕೀರ್ತಿ ವರ್ಧನ್ ಸಿಂಗ್ (ಉತ್ತರ ಪ್ರದೇಶ)

ವಯಸ್ಸು: **58,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂ.ಎಸ್‌ಸಿ**

- 90 ದಶಕದಲ್ಲಿ ರಾಜಕೀಯ ಪ್ರವೇಶ. 12ನೇ ಲೋಕಸಭೆಯಿಂದ ಈವರೆಗೆ ಐದು ಬಾರಿ ಸಂಸದರಾಗಿ ಆಯ್ಕೆ. ಹಲವು ಸಂಸದೀಯ ಸ್ಥಾಯಿ ಸಮಿತಿಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಣೆ. ವಾಜಪೇಯಿ ಅವರೊಂದಿಗೆ ಉತ್ತಮ ಸಂಬಂಧ ಇತ್ತು. ಅವರ ಸರ್ಕಾರದಲ್ಲಿ ರಕ್ಷಣಾ ವ್ಯವಹಾರಗಳ ಸಂಸದೀಯ ಸಮಿತಿಯ ಸದಸ್ಯರಾಗಿದ್ದರು



ಬಿ.ಎಲ್. ವರ್ಮಾ (ಉತ್ತರ ಪ್ರದೇಶ)

ವಯಸ್ಸು: **63,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಸ್ನಾತಕೋತ್ತರ ಪದವೀಧರ**

- ಸದ್ಯ ರಾಜ್ಯಸಭೆ ಸದಸ್ಯ. ಈ ಹಿಂದಿನ ಮೋದಿ ಸರ್ಕಾರದಲ್ಲಿ ಈಶಾನ್ಯ ಭಾರತ ಅಭಿವೃದ್ಧಿ ಸಚಿವಾಲಯದ ಖಾತೆ ನಿರ್ವಹಿಸಿದ್ದರು. ಅತಿಹಿಂದುಳಿದ ಲೋಧಾ ಸಮುದಾಯಕ್ಕೆ ಸೇರಿದ ಇವರು, ಉತ್ತರ ಪ್ರದೇಶ ರಾಜ್ಯ ಬಿಜೆಪಿ ಘಟಕದ ಉಪಾಧ್ಯಕ್ಷರೂ ಆಗಿದ್ದಾರೆ. ಪಕ್ಷದ ಒಬಿಸಿ ಮೋರ್ಚಾದ ರಾಷ್ಟ್ರೀಯ ಉಪಾಧ್ಯಕ್ಷ



ದುರ್ಗಾದಾಸ್ ಉಯಿಕೆ (ಉತ್ತರ ಪ್ರದೇಶ)

ವಯಸ್ಸು: **61,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂ.ಎ., ಬಿ.ಇಡಿ**

- ಪರಿಶಿಷ್ಟ ಪಂಗಡಗಳ ಹಕ್ಕುಗಳ ರಕ್ಷಣೆಗಾಗಿ ರಾಜಕೀಯಕ್ಕೆ ಬಂದ ಇವರು, ಹಲವು ದಶಕಗಳ ನಂತರ ಚುನಾವಣಾ ರಾಜಕಾರಣಕ್ಕೆ ಕಾಲಿಟ್ಟರು. 2019ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಸಂಸತ್ತು ಪ್ರವೇಶಿಸಿದ್ದರು. ರಕ್ಷಣಾ ವ್ಯವಹಾರಗಳ ಮತ್ತು ಬುಡಕಟ್ಟು ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಣೆ



ವೀರೇಂದ್ರ ಕುಮಾರ್ (ಮಧ್ಯ ಪ್ರದೇಶ)

ವಯಸ್ಸು: **70,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಎಂ.ಎ., ಪಿ.ಎಚ್‌ಡಿ**

- ಬಜರಂಗದಳ, ಎಬಿವಿಪಿ ಸಂಚಾಲಕನಾಗಿ, ವಿಭಾಗೀಯ ಸಂಘಟನಾ ಕಾರ್ಯದರ್ಶಿಯಾಗಿ ರಾಜಕೀಯ ಪ್ರವೇಶ. ಬಿಜೆಪಿ ಯುವ ಮೋರ್ಚಾ ಮತ್ತು ಪರಿಶಿಷ್ಟ ಜಾತಿಗಳ ಮೋರ್ಚಾದಲ್ಲಿ ಕಾರ್ಯನಿರ್ವಹಣೆ. ಏಳು ಬಾರಿ ಸಂಸದರಾಗಿ ಆಯ್ಕೆ. ವಿವಿಧ ಖಾತೆಗಳಲ್ಲಿ ರಾಜ್ಯ ಸಚಿವನಾಗಿ ಕಾರ್ಯನಿರ್ವಹಣೆ



ಸಾವಿತ್ರಿ ಠಾಕೂರ್ (ಮಧ್ಯ ಪ್ರದೇಶ)

ವಯಸ್ಸು: **45,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಪಿಯುಸಿ**

- ಸಾವಿತ್ರಿ ಅವರು ರಾಜ್ಯದ ಬುಡಕಟ್ಟು ಸಮುದಾಯದ ಮಹಿಳಾ ನಾಯಕಿ. 2003ರಲ್ಲಿ ಜಿಲ್ಲಾ ಪಂಚಾಯಿತಿಯ ಸದಸ್ಯೆ, ನಂತರ ಅಧ್ಯಕ್ಷರೂ ಆಗುತ್ತಾರೆ. ನಂತರ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಬಿಜೆಪಿಯ ಹಲವು ಹುದ್ದೆಗಳಲ್ಲಿ ಕಾರ್ಯನಿರ್ವಹಣೆ. 2014ರಲ್ಲಿ ಲೋಕಸಭೆಗೆ ಸ್ಪರ್ಧಿಸಿ ಗೆಲುವು ಸಾಧಿಸುತ್ತಾರೆ. ನಂತರ 2019ರಲ್ಲಿ ಟಿಕೆಟ್ ನಿರಾಕರಿಸಲಾಗಿತ್ತು.



ಅನ್ನಪೂರ್ಣ ದೇವಿ (ಜಾರ್ಖಂಡ್)

ವಯಸ್ಸು: **50,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಸ್ನಾತಕೋತ್ತರ ಪದವಿ**

- ಹಿಂದುಳಿದ ವರ್ಗಗಳ ಹಕ್ಕುಗಳ ರಕ್ಷಣಾ ಹೋರಾಟದ ಮೂಲಕ ರಾಜಕೀಯ ಪ್ರವೇಶ. 1998ರಲ್ಲಿ ಮೊದಲ ಬಾರಿಗೆ ಆರ್‌ಜೆಡಿ ಶಾಸಕಿಯಾಗಿ ಆಯ್ಕೆ. 2005ರಿಂದ 2014ರವರೆಗೆ ಮೂರು ಬಾರಿ ಶಾಸಕಿಯಾಗಿ ಆಯ್ಕೆ. 2019ರ ಲೋಕಸಭಾ ಚುನಾವಣಾ ಹೊತ್ತಿನಲ್ಲಿ ಬಿಜೆಪಿಗೆ ಸೇರ್ಪಡೆ. 2019ರಲ್ಲಿ ಸಂಸದೆಯಾಗಿ ಆಯ್ಕೆ



ಶ್ರೀಪಾದ್ ನಾಯ್ಕ್ (ಗೋವಾ)

ವಯಸ್ಸು: **72,** ಪಕ್ಷ: **ಬಿಜೆಪಿ**
ವಿದ್ಯಾರ್ಹತೆ: **ಬಿ.ಎ.**

- 1994ರಲ್ಲಿ ಗೋವಾ ವಿಧಾನಸಭೆಗೆ ಆಯ್ಕೆ. 1999ರಲ್ಲಿ ಸಂಸತ್ತು ಪ್ರವೇಶ. ವಾಜಪೇಯಿ ಸಂಪುಟದಲ್ಲಿ ಕೃಷಿ ಖಾತೆ, ನಾಗರಿಕ ವಿಮಾನಯಾನ, ಹಣಕಾಸು ಸಚಿವಾಲಯಗಳ ರಾಜ್ಯ ಸಚಿವನಾಗಿ ಸೇವೆ. 2004ರಿಂದ 2024ರವರೆಗೆ ಸತತ ಐದು ಬಾರಿ ಸಂಸದನಾಗಿ ಆಯ್ಕೆ. 25 ವರ್ಷಗಳಲ್ಲಿ ಹಲವು ಸಚಿವಾಲಯಗಳ ರಾಜ್ಯ ಸಚಿವನಾಗಿ ಕಾರ್ಯನಿರ್ವಹಣೆ



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿ ಸಮಾರಂಭ ಶೀಘ್ರದಲ್ಲೇ ನಡೆಯಲಿದ್ದು, 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರು ಮತ್ತು ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ **'ಅತ್ಯುತ್ತಮ ಪೋಷಕ ನಟಿ'** ವಿಭಾಗದಲ್ಲಿ ನಾಮನಿರ್ದೇಶಿತಗೊಂಡವರ ಪರಿಚಯಿಸುವ ಸಮಯ.

ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. https://www.prajavani.net/cinesamman/season2




ಉಮಾಶ್ರೀ

'ಕಾಸಿನಸರ' ಚಿತ್ರದಲ್ಲಿನ ನಟನೆಗಾಗಿ **ಉಮಾಶ್ರೀ** ಅವರು ನಾಮನಿರ್ದೇಶನಗೊಂಡಿದ್ದಾರೆ. 1980ರಲ್ಲಿ ಗ್ರಾಮೀಣ ರಂಗಭೂಮಿ ಮುಖಾಂತರ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ಉಮಾಶ್ರೀ ಸದ್ಯ 450ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಹೆಜ್ಜೆ ಇಟ್ಟವರು ಇವರು. ಕಾಶಿನಾಥ್ ನಟಿಸಿ, ನಿರ್ದೇಶಿಸಿದ 'ಅನುಭವ' ಚಿತ್ರ ಉಮಾಶ್ರೀ ಸಿನಿಪಯಣಕ್ಕೆ ತಿರುವು ನೀಡಿತು. 'ಗುಲಾಬಿ ಟಾಕೀಸ್'ನಲ್ಲಿನ ನಟನೆಗಾಗಿ ಅವರು ರಾಷ್ಟ್ರ ಪ್ರಶಸ್ತಿ ಪಡೆದರು. 'ಪುಟ್ನಂಜ' ಸಿನಿಮಾ ಮೂಲಕ ಕನ್ನಡ ಪ್ರೇಕ್ಷಕರಿಗೆ ಮತ್ತಷ್ಟು ಹತ್ತಿರವಾದ ಇವರು ಬೆಳ್ಳಿತೆರೆ ಹಾಗೂ ಕಿರುತೆರೆಯಲ್ಲೂ ಸಕ್ರಿಯ. 'ರತ್ನನ್‌ಪ್ರಪಂಚ' ಹಾಗೂ 'ವೇದ' ಸಿನಿಮಾದಲ್ಲಿ ಉಮಾಶ್ರೀ ನಟನೆ ಮೆಚ್ಚುಗೆ ಪಡೆದಿತ್ತು. 'ಕಾಸಿನಸರ' ಸಿನಿಮಾದಲ್ಲಿ 'ತಾಯವ್ವ' ಪಾತ್ರದಲ್ಲಿ ಉಮಾಶ್ರೀ ನಟನೆ ಮನಸ್ಸು ತಟ್ಟಿತ್ತು. ಅವರು ಪ್ರಸ್ತುತ ಧನಂಜಯ ನಟನೆಯ 'ಉತ್ತರಕಾಂಡ' ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದಾರೆ.



ತಾರಾ ಅನುರಾಧಾ

'ಟಗರುಪಲ್ಯ' ಚಿತ್ರದಲ್ಲಿನ ನಟನೆಗಾಗಿ **ತಾರಾ ಅನುರಾಧಾ** ಅವರು ನಾಮನಿರ್ದೇಶನಗೊಂಡಿದ್ದಾರೆ. ಬಾಲನಟಿಯಾಗಿ ಸಿನಿಪಯಣ ಆರಂಭಿಸಿದ ತಾರಾ ತಮಿಳು ಚಿತ್ರರಂಗಕ್ಕೆ ಮೊದಲು ಹೆಜ್ಜೆ ಇಟ್ಟರು. 'ತುಳಸೀದಳ' ಸಿನಿಮಾ ಮೂಲಕ ಕನ್ನಡ ಬೆಳ್ಳಿತೆರೆಯ ಪಯಣ ಆರಂಭಿಸಿದರು. ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳ ಸಿನಿಮಾಗಳಲ್ಲೂ ನಟಿಸಿದ್ದಾರೆ. ಅನುರಾಧಾ ಆಗಿದ್ದ ತಾರಾ ಪಿಯುಸಿಗೆ ಬರುವಷ್ಟರಲ್ಲೇ ಸುಮಾರು 60 ಸಿನಿಮಾಗಳಲ್ಲಿ ನಟಿಸಿದ್ದರು. ಗಿರೀಶ ಕಾಸರವಳ್ಳಿ ನಿರ್ದೇಶನದ 'ಹಸೀನಾ' ಚಿತ್ರದಲ್ಲಿನ ಅತ್ಯುತ್ತಮ ನಟನೆಗಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. 'ಕಾನೂರು ಹೆಗ್ಗಡತಿ', 'ಕರಿಮಲೆಯ ಕಗ್ಗತ್ತಲು', 'ಮುಂಜಾನೆಯ ಮಂಜು', 'ಸೈನೈಡ್', 'ಹೆಬ್ಬೆಟ್ ರಾಮಕ್ಕ' ತಾರಾ ನಟಿಸಿದ ಪ್ರಮುಖ ಚಿತ್ರಗಳು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ರಾಜಕೀಯದಲ್ಲೂ ಇವರು ಸಕ್ರಿಯ. 'ಬಡವ ರಾಸ್ಕಲ್', 'ಟಗರುಪಲ್ಯ' ಸಿನಿಮಾದಲ್ಲಿ-ಅವರ ನಟನೆ ಪ್ರೇಕ್ಷಕರ ಮೆಚ್ಚುಗೆ ಪಡೆದಿತ್ತು. 'ಕೋಟಿ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ.




ಪವಿತ್ರಾ ಲೋಕೇಶ್

'ಸಪ್ತಸಾಗರದಾಚೆ ಎಲ್ಲೋ–Side A' ಚಿತ್ರದಲ್ಲಿನ ನಟನೆಗಾಗಿ **ಪವಿತ್ರಾ ಲೋಕೇಶ್** ಅವರು ನಾಮನಿರ್ದೇಶನಗೊಂಡಿದ್ದಾರೆ. ಅಂಬರೀಶ್ ನಟನೆಯ 'ಮಿಸ್ಟರ್ ಅಭಿಷೇಕ್' ಚಿತ್ರದ ಮುಖಾಂತರ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟ ಪವಿತ್ರಾ ನಂತರ ವಿಷ್ಣುವರ್ಧನ್ ನಟನೆಯ 'ಬಂಗಾರದ ಕಳಶ' ಸಿನಿಮಾದಲ್ಲಿ ನಟಿಸಿದರು. ಬಳಿಕ ಸಿನಿಮಾದಿಂದ ಕೊಂಚ ದೂರ ಉಳಿದಿದ್ದರು. ಟಿ.ಎಸ್.ನಾಗಾಭರಣ ನಿರ್ದೇಶನದ 'ಜನುಮದ ಜೋಡಿ' ಸಿನಿಮಾ ಮೂಲಕ ಅವರು ಸಿನಿಪಯಣ ಪುನರಾರಂಭಿಸಿದ್ದರು. ಗಿರೀಶ ಕಾಸರವಳ್ಳಿ ನಿರ್ದೇಶನದ 'ನಾಯಿ ನೆರಳು' ಸಿನಿಮಾ ಅವರ ಸಿನಿಪಯಣದ ಪ್ರಮುಖ ಸಿನಿಮಾ. ಈ ಸಿನಿಮಾದಲ್ಲಿನ ನಟನೆಗಾಗಿ ಅವರಿಗೆ ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ ದೊರಕಿತ್ತು. ಅವರು ಪ್ರಸ್ತುತ ಚಂದನವನದ ಜೊತೆಗೆ ಟಾಲಿವುಡ್‌ನಲ್ಲೂ ಚಿರಪರಿಚಿತರು. ಬೆಳ್ಳಿತೆರೆಯ ಜೊತೆಗೆ ಕಿರುತೆರೆಯಲ್ಲೂ ನಟಿಸಿ ಪ್ರಶಂಸೆ ಪಡೆದಿದ್ದಾರೆ.



ಗುಂಜಾಲಮ್ಮ

'ಪಿಂಕಿ ಎಲ್ಲಿ?' ಚಿತ್ರದಲ್ಲಿನ ನಟನೆಗಾಗಿ **ಗುಂಜಾಲಮ್ಮ** ಅವರು ನಾಮನಿರ್ದೇಶನಗೊಂಡಿದ್ದಾರೆ. ಯಾದಗಿರಿ ತಾಲ್ಲೂಕಿನ ರಾಮಸಮುದ್ರದ ಇವರು ವೃತ್ತಿಯಲ್ಲಿ ನಟಿಯಲ್ಲ. ಗಾರೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರು, ಮದುವೆಯಾದ ನಂತರ ಬೆಂಗಳೂರಿಗೆ ಬಂದವರು. ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಅವರು, ಪೃಥ್ವಿ ಕೊಣನೂರು ನಿರ್ದೇಶನದ 'ಪಿಂಕಿ ಎಲ್ಲಿ?' ಹಾಗೂ 'ಹದಿನೇಳೆಂಟು' ಸಿನಿಮಾಗಳಲ್ಲಿ ನಟಿಸಿದ್ದಾರೆ. ಮನೆಗೆಲಸಕ್ಕೆ ಬರುವ ಉತ್ತರ ಕರ್ನಾಟಕ ಮೂಲದ ಮಹಿಳೆಯ ಪಾತ್ರದಲ್ಲಿ ಗುಂಜಾಲಮ್ಮ ತಮ್ಮ ನೈಜ ಅಭಿನಯದಿಂದ ಗಮನಸೆಳೆದಿದ್ದರು



ವೆನ್ಯಾ ಸಿ.ರೈ

'ಭಾವಪೂರ್ಣ' ಚಿತ್ರದಲ್ಲಿನ ನಟನೆಗಾಗಿ **ವೆನ್ಯಾ ಸಿ. ರೈ** ಅವರು ನಾಮನಿರ್ದೇಶನಗೊಂಡಿದ್ದಾರೆ. ಪುತ್ತೂರು ಮೂಲದ ವೆನ್ಯಾ, ಕಾಲೇಜು ಓದುತ್ತಿರುವಾಗಲೇ ಚಿತ್ರರಂಗ ಪ್ರವೇಶಿಸಿದವರು. ನಟ, ಯಕ್ಷಗಾನ ಕಲಾವಿದ ಚೇತನ್ ರೈ ಮಾಣಿ ಅವರ ಪುತ್ರಿ. ಬಾಲ್ಯದಿಂದಲೇ ಕಲೆಯ ನಂಟು, ಶಾಲಾ ದಿನಗಳಲ್ಲಿ ನೃತ್ಯ, ರಂಗಭೂಮಿ ಮುಂತಾದ ಕಲಾಪ್ರಕಾರಗಳ ಒಡನಾಟ ವೆನ್ಯಾ ಅವರನ್ನು ಸಿನಿಮಾ ಕ್ಷೇತ್ರದತ್ತ ಆಕರ್ಷಿಸಿತ್ತು. ಹಯವದನ ನಿರ್ದೇಶನದ 'ಎಲ್ಲೋ ಜೋಗಪ್ಪ ನಿನ್ನರಮನೆ...', 'ಭಾವಪೂರ್ಣ' ವೆನ್ಯಾ ನಟಿಸಿರುವ ಸಿನಿಮಾಗಳು. ಸದ್ಯ ಪುಷ್ಪರಾಜ್ ರೈ ನಿರ್ದೇಶನದ 'ಆರಾಟ' ಸಿನಿಮಾ ಬಿಡುಗಡೆಗೆ ಎದುರುನೋಡುತ್ತಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಚತುರ್ಥಿ ಗಂ. 16-16 ನಕ್ಷತ್ರ: ಪುಷ್ಯ ಗಂ. 21-40 ಯೋಗ: ಧ್ರುವ ಗಂ. 16-47 ಕರಣ: ವಿಷ್ಟಿ ಗಂ. 16-16, ವೃಷಭ ಮಾಸದ ನೇ 27 ದಿನ, ಮಳೆನಕ್ಷತ್ರ: ಮೃಗಶಿರ 1.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 03 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 2

ಮೇಷ: ಸ್ವಂತ ಉದ್ಯೋಗ ನಡೆಸುವವರು ಒಳ್ಳೆಯ ಅಭಿವೃದ್ಧಿಯನ್ನು ಎದುರು ನೋಡಬಹುದು. ರಾಜಕೀಯ ವಲಯದ ಕಾರ್ಯಕರ್ತರಿಗೆ ಅರಿವಿಗೆ ಬರದಂತೆ ಮುನ್ನಡೆಯುವ ಅವಕಾಶಗಳು ಕೈ ತಪ್ಪುವ ಸಾಧ್ಯತೆ ಇದೆ.

ವೃಷಭ: ಇಂದಿನ ಭಾಷಣದ ವೇಳೆ ಮಾತಿನ ಘನತೆ ಹೆಚ್ಚುತ್ತದೆ. ದೇಹದಲ್ಲಿ ವಾತ ಅಧಿಕವಾಗಿ ಕೈ-ಕಾಲು ನೋವು ಕಾಣಿಸಿಕೊಳ್ಳಬಹುದು. ಪಿತ್ರಾರ್ಜಿತ ಆಸ್ತಿ ಸಿಗುವುದು.

ಮಿಥುನ: ಒಡಹುಟ್ಟಿದವರ ಸಮಸ್ಯೆಗೆ ನಿಮ್ಮಿಂದಾಗುವ ಉಪಕಾರವನ್ನು ಮಾಡುವ ಪ್ರಯತ್ನಮಾಡಿ. ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು. ಪೀಠೋಪಕರಣಗಳ ಖರೀದಿಗೆ ಶುಭ ದಿನ.

ಕರ್ಕಾಟಕ: ಮೇಲಧಿಕಾರಿಗಳ ಜತೆ ಮಿತ್ರತ್ವವನ್ನು ಕಾಪಾಡಿ. ಇಲ್ಲವಾದಲ್ಲಿ ಪಶ್ಚಾತ್ತಾಪ ಪಡಬೇಕಾಗುವುದು. ಕೋರ್ಟ್ ಕಚೇರಿ ಕೆಲಸಗಳಲ್ಲಿ ಜಯ ಉಂಟಾಗಿ ಸಮಸ್ಯೆಗಳೆಲ್ಲವೂ ಬಗೆಹರಿಯುತ್ತವೆ.

ಸಿಂಹ: ಮಹಾಗಣಪತಿಯ ಆರಾಧನೆಯಿಂದ ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆಲ್ಲಾ ದೂರಾಗುವುವು. ವಿದ್ಯಾಭ್ಯಾಸದ ಸಮಯದಲ್ಲಿ ನೀವಂದುಕೊಂಡ ಹರಕೆಗಳನ್ನು ಪೂರೈಸುವ ಬಗ್ಗೆ ಯೋಚಿಸಿ.

ಕನ್ಯಾ: ಹೊರದೇಶದ ಉದ್ಯೋಗ ಅನ್ವೇಷಣೆಯಲ್ಲಿ ಇರುವವರಿಗೆ ಹಾಗೂ ಉನ್ನತ ವಿದ್ಯಾಭ್ಯಾಸ ಬಯಸುವವರಿಗೆ ಒಳ್ಳೆಯ ದಿನ. ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಉನ್ನತ ಅಧಿಕಾರಿಗಳಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ.

ತುಲಾ: ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟಿನ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ. ಸಂತಸದ ವಿಚಾರವನ್ನು ಸ್ವೀಕರಿಸಲು ಕಷ್ಟವಾಗುವುದು.

ವೃಶ್ಚಿಕ: ಪ್ರಾಪ್ತ ವಯಸ್ಸಿನ ಮಗಳಿಗೆ ಸಂಬಂಧಿಕರಲ್ಲಿ ಅಥವಾ ಅಕ್ಕ-ಪಕ್ಕದ ಮನೆಯಲ್ಲಿಯೇ ವರ ನಿಶ್ಚಯವಾಗಿ ಮದುವೆಯ ತಯಾರಿ ನಡೆಸುವಿರಿ. ಪ್ರಾಮಾಣಿಕತೆಗೆ ತಕ್ಕ ಫಲವನ್ನು ಪಡೆಯುತ್ತೀರಿ.

ಧನು: ಉಂಟಾಗುತ್ತಿರುವ ದೈಹಿಕ ಬದಲಾವಣೆಗಳು ಔಷಧದ ಅಡ್ಡ-ಪರಿಣಾಮಗಳೇ ಎಂದು ಪರೀಕ್ಷಿಸಿಕೊಳ್ಳಿರಿ. ಕೆಲವು ಆಲೋಚನಾರಹಿತ ಮಾತುಗಳಿಂದಾಗಿ ಆಭಾಸಕ್ಕೆ ಒಳಗಾಗಬಹುದು.

ಮಕರ: ಸ್ವಲ್ಪ ದಿನದ ಹಿಂದೆ ಪರಿಹಾರ ಕಾಣದೆ ಕಾಡುತ್ತಿದ್ದ ಒಂದು ಸಮಸ್ಯೆ ಹಿಮದಂತೆ ಕರಗಿಹೋಗುತ್ತದೆ. ಸಹಾಯಕ ವರ್ಗದವರ ಕಷ್ಟಗಳಿಗೆ ನೆರವಾಗುವ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಿ.

ಕುಂಭ: ಹೊಸ ಹೊಸ ವಿಷಯದ ಅಧ್ಯಯನದಲ್ಲಿ ತೋರಿಸುವ ಆಸಕ್ತಿಯನ್ನು ಹುರಿದುಂಬಿಸಲು ಅನುಕೂಲಕರವಾಗುವ ರೀತಿಯಲ್ಲಿ ಸುತ್ತಲಿನ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಿ. ಸಂಧಿವಾತ ಕಾಡಬಹುದು.

ಮೀನ: ವ್ಯವಸಾಯದಲ್ಲಿ ಎದುರಾಗುವ ವಿಪತ್ತನ್ನು ನಿಭಾಯಿಸಲು ಬೇಕಾದ ತಯಾರಿ ಮಾಡಿಟ್ಟುಕೊಳ್ಳಿರಿ. ಕಾರ್ಯವೈಖರಿಯನ್ನು ಒಳ್ಳೆಯ ರೀತಿಯಲ್ಲಿ ಬದಲಾಯಿಸಿಕೊಂಡಲ್ಲಿ ಕೆಲಸವು ಇನ್ನಷ್ಟು ಸುಲಭವಾಗುವುದು.

ಪದಬಂಧ 5707

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಿಳಿಗೇಡಿ ಇಲ್ಲಿದ್ದಾನೆ (3)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
6.ನೂರು ವರ್ಷಗಳ ಕಾಲ ಬದುಕುವವನು (4)
8.ತಿರುಗಿಸಿ ನೋಡಿದರೂ ಇದು ಹೊಸತು (3)
11.ಬಣ್ಣದ ದಾರಗಳಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
13.ಹಸುವಿನ ಬಳಿಯಿರುವ ಎಳೆಮಗು (4)
17.ಇದು ಕೊಬ್ಬಿದ ಆನೆ (4)
18.ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ
1.ಸುಲಭವಾಗಿ ಬಿಡಿಸಲಾರದ ಗಂಟು (3)
2.ಮಾವನವರ ಆದಾಯ !(4)
3.ಈತ ಕಡಿಮೆ ಆಯುಸ್ಸುಳ್ಳವನು (3)
5.ಪರವಶನಾಗಿರುವಾಗ ಆಧೀನತೆ (2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
9.ನಡುವೆಯೇ ಆರಂಭವಾಗಿರುವ ಕಂಪನ (3)
10.ವಿವಾದವಿಲ್ಲದೇ ನಡೆದಿರುವ ಮದುವೆ (3)
12.ಎಳ್ಳು ನೀರು ಬಿಡುವಿಕೆ (4)
14.ಮಫ್ತಿಯಲ್ಲಿದ್ದಾಗ ಅವರಿಸಿದ ಗಾಢನಿದ್ರೆ (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)

1		2	■	■	■	■	3	■
	■	4			5	■		■
	■		■	■	6			7
■	■	8		9	■	■	■	
10	■	■	■		■	■	■	
	■	■	■	11		12	■	■
13	14		15	■	■		■	16
■		■	17				■	
■		■	■	■	■	18		

5706ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಜಗಜಾಂತರ
4.ಸತ್ಯಾಗ್ರಹಿ 5.ಗಲಿಬಿಲಿ
7.ಕಡಿತ 10.ನಪಾಸು
12.ಹರಿದಂತ 13.ಬಾಲರವಿ
15.ಪ್ರವಾಸಿಮಂದಿರ

ಮೇಲಿಂದ ಕೆಳಕ್ಕೆ:
1.ಅಜಗರ 2.ರಸ
3.ಬಹಿಷ್ಕಾರ 6.ಬಿಗುಮಾನ
7.ಕಡಸು 8.ತರಕಾರಿ
9.ಆಜೂಬಾಜು
11.ಮತದಾರ 14.ವಿಪ್ರ

ಸುಡೊಕು 6092

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6091 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

2025ಕ್ಕೆ ಸ್ಟಾರ್ಟ್‌ಅಪ್ ಇಂಡಿಯಾ ಸ್ಕೀಮ್ ಮುಕ್ತಾಯ

ನವೋದ್ಯಮಕ್ಕೆ ಹೆಚ್ಚಿನ ಅನುದಾನ ನಿರೀಕ್ಷೆ



ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರ್ಕಾರ ಮಂಡಿಸಲಿರುವ 2024-25ನೇ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ನವೋದ್ಯಮಗಳಿಗೆ (ಸ್ಟಾರ್ಟ್‌ಅಪ್) ಹೆಚ್ಚಿನ ಅನುದಾನವನ್ನು ನಿರೀಕ್ಷಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

2021ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರವು 'ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಸ್ಕೀಮ್' (ಎಸ್‌ಐಎಸ್‌ಎಫ್‌ಎಸ್) ರೂಪಿಸಿತ್ತು. ನವೋದ್ಯಮಗಳು ಮಾರುಕಟ್ಟೆ ಪ್ರವೇಶಿಸಲು ಅನುವಾಗುವಂತೆ ₹50 ಲಕ್ಷದವರೆಗೆ ಈ ಯೋಜನೆಯಡಿ ಆರ್ಥಿಕ ನೆರವು ಒದಗಿಸಲಾಗುತ್ತಿದೆ. ಇದಕ್ಕಾಗಿ ₹945 ಕೋಟಿ ಮೀಸಲಿಟ್ಟಿದ್ದು, 2025ಕ್ಕೆ ಯೋಜನೆಯು ಮುಕ್ತಾಯ ಗೊಳ್ಳಲಿದೆ. ಹಾಗಾಗಿ, ಸಚಿವಾಲಯವು ಹೆಚ್ಚಿನ ಅನುದಾನ ಕೋರಿ ಮತ್ತೆ ಪ್ರಸ್ತಾವ ಸಲ್ಲಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಲ್ಕು ವರ್ಷಗಳಲ್ಲಿ ಹಂತ ಹಂತವಾಗಿ ನವೋದ್ಯಮಗಳಿಗೆ ಈ ಯೋಜನೆಯಡಿ ಹಣ ಹಂಚಿಕೆಯಾಗಲಿದೆ. ಆರಂಭಿಕ ಹಂತದಲ್ಲಿ ನವೋದ್ಯಮಿಗಳಿಗೆ ಉದ್ಯಮ ಸ್ಥಾಪಿಸಲು ಇದರಿಂದ ನೆರವಾಗಲಿದೆ.

ಪ್ರಸ್ತುತ ದೇಶದಲ್ಲಿ 1.17 ಲಕ್ಷ ನೋಂದಾಯಿತ ನವೋದ್ಯಮಗಳಿವೆ. ಸರ್ಕಾರದ ನಿಯಮಾವಳಿ ಅನ್ವಯ ಆದಾಯ ತೆರಿಗೆ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯುತ್ತಿವೆ. 12.42 ಲಕ್ಷ ನೇರ ಉದ್ಯೋಗಾವಕಾಶ ಕಲ್ಪಿಸಿವೆ.

ಅಲ್ಲದೆ, ಡೀಪ್ ಟೆಕ್ ನವೋದ್ಯಮಗಳಿಗೆ ಪೂರಕವಾದ ನೀತಿ ರೂಪಿಸಲು ಸಚಿವಾಲಯವು ನಿರ್ಧರಿಸಿದೆ.

ದೇಶದಲ್ಲಿ ಹೊಸ ಆವಿಷ್ಕಾರಗಳಿಗೆ ಉತ್ತೇಜನ ನೀಡುವ ಮೂಲಕ ಆರ್ಥಿಕತೆ ಬೆಳವಣಿಗೆಯನ್ನು ಮತ್ತಷ್ಟು ಸದೃಢಗೊಳಿಸುವುದೇ ಈ ನೀತಿಯ ಆಶಯವಾಗಿದೆ.

ದುಡ್ಡು ವೇಗವಾಗಿ ಬೆಳೆಸುವುದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಲು ದೊಡ್ಡ ಮೊತ್ತದ ಹಣ ಬೇಕು ಎಂದು ಅನೇಕರು ಭಾವಿಸುತ್ತಾರೆ. ಆದರೆ, ಕೇವಲ ₹100ರಿಂದ ₹500 ಇದ್ದರೂ ಸಾಕು ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಶುರು ಮಾಡಬಹುದು.

ಸಣ್ಣ ಮೊತ್ತದ ಹೂಡಿಕೆಯಿಂದಲೂ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತ ಗಳಿಸಿಕೊಳ್ಳಬಹುದು. ಪ್ರತಿ ತಿಂಗಳು ₹6 ಸಾವಿರ ಎಸ್‌ಐಪಿ ಮಾಡುವ ಮೂಲಕ ₹10 ಕೋಟಿ ಗಳಿಕೆಯ ಗುರಿ ತಲುಪಬಹುದು. ಇದು ಅಸಾಧ್ಯದ ಮಾತು ಅಂತ ನಿಮಗೆ ಅನಿಸಬಹುದು. ಆದರೆ, ಮ್ಯೂಚುಯಲ್ ಫಂಡ್‌ನಲ್ಲಿ ಬೇಗ ಹೂಡಿಕೆ ಆರಂಭಿಸಿ ಶಿಸ್ತುಬದ್ಧವಾಗಿ ಹೂಡಿಕೆ ಮೊತ್ತವನ್ನು ಪ್ರತಿವರ್ಷ ಹೆಚ್ಚಳ ಮಾಡುತ್ತಾ ಹೋದರೆ ವೇಗವಾಗಿ ದುಡ್ಡನ್ನು ಬೆಳೆಸಲು ಸಾಧ್ಯ.

ಬೇಗ ಹೂಡಿಕೆ ಆರಂಭಿಸಿದರೆ ಆಗುವ ಲಾಭವೇನು?: ಎಷ್ಟು ಬೇಗ ಹೂಡಿಕೆ ಸಾಧ್ಯವೋ ಅಷ್ಟು ಬೇಗ ಹೂಡಿಕೆ ಆರಂಭಿಸುವುದರಿಂದ ಹಣಕಾಸಿನ ಗುರಿಗಳನ್ನು ಸುಲಭವಾಗಿ ತಲುಪುವುದು ಸಾಧ್ಯವಾಗುತ್ತದೆ. ಹೂಡಿಕೆಯನ್ನು ದೀರ್ಘಾವಧಿಗೆ ಮಾಡಿದಾಗ ಹಣದ ಬೆಳವಣಿಗೆಗೆ ಕಾಲಾವಕಾಶ ಸಿಗುವುದರಿಂದ ಕಡಿಮೆ ಮೊತ್ತದ ಹೂಡಿಕೆಯಿಂದಲೂ ದೊಡ್ಡ ಮೊತ್ತ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಉದಾಹರಣೆಗೆ 25 ವರ್ಷದ ರಾಮು ಎನ್ನುವ ವ್ಯಕ್ತಿ ಹೂಡಿಕೆ ಮಾಡಿ 60ನೇ ವಯಸ್ಸಿನ ಒಳಗಾಗಿ ₹10 ಕೋಟಿ ಗಳಿಸುವ ಗುರಿ ಹೊಂದಿರುತ್ತಾನೆ. ಆತ ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಲು ತೀರ್ಮಾನಿಸಿದ್ದು, ಪ್ರತಿ ವಾರ್ಷಿಕ ಶೇ 12ರಷ್ಟು ಗಳಿಕೆ ನಿರೀಕ್ಷಿಸಿದ್ದಾನೆ. ಈ ಲೆಕ್ಕಾಚಾರದಂತೆ ರಾಮು ₹10 ಕೋಟಿ ಗುರಿ ತಲುಪಬೇಕಾದರೆ ಮುಂದಿನ 35 ವರ್ಷಗಳ ಕಾಲ ಪ್ರತಿ ತಿಂಗಳು ₹15,500 ಎಸ್‌ಐಪಿ ಹೂಡಿಕೆ ಮಾಡಬೇಕಾಗುತ್ತದೆ.

ರಾಮನ ಸ್ನೇಹಿತ ಶ್ಯಾಮ 30 ವರ್ಷದವನಾಗಿದ್ದು, ಆತನೂ ತನ್ನ 60ನೇ ವಯಸ್ಸಿನ ವೇಳೆಗೆ ₹10 ಕೋಟಿ ಗಳಿಸುವ ಗುರಿ ಇಟ್ಟುಕೊಂಡಿದ್ದಾನೆ. ಶ್ಯಾಮ ಸಹ ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಲು ತೀರ್ಮಾನಿಸಿದ್ದು, ಶೇ 12ರ ಗಳಿಕೆ ಅಂದಾಜಿಸಿದ್ದಾನೆ. ಈ ಪ್ರಕಾರ ಶ್ಯಾಮ ಪ್ರತಿ ತಿಂಗಳು ಮುಂದಿನ 30 ವರ್ಷಗಳ ಕಾಲ ಮ್ಯೂಚುಯಲ್ ಫಂಡ್ ಎಸ್‌ಐಪಿಯಲ್ಲಿ ₹28,613 ತೊಡಗಿಸಬೇಕಾಗುತ್ತದೆ. ಆಗ ಮಾತ್ರ ₹10 ಕೋಟಿ ಗುರಿ ಮುಟ್ಟಲು ಸಾಧ್ಯವಾಗುತ್ತದೆ.

ಅರೆ! ರಾಮು ಪ್ರತಿ ತಿಂಗಳು ₹15,500 ಹೂಡಿಕೆ ಮಾಡಿದರೆ ಸಾಕು ₹10 ಕೋಟಿಯ ಗುರಿ ತಲುಪುತ್ತಾನೆ. ಆದರೆ, ಶ್ಯಾಮ ಏಕೆ ಪ್ರತಿ ತಿಂಗಳು ₹28,613 ಹೂಡಿಕೆ ಮಾಡಬೇಕು ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಆದರೆ, ಇಲ್ಲಿ ಗಮನಿಸಬೇಕಾದ ಅಂಶ ಹೂಡಿಕೆಯ ಸಮಯ. ರಾಮು 25ನೇ ವಯಸ್ಸಿಗೆ ಹೂಡಿಕೆ ಶುರು ಮಾಡುತ್ತಾನೆ. ಶ್ಯಾಮ 30ನೇ ವಯಸ್ಸಿಗೆ ಹೂಡಿಕೆ ಆರಂಭಿಸುತ್ತಾನೆ. ರಾಮನಿಗೆ ಹೂಡಿಕೆಗೆ 35 ವರ್ಷ ಸಮಯ ಸಿಕ್ಕರೆ ಶ್ಯಾಮನಿಗೆ ಬರೀ 30 ವರ್ಷ ಸಮಯ ಸಿಗುತ್ತದೆ.

ಹೆಚ್ಚು ಹೂಡಿಕೆ ಸಮಯವಿದ್ದಾಗ ಹೂಡಿಕೆ ಮೊತ್ತ ಕಡಿಮೆಯಿದ್ದರೂ ದೊಡ್ಡ ಮೊತ್ತ ಪೇರಿಸಿ ಹೂಡಿಕೆಯ ಗುರಿ ಸೇರಲು ಸಾಧ್ಯವಾಗುತ್ತದೆ. ಆದರೆ, ಹೂಡಿಕೆ ಸಮಯ ಕಡಿಮೆಯಾದರೆ ಹೂಡಿಕೆ ಗುರಿ ತಲುಪಲು ದೊಡ್ಡ ಮೊತ್ತವನ್ನು ತೊಡಗಿಸಬೇಕಾಗುತ್ತದೆ. ಒಟ್ಟಾರೆಯಾಗಿ ಹೂಡಿಕೆ ಮಾಡಿದ ಹಣದ ಬೆಳವಣಿಗೆಗೆ ಎಷ್ಟು ಸಮಯ ಸಿಗುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಹೂಡಿಕೆ ಮಾಡಲು ದೊಡ್ಡ ಮೊತ್ತವಿಲ್ಲದಿದ್ದರೆ ಏನು ಮಾಡಬೇಕು?: ಮೇಲಿನ ಉದಾಹರಣೆಯಂತೆ 25 ವರ್ಷ ವಯಸ್ಸಿನ ರಾಮು ನಿವೃತ್ತಿ ವೇಳೆಗೆ ₹10 ಕೋಟಿ ಗಳಿಸಲು ಮುಂದಿನ 35 ವರ್ಷಗಳ ಕಾಲ ಪ್ರತಿ ತಿಂಗಳು ₹15,500 ತೊಡಗಿಸಬೇಕಾಗುತ್ತದೆ. 30 ವರ್ಷದ ಶ್ಯಾಮ ನಿವೃತ್ತಿ ಜೀವನಕ್ಕೆ ₹10 ಕೋಟಿ ಗಳಿಸಲು ಮುಂದಿನ 30 ವರ್ಷಗಳ ಕಾಲ ಪ್ರತಿ ತಿಂಗಳು ₹28,613 ಹೂಡಬೇಕಾಗುತ್ತದೆ. ಆದರೆ, ಎಷ್ಟೋ ಮಂದಿಗೆ ಪ್ರತಿ ತಿಂಗಳು ₹10 ಸಾವಿರ, ₹15 ಸಾವಿರ, ₹20 ಸಾವಿರ ಹೂಡುವುದೂ ಕಷ್ಟವಾಗುತ್ತದೆ. ಅಂತಹವರು ಸಣ್ಣ ಮೊತ್ತದಿಂದ ಮ್ಯೂಚುಯಲ್ ಫಂಡ್ ಹೂಡಿಕೆ ಆರಂಭಿಸಿ ಪ್ರತಿವರ್ಷ ಶೇ 10ರಿಂದ ಶೇ 15ರಷ್ಟು ಹೂಡಿಕೆ ಮೊತ್ತವನ್ನು ಹೆಚ್ಚಿಸಿಕೊಳುತ್ತಾ ಹೋಗಬೇಕು. ಹೀಗೆ ಮಾಡುವುದರಿಂದಲೂ ಸಹಿತ ನಿಗದಿತ ಹಣಕಾಸಿನ ಗುರಿ ತಲುಪಲು ಸಾಧ್ಯವಾಗುತ್ತದೆ. ಅದು ಹೇಗೆ ಎನ್ನುವುದನ್ನು ಮುಂದೆ ಓದಿ.

₹6 ಸಾವಿರದಿಂದ ₹10 ಕೋಟಿ ಗಳಿಕೆ ಹೇಗೆ?: 25 ವರ್ಷದ ವ್ಯಕ್ತಿ ಪ್ರತಿ ತಿಂಗಳು ₹6 ಸಾವಿರವನ್ನು ಮ್ಯೂಚುಯಲ್ ಫಂಡ್ ಎಸ್‌ಐಪಿಯಲ್ಲಿ ತೊಡಗಿಸಲು ಆರಂಭಿಸಿ ಪ್ರತಿವರ್ಷ ಎಸ್‌ಐಪಿ ಹೂಡಿಕೆ ಮೊತ್ತದಲ್ಲಿ ಶೇ 10ರಷ್ಟು ಹೆಚ್ಚಳ ಮಾಡುತ್ತಾ 60 ವರ್ಷಗಳ ವರೆಗೆ ಹೂಡಿಕೆ ಮಾಡಿದರೆ ₹10 ಕೋಟಿ ಗಳಿಸಲು ಸಾಧ್ಯ.

ಈ ಲೆಕ್ಕಾಚಾರದಂತೆ ಮೊದಲನೇ ವರ್ಷ ಪ್ರತಿ ತಿಂಗಳು ಎಸ್‌ಐಪಿ ಹೂಡಿಕೆ ಮೊತ್ತ ₹6,000 ಇರುತ್ತದೆ. ಎರಡನೇ ವರ್ಷ ₹6,600, ಮೂರನೇ ವರ್ಷ ₹7,260 ಆಗುತ್ತದೆ. ಎಸ್‌ಐಪಿ ಹೂಡಿಕೆ ಮೊತ್ತ ಹೆಚ್ಚಳವಾಗುತ್ತಾ ಸಾಗುವುದನ್ನು ಮ್ಯೂಚುಯಲ್ ಫಂಡ್ ಪರಿಭಾಷೆಯಲ್ಲಿ ಸ್ಟೇಪ್ ಅಪ್ ಎಸ್‌ಐಪಿ ಎನ್ನಲಾಗುತ್ತದೆ. ಎಲ್ಲ ಮ್ಯೂಚುಯಲ್ ಫಂಡ್‌ಗಳು ಸ್ಟೇಪ್ ಅಪ್ ಎಸ್‌ಐಪಿ ಅನುಕೂಲ ಒದಗಿಸುತ್ತವೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಏರಿಳಿತ ಕಂಡ ಷೇರು ಸೂಚ್ಯಂಕಗಳು

ಜೂನ್ 7ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಜಿಗಿತ ಕಂಡಿವೆ. 76,693 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.69ರಷ್ಟು ಗಳಿಕೆ ದಾಖಲಿಸಿದೆ. 23,290 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 3.37ರಷ್ಟು ಹೆಚ್ಚಳ ಕಂಡಿದೆ.

ಮತಗಟ್ಟೆ ಸಮೀಕ್ಷೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಲಾಗಿತ್ತು. ಆದರೆ, ಬಿಜೆಪಿ ಸರಳ ಬಹುಮತ ಕೂಡ ಗಳಿಸದ ಕಾರಣ ಮಾರುಕಟ್ಟೆ ಮಹಾಪತನ ದಾಖಲಿಸಿತ್ತು. ಆದರೆ, ಬಿಜೆಪಿಯು ಎನ್‌ಡಿಎ ಕೂಟದ ಇತರ ಸದಸ್ಯ ಪಕ್ಷಗಳೊಂದಿಗೆ ಸೇರಿಕೊಂಡು ಸರ್ಕಾರ ರಚಿಸಲಿದೆ ಎನ್ನುವುದು ಖಾತರಿ ಆಗುತ್ತಿದ್ದಂತೆ ಸೂಚ್ಯಂಕಗಳು ಮತ್ತೆ ಪುಟಿದೆದ್ದವು.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.41ರಷ್ಟು ಕುಸಿತ ಕಂಡಿದೆ. ಉಳಿದಂತೆ ಎಲ್ಲಾ ವಲಯಗಳ ಸೂಚ್ಯಂಕಗಳು ಏರಿಕೆ ಕಂಡಿವೆ. ಮಾಹಿತಿ ತಂತ್ರಜ್ಞಾನ ಶೇ 8.6, ಎಫ್‌ಎಂಸಿಜಿ ಶೇ 7.11, ವಾಹನ ವಲಯ ಶೇ 6.83, ಮಾಧ್ಯಮ ಶೇ 5.36, ರಿಯಲ್ ಎಸ್ಟೇಟ್ ಶೇ 4.91, ಫಾರ್ಮಾ ಶೇ 4.16, ಫೈನಾನ್ಸ್ ಶೇ 2.06, ಬ್ಯಾಂಕ್ ಶೇ 1.67 ಮತ್ತು ಲೋಹ ವಲಯ ಶೇ 1.13ರಷ್ಟು ಗಳಿಸಿಕೊಂಡಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 13.99, ಟೆಕ್ ಮಹೀಂದ್ರ ಶೇ 12.1, ವಿಪ್ರೊ ಶೇ 10.67, ಹಿಂದೂಸ್ತಾನ್ ಯೂನಿಲಿವರ್ ಶೇ 10.65, ಇನ್ಫೊಸಿಸ್ ಶೇ 9.04, ಹೀರೊ ಮೋಟೊಕಾರ್ಪ್ ಶೇ 8.8, ಎಲ್‌ಟಿಐ ಮೈಂಡ್‌ಟ್ರೀ ಶೇ 8.18, ಬಜಾಜ್ ಫೈನಾನ್ಸ್ ಶೇ 7.28 ಮತ್ತು ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಶೇ 7.06ರಷ್ಟು ಏರಿಕೆಯಾಗಿದೆ.



ಅದಾನಿ ಎಂಟರ್‌ಪ್ರೈಸಸ್ ಶೇ 5.65, ಬಿಪಿಸಿಎಲ್ ಶೇ 4.38, ಅದಾನಿ ಪೋರ್ಟ್ಸ್ ಶೇ 4.09, ಎಲ್ ಆ್ಯಂಡ್ ಟಿ ಶೇ 3.67, ಕೋಲ್ ಇಂಡಿಯಾ ಶೇ 2.48, ಒಎನ್‌ಜಿಸಿ ಶೇ 1.57, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 1.31, ಪವರ್ ಗ್ರಿಡ್ ಶೇ 0.18 ಮತ್ತು ಎಸ್‌ಬಿಐ ಶೇ 0.02ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಧ್ಯಾನಿ ಟ್ರೇಡ್ ವೆಂಚರ್ಸ್, ಗೋ ಡಿಜಿಟ್ ಜನರಲ್ ಇನ್ಶೂರೆನ್ಸ್, ಎವಿಲ್ ಚಾಂಪ್ ದಾನಿ ಇಂಡಸ್ಟ್ರೀಸ್ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಷೇರುಪೇಟೆಯಲ್ಲಿ ಸಕಾರಾತ್ಮಕ ವಾತಾವರಣವಿದ್ದರೂ ಏರಿಳಿತದ ಅನಿಶ್ಚಿತತೆ ಇದ್ದೇ ಇರುತ್ತದೆ. ಸೂಚ್ಯಂಕಗಳು ಕುಸಿತ ಕಂಡಾಗ ಆಂತರಿಕ ಮೌಲ್ಯ ಹೊಂದಿರುವ ಉತ್ತಮ ಕಂಪನಿಗಳ ಮೇಲೆ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು.

ಜೂನ್ ಮೊದಲ ವಾರದಲ್ಲಿ ₹14,800 ಕೋಟಿ ಬಂಡವಾಳ ಹಿಂತೆಗೆತ

ಎಫ್‌ಪಿಐ ಹೊರಹರಿವು ಅಬಾಧಿತ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಪ್ರಸಕ್ತ ತಿಂಗಳ ಮೊದಲ ವಾರದಲ್ಲಿ (ಜೂನ್ 7ರವರೆಗೆ) ಭಾರತದ ಷೇರು ಮಾರುಕಟ್ಟೆಗಳಿಂದ ₹14,800 ಕೋಟಿ ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ಲೋಕಸಭಾ ಚುನಾವಣಾ ಫಲಿತಾಂಶ ಹಾಗೂ ಚೀನಾದ ಷೇರು ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದೇ ಇಷ್ಟು ಪ್ರಮಾಣದಲ್ಲಿ ಬಂಡವಾಳದ ಹೊರಹರಿವಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಚುನಾವಣಾ ಫಲಿತಾಂಶದ ಅನಿಶ್ಚಿತತೆಯಿಂದಾಗಿ ಮೇ ತಿಂಗಳಿನಲ್ಲಿ ₹25,586 ಕೋಟಿ ಬಂಡವಾಳ ಹಿಂತೆಗೆದುಕೊಂಡಿದ್ದರು. ಏಪ್ರಿಲ್‌ನಲ್ಲಿ ಭಾರತವು ಮಾರಿಷಸ್ ಜೊತೆಗಿನ ತೆರಿಗೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೆಲವು ನಿಯಮಾವಳಿಗಳಲ್ಲಿ ಬದಲಾವಣೆ ಮಾಡಿತ್ತು. ಹಾಗಾಗಿ, ಆ ತಿಂಗಳಿನಲ್ಲಿ ₹8,700 ಕೋಟಿ ಹಿಂಪಡೆದಿದ್ದರು.




ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಸತತ 8ನೇ ಬಾರಿ ಬಡ್ಡಿದರ ಕಡಿತಕ್ಕೆ ಮುಂದಾಗಿಲ್ಲ. ಇದೇ ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣದ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಚುನಾವಣೋತ್ತರ ಸಮೀಕ್ಷೆಯಲ್ಲಿ ಬಿಜೆಪಿ ಅತಿಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲಿದ್ದು, ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಹೇಳಲಾಗಿತ್ತು. ಆದರೆ, ಸಮೀಕ್ಷೆಯಲ್ಲಿ ಹೇಳಿದ್ದಷ್ಟು ಸ್ಥಾನ ಪಡೆಯುವಲ್ಲಿ ಬಿಜೆಪಿ ವೈಫಲ್ಯ ಕಂಡಿತು. ಇದು ಮಾರುಕಟ್ಟೆ ಮೇಲೆ ಪರಿಣಾಮ ಬೀರಿದ್ದರಿಂದ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಾಯಿತು' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ಸ್ ರಿಸರ್ಚ್ ಇಂಡಿಯಾದ ಸಹ ನಿರ್ದೇಶಕ (ಸಂಶೋಧನಾ ವಿಭಾಗ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

'ಚೀನಾದ ಮಾರುಕಟ್ಟೆಗಳ ಬಗ್ಗೆ ವಿದೇಶಿ ಹೂಡಿಕೆದಾರರು ತಳೆದಿದ್ದ ನಿರಾಶಾವಾದದ ನಿಲುವು ಸದ್ಯ ಮರೆಯಾಗಿದೆ. ಮತ್ತೊಂದೆಡೆ, ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿನ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯದಲ್ಲಿ ಏರಿಕೆಯಾಗಿದೆ. ಹಾಗಾಗಿ, ಆ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹525
12 ಕ್ಕೆ	₹72
ಮೈಸೂರು	
100ಕ್ಕೆ	₹545



ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹309-495
ದ್ವಿತಳಿ (ಬಿ.ವಿ)	₹333-611



8 ಕಂಪನಿಗಳ ಎಂ–ಕ್ಯಾಪ್ ₹3.28 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಏರಿಕೆ ಕಂಡಿದ್ದರಿಂದ ಬಿಎಸ್‌ಇಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಮಾರುಕಟ್ಟೆ ಮೌಲ್ಯವು ₹3.28 ಲಕ್ಷ ಕೋಟಿ ಏರಿಕೆಯಾಗಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ₹80,828 ಕೋಟಿ ಗಳಿಸಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ₹14.08 ಲಕ್ಷ ಕೋಟಿ ದಾಟಿದೆ.

ಹಿಂದೂಸ್ತಾನ್ ಯೂನಿಲಿವರ್ ₹58,258 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹54,024 ಕೋಟಿ, ಇನ್ಫೊಸಿಸ್ ₹52,770 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹32,241 ಕೋಟಿ, ಭಾರ್ತಿ ಏರ್‌ಟೆಲ್ ₹32,080 ಕೋಟಿ, ಐಟಿಸಿ ₹16,167 ಕೋಟಿ ಹಾಗೂ ಐಸಿಐಸಿಐ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯಕ್ಕೆ ₹1,745 ಕೋಟಿ ಸೇರ್ಪಡೆಯಾಗಿದೆ.

ಎಲ್‌ಐಸಿ ₹12,080 ಕೋಟಿ ಮತ್ತು ಎಸ್‌ಬಿಐ ಮಾರುಕಟ್ಟೆ ಮೌಲ್ಯ ₹178 ಕೋಟಿ ಇಳಿಕೆ ಕಂಡಿದೆ.



ಲಂಗರು

ಜೂನ್-ಜುಲೈ ತಿಂಗಳು ಸಮುದ್ರದಲ್ಲಿ ಮೀನುಗಳು ಮೊಟ್ಟೆ ಇಟ್ಟು ಸಂತಾನೋತ್ಪತ್ತಿ ಮಾಡುವ ಸಮಯವಾಗಿದೆ. ಹಾಗಾಗಿ, ಆಳ ಸಮುದ್ರದಲ್ಲಿ ಮೀನುಗಾರಿಕೆಗೆ ನಿಷೇಧ ಹೇರಿರುವುದರಿಂದ ಕೇರಳದ ಕೋಯಿಕ್ಕೋಡ್ ಜಿಲ್ಲೆಯ ಪುತಿಯಪ್ಪ ಬಂದರಿನಲ್ಲಿ ದೋಣಿಗಳು ಲಂಗರು ಹಾಕಿವೆ –ಪಿಟಿಐ ಚಿತ್ರ



ಪ್ಯಾಲೆಸ್ಟೀನ್‌ನ ಬಂಡುಕೋರರ ವಶಕ್ಕೆ ಸಿಲುಕಿರುವ ಇಸ್ರೇಲ್ ಪ್ರಜೆಗಳ ಸಂಬಂಧಿಕರು ಮತ್ತು ಬೆಂಬಲಿಗರು ಟೆಲ್ ಅವಿವ್ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಪೊಲೀಸರು ಜಲಫಿರಂಗಿ ಬಳಸಿ ಚದುರಿಸಿದರು – ಎಎಫ್‌ಪಿ ಚಿತ್ರ

274 ಪ್ಯಾಲೆಸ್ಟೀನಿಯನ್ನರ ಹತ್ಯೆ

ಡೀರ್ ಅಲ್-ಬಲಾಹ್ (ಎಪಿ): ಇಸ್ರೇಲ್ ಸೇನಾಪಡೆಗಳು ನಡೆಸಿದ ದಾಳಿಯಲ್ಲಿ 274 ಪ್ಯಾಲೆಸ್ಟೀನ್ ಪ್ರಜೆಗಳು ಹತ್ಯೆಯಾಗಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಈ ಮೂಲಕ ಹಮಾಸ್ ಬಳಿಯಿದ್ದ ನಾಲ್ವರು ಒತ್ತೆಯಾಳುಗಳನ್ನು ಇಸ್ರೇಲ್ ರಕ್ಷಿಸಿದೆ ಎಂದು ಗಾಜಾದಲ್ಲಿರುವ ಆರೋಗ್ಯ ಇಲಾಖೆ ಭಾನುವಾರ ತಿಳಿಸಿದೆ.

ನಾಲ್ವರು ಒತ್ತೆಯಾಳುಗಳನ್ನು ರಕ್ಷಿಸಿದ ಕಾರಣಕ್ಕಾಗಿ ಪ್ಯಾಲೆಸ್ಟೀನ್ ಪ್ರಜೆಗಳನ್ನು ಕೊಂದು ಹಾಕಿದ ಘಟನೆಯನ್ನು ಇಸ್ರೇಲ್ ಸಂಭ್ರಮಿಸಿದೆ ಎಂದು ವರದಿಯಾಗಿದೆ.

ಇಸ್ರೇಲ್ ಸೇನೆ ಶನಿವಾರ ನಡೆಸಿದ ಈ ದಾಳಿಯ ಬಳಿಕ ಗಾಜಾದಲ್ಲಿರುವ ಆಸ್ಪತ್ರೆಗಳು ಗಾಯಗೊಂಡವರಿಂದ ತುಂಬಿ ಹೋಗಿದ್ದವು. ಇದರಿಂದಾಗಿ ವೈದ್ಯಕೀಯ ಸಿಬ್ಬಂದಿ ಹೈರಾಣಾಗುವಂತೆ ಆಯಿತು ಎಂದು ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಈ ಕುರಿತು ಪ್ರತಿಕ್ರಿಯಿಸಿರುವ ಇಸ್ರೇಲ್ ಸೇನಾಪಡೆಯು, 'ನಮ್ಮ ಸೇನಾ ಪಡೆಗಳಿಗೆ ಬೆದರಿಕೆಯೊಡ್ಡಿದ್ದ ಪ್ರದೇಶದ ಮೇಲಷ್ಟೇ ದಾಳಿ ನಡೆಸಲಾಗಿದೆ. ಈ ರಕ್ಷಣಾ ಕಾರ್ಯಾಚರಣೆಯಲ್ಲಿ ನಮ್ಮ ವಿಶೇಷ ಪಡೆಯ ಅಧಿಕಾರಿಯೊಬ್ಬರು ಮೃತಪಟ್ಟಿದ್ದಾರೆ' ಎಂದು ಹೇಳಿದೆ.

ಪಾಕಿಸ್ತಾನ: ಮತ್ತೆ ಪೋಲಿಯೊ ಪ್ರಕರಣ ದೃಢ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಈ ವರ್ಷದ ಐದನೇ ಪೋಲಿಯೊ ಪ್ರಕರಣ ದೃಢಪಟ್ಟಿದ್ದು, ಪೋಲಿಯೊ ಪೀಡಿತ ಮಗುವೊಂದು ಮೃತಪಟ್ಟ ಹದಿನೈದು ದಿನಗಳ ಬಳಿಕ ಈ ಬೆಳವಣಿಗೆ ನಡೆದಿದೆ. ಈ ಸೋಂಕು ನಿರ್ಮೂಲನೆಗೆ ಪಾಕಿಸ್ತಾನ ಸರ್ಕಾರ ನಡೆಸುತ್ತಿರುವ ಪ್ರಯತ್ನಕ್ಕೆ ಇದರಿಂದ ಹಿನ್ನಡೆ ಉಂಟಾದಂತಾಗಿದೆ.

ಬಲೂಚಿಸ್ತಾನದ ಕ್ವೆಟ್ಟಾದಲ್ಲಿ ಎರಡು ವರ್ಷದ ಮಗುವೊಂದು ಮೇ 22 ರಂದು ಮೃತಪಟ್ಟಿತ್ತು. ಪೋಲಿಯೊ ಸೋಂಕಿನಿಂದ ಮಗು ಮೃತಪಟ್ಟಿದೆ ಎಂಬುದು ದೃಢಪಟ್ಟಿರುವುದಾಗಿ 'ಡಾನ್' ದಿನಪತ್ರಿಕೆ ವರದಿ ಮಾಡಿದೆ.

ಪೋಲಿಯೊ ಲಸಿಕೆ ಅಭಿಯಾನದ ಅವಧಿಯಲ್ಲಿ ಮಗು ಲಸಿಕೆ ಪಡೆದು-ಕೊಂಡಿರಲಿಲ್ಲ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಬಲೂಚಿಸ್ತಾನ ಪ್ರಾಂತ್ಯದಲ್ಲಿ ಈ ವರ್ಷ ನಾಲ್ಕು ಪೋಲಿಯೊ ಪ್ರಕರಣಗಳು ದೃಢಪಟ್ಟಿವೆ. ಜೂನ್ 1ರಂದು ಸಿಂಧ್ ಪ್ರಾಂತ್ಯದ ಮಗುವಿನಲ್ಲಿ ಪೋಲಿಯೊ ಸೋಂಕು ಕಂಡುಬಂದಿತ್ತು.






ನ್ಯೂಯಾರ್ಕ್‌ನಲ್ಲಿ ಭಾನುವಾರ ನಡೆದ ಭಾರತ –ಪಾಕಿಸ್ತಾನ ನಡುವಿನ ಪಂದ್ಯವನ್ನು ವೀಕ್ಷಿಸಲು ಸೇರಿದ್ದ ಉಭಯ ತಂಡಗಳ ಅಭಿಮಾನಿಗಳು (ಎಡ). ಭಾರತದ ತಂಡದ ಅಭಿಮಾನಿಗಳ ಸಂಭ್ರಮ –ಎಎಫ್‌ಪಿ ಚಿತ್ರಗಳು

ಭಾರತ ತಂಡಕ್ಕೆ ರೋಚಕ ಜಯ • ಮಿಂಚಿದ ರಿಷಭ್ ಪಂತ್ • ರೋಹಿತ್ ಬಳಗಕ್ಕೆ ಸತತ ಎರಡನೇ ಗೆಲುವು

ಬೂಮ್ರಾ, ಪಾಂಡ್ಯ ದಾಳಿಗೆ ಪಾಕ್ ತತ್ತರ



ವಿಕೆಟ್ ಪಡೆದ ಸಂಭ್ರಮದಲ್ಲಿ ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ನ್ಯೂಯಾರ್ಕ್: ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಅವರ ಚಾಣಾಕ್ಷ ಬೌಲಿಂಗ್ ಮುಂದೆ ಪಾಕಿಸ್ತಾನ ತಂಡದ ಆಟ ನಡೆಯಲಿಲ್ಲ.

ನಾಸೌ ಕೌಂಟಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 6 ರನ್‌ಗಳಿಂದ ರೋಚಕ ಜಯ ಸಾಧಿಸಿತು. ಮಳೆಯಿಂದಾಗಿ ಸುಮಾರು ಒಂದು ಗಂಟೆಯಷ್ಟು ತಡವಾಗಿ ಪಂದ್ಯ ಆರಂಭವಾಯಿತು.

ಟಾಸ್ ಗೆದ್ದ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನಸೀಂ ಶಾ (21ಕ್ಕೆ3) ಮತ್ತು ಹ್ಯಾರಿಸ್ ರವೂಫ್ (21ಕ್ಕ3) ಅವರ ದಾಳಿಯ ಮುಂದೆ ಭಾರತ ತಂಡವು 19 ಓವರ್‌ಗಳಲ್ಲಿ 119 ರನ್‌ಗಳ ಸಾಧಾರಣ ಮೊತ್ತಕ್ಕೆ ಆಲೌಟ್ ಆಯಿತು. ರಿಷಭ್ ಪಂತ್ (42; 31ಎ) ಹಾಗೂ ಅಕ್ಷರ್ ಪಟೇಲ್ (20; 18ಎ) ಅವರಿಬ್ಬರು ಮಾತ್ರ ಹೆಚ್ಚು ರನ್ ಗಳಿಸಿದರು. ಉಳಿದ ಬ್ಯಾಟರ್‌ಗಳು ವಿಫಲರಾದರು.



ಭಾರತ ತಂಡದ ರಿಷಭ್ ಪಂತ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಆದರೆ ಚೆಂಡು ಹೆಚ್ಚು ಪುಟಿಯದೇ ಅನಿರೀಕ್ಷಿತ ಬೌನ್ಸ್ ಮತ್ತು ತಿರುವುಗಳಿಂದ ಬ್ಯಾಟರ್‌ಗಳಿಗೆ ಸವಾಲಾಗಿದ್ದ ಪಿಚ್‌ನಲ್ಲಿ ಭಾರತದ ಬೌಲರ್‌ಗಳೂ ಮಿಂಚಿದರು. ಗುರಿ ಬೆನ್ನಟ್ಟಿದ ಪಾಕ್ ತಂಡವನ್ನು ಕಟ್ಟಿಹಾಕಿದರು. ಬೂಮ್ರಾ (14ಕ್ಕೆ3) ಹಾಗೂ ಪಾಂಡ್ಯ (24ಕ್ಕೆ2) ಅವರ ಅಮೋಘ ಬೌಲಿಂಗ್‌ನಿಂದಾಗಿ ಪಾಕ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 113 ರನ್ ಗಳಿಸಲಷ್ಟೇ ಶಕ್ತವಾಯಿತು.

ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ ಪಾಕ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಆದರೆ ಐದನೇ ಓವರ್‌ನಲ್ಲಿ ಬೂಮ್ರಾ ಎಸೆತದಲ್ಲಿ ಬಾಬರ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ಈ ಹಂತದಲ್ಲಿ ಉಸ್ಮಾನ್ ಖಾನ್ ಮತ್ತು ರಿಜ್ವಾನ್ ಅವರ ಎರಡನೇ ವಿಕೆಟ್ ಜೊತೆಯಾಟದಲ್ಲಿ 31 ರನ್‌ಗಳು ಬಂದವು. ಆದರೆ ರನ್ ಗಳಿಕೆಯ ವೇಗ ಹೆಚ್ಚಿರಲಿಲ್ಲ. ಈ ಜೊತೆಯಾಟಕ್ಕೆ 11ನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ತಡೆಯೊಡ್ಡಿದರು. ಉಸ್ಮಾನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಇದಾದ ನಂತರ ಹಾರ್ದಿಕ್ ಪಾಂಡ್ಯ ಮತ್ತು ಬೂಮ್ರಾ ಅವರು ಪಾಕ್ ಬ್ಯಾಟಿಂಗ್ ಪಡೆಗೆ ದುಃಸ್ವಪ್ನದಂತೆ ಕಾಡಿದರು. 30 ರನ್‌ಗಳ ಅಂತರದಲ್ಲಿ ಪಾಕ್ ತಂಡವು 5 ವಿಕೆಟ್‌ಗಳನ್ನು ಕಳೆದುಕೊಂಡಿತು. ಅದರಲ್ಲೂ 15ನೇ ಓವರ್‌ನ ಮೊದಲ ಎಸೆತದಲ್ಲಿಯೇ ಬೂಮ್ರಾ ಅವರು ರಿಜ್ವಾನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ್ದು ಭಾರತದ ಗೆಲುವಿನ ಸಾಧ್ಯತೆ ಹೆಚ್ಚಿಸಿತು.

ಅಲ್ಲದೇ ವಿಕೆಟ್‌ಕೀಪರ್ ರಿಷಭ್ ಪಂತ್ ಅವರ ಚುರುಕಾದ ಆಟವೂ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿತು. ಅವರು ಪಡೆದ ಮೂರು ಕ್ಯಾಚ್‌ಗಳು ಗಮನ ಸೆಳೆದವು. ಟೂರ್ನಿಯಲ್ಲಿ ಭಾರತಕ್ಕೆ ಇದು ಎರಡನೇ ಗೆಲುವು.ಪಾಕ್ ತಂಡಕ್ಕೆ ಸತತ ಎರಡನೇ ಸೋಲು.

ಸ್ಕೋರ್ ಕಾರ್ಡ್

ಭಾರತ 119 (19 ಓವರ್‌ಗಳಲ್ಲಿ)
ರೋಹಿತ್ ಸಿ ಹ್ಯಾರಿಸ್ ಬಿ ಅಫ್ರಿದಿ 13 (12ಎ, 4X1, 6X1)
ಕೊಹ್ಲಿ ಸಿ ಉಸ್ಮಾನ್ ಬಿ ನಸೀಂ 4 (3ಎ, 4X1)
ಪಂತ್ ಸಿ ಬಾಬರ್ ಬಿ ಆಮಿರ್ 42 (31ಎ, 4X6)
ಅಕ್ಷರ್ ಬಿ ನಸೀಂ 20 (18ಎ, 4X2, 6X1)
ಸೂರ್ಯಕುಮಾರ್ ಸಿ ಆಮಿರ್ ಬಿ ಹ್ಯಾರಿಸ್ 7 (8ಎ, 4X1)
ಶಿವಂ ಸಿ ಮತ್ತು ಬಿ ನಸೀಂ 3 (9ಎ)
ಹಾರ್ದಿಕ್ ಸಿ ಇಫ್ತಿಕಾರ್ ಬಿ ಹ್ಯಾರಿಸ್ 7 (12ಎ, 4X1)
ಜಡೇಜ ಸಿ ಇಮಾದ್ ಬಿ ಆಮಿರ್ 0 (1ಎ)
ಅರ್ಷದೀಪ್ ರನ್‌ಔಟ್ (ಬಾಬರ್/ ರಿಜ್ವಾನ್) 9 (13ಎ, 4X1)
ಬೂಮ್ರಾ ಸಿ ಇಮಾದ್ ಬಿ ಹ್ಯಾರಿಸ್ 0 (1ಎ)
ಸಿರಾಜ್ ಔಟಾಗದೆ 7 (7ಎ)
ಇತರೆ: 7 (ಲೆಗ್‌ಬೈ 1, ವೈಡ್ 5, ನೋಬಾಲ್ 1)
ವಿಕೆಟ್ ಪತನ: 1-12 (ವಿರಾಟ್ ಕೊಹ್ಲಿ; 1.3), 2-19 (ರೋಹಿತ್ ಶರ್ಮಾ; 2.4), 3-58 (ಅಕ್ಷರ್ ಪಟೇಲ್; 7.4), 4-89 (ಸೂರ್ಯ ಕುಮಾರ್ ಯಾದವ್; 11.2), 5-95 (ಶಿವಂ ದುಬೆ; 13.2), 6-96 (ರಿಷಭ್ ಪಂತ್; 14.1), 7-96 (ರವೀಂದ್ರ ಜಡೇಜ; 14.2), 8-112 (ಹಾರ್ದಿಕ್ ಪಾಂಡ್ಯ;17.4), 9-112 (ಜಸ್‌ಪ್ರೀತ್ ಬೂಮ್ರಾ; 17.5), 10-119 (ಅರ್ಷದೀಪ್ ಸಿಂಗ್; 18.6)
ಬೌಲಿಂಗ್: ಶಹೀನ್ ಅಫ್ರಿದಿ 4-0-29-1, ನಸೀಂ ಶಾ 4-0-21-3, ಮೊಹಮ್ಮದ್ ಅಮೀರ್ 4-0-23-2, ಇಫ್ತಿಕಾರ್ ಅಹಮದ್ 1-0-7-0, ಇಮಾದ್ ವಾಸೀಂ 3-0-17-0, ಹ್ಯಾರಿಸ್ ರವೂಫ್ 3-0-21-3.

ಪಾಕಿಸ್ತಾನ 7ಕ್ಕೆ 113 (20 ಓವರ್‌ಗಳಲ್ಲಿ)
ರಿಜ್ವಾನ್ ಬಿ ಬೂಮ್ರಾ 31 (44ಎ, 4X1, 6X1)
ಬಾಬರ್ ಸಿ ಯಾದವ್ ಬಿ ಬೂಮ್ರಾ 13 (10ಎ, 4X2)
ಉಸ್ಮಾನ್ ಎಲ್‌ಬಿಡಬ್ಲ್ಯು ಬಿ ಪಟೇಲ್ 13 (15ಎ, 4X1)
ಫಖರ್ ಸಿ ಪಂತ್ ಬಿ ಪಾಂಡ್ಯ 13 (8ಎ, 4X1, 6X1)
ವಸೀಂ ಸಿ ಪಂತ್ ಬಿ ಅರ್ಷದೀಪ್ 15 (23ಎ, 4X1)
ಶಾದಾಬ್ ಸಿ ಪಂತ್ ಬಿ ಪಾಂಡ್ಯ 4 (7ಎ)
ಇಫ್ತಿಕರ್ ಸಿ ಅರ್ಷದೀಪ್ ಬಿ ಬೂಮ್ರಾ 5 (9ಎ)
ಶಾಹೀನ್ ಔಟಾಗದೇ 0 (1ಎ)
ನಸೀಂ ಔಟಾಗದೇ 10 (4ಎ, 4X2)
ಇತರೆ: 9 (ಲೆಗ್‌ಬೈ 4, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1-26 (ಬಾಬರ್ ಆಜಂ, 4.4), 2-57 (ಉಸ್ಮಾನ್ ಖಾನ್, 10.1), 3-73 (ಫಖರ್ ಜಮಾನ್, 12.2), 4-80 (ಮೊಹಮ್ಮದ್ ರಿಜ್ವಾನ್, 14.1), 5-88 (ಶಾದಾಬ್ ಖಾನ್, 16.3 ov), 6-102 (ಇಫ್ತಿಕರ್ ಅಹ್ಮದ್, 18.6), 7-102 (ಇಮಾದ್ ವಾಸೀಂ, 19.1)
ಬೌಲಿಂಗ್: ಅರ್ಷದೀಪ್ ಸಿಂಗ್ 4-0-31-1, ಮೊಹಮ್ಮದ್ ಸಿರಾಜ್ 4-0-19-0, ಜಸ್‌ಪ್ರೀತ್ ಬೂಮ್ರಾ 4-0-14-3, ಹಾರ್ದಿಕ್ ಪಾಂಡ್ಯ 4-0-24-2, ರವೀಂದ್ರ ಜಡೇಜ 2-0-10-0, ಅಕ್ಷರ್ ಪಟೇಲ್ 2-0-11-1
ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಫಲಿತಾಂಶ: ಭಾರತಕ್ಕೆ 6 ರನ್‌ಗಳ ಜಯ

ಟಿ20 ವಿಶ್ವಕಪ್: ವೆಸ್ಟ್ ಇಂಡೀಸ್‌ಗೆ ಸುಲಭ ಜಯ


ಅಕೀಲ್ ದಾಳಿಗೆ ಕುಸಿದ ಯುಗಾಂಡ

ಪ್ರಾವಿಡೆನ್ಸ್, ಗಯಾನ (ಪಿಟಿಐ): ಆತಿಥೇಯ ವೆಸ್ಟ್ ಇಂಡೀಸ್ ತಂಡದ ಎಡಗೈ ಸ್ಪಿನ್ನರ್ ಅಕೀಲ್ ಹುಸೇನ್ ಅವರ ದಾಳಿಯ ಮುಂದೆ 'ಕ್ರಿಕೆಟ್ ಲೋಕದ ಶಿಶು' ಯುಗಾಂಡ ಶರಣಾಯಿತು.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಭಾನುವಾರ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ ಟಿ20 ವಿಶ್ವಕಪ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ವಿಂಡೀಸ್ 134 ರನ್‌ಗಳ ಭರ್ಜರಿ ಜಯ ದಾಖಲಿಸಿತು. ಅಕೀಲ್ ಹುಸೇನ್ ಐದು ವಿಕೆಟ್ ಗಳಿಸಿ ಮಿಂಚಿದರು.

ಟಾಸ್ ಗೆದ್ದ ವೆಸ್ಟ್ ಇಂಡೀಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಜಾನ್ಸನ್ ಚಾರ್ಲ್ಸ್ (44; 42ಎ, 4X4, 6X2) ಹಾಗೂ ಆ್ಯಂಡ್ರೆ ರಸೆಲ್ (ಅಜೇಯ 30; 17ಎ, 4X6) ಅವರ ಬ್ಯಾಟಿಂಗ್ ಬಲದಿಂದ ವಿಂಡೀಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 173 ರನ್ ಗಳಿಸಿತು.

ಮಧ್ಯಮ ಕ್ರಮಾಂಕದಲ್ಲಿ ನಿಕೊಲಸ್ ಪೂರನ್, ರೋವ್ಮನ್ ಪೊವೆಲ್ ಹಾಗೂ ಶೆರ್ಫೇನ್ ರುದರ್‌ಫೋರ್ಡ್ ಅವರು ಮಹತ್ವದ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು.



ಅಕೀಲ್ ಹುಸೇನ್ –ಎಪಿ/ಪಿಟಿಐ ಚಿತ್ರ

ಗುರಿ ಬೆನ್ನಟ್ಟಿದ್ದ ಯುಗಾಂಡ ತಂಡದ ಬ್ಯಾಟರ್‌ಗಳು 12 ಓವರ್‌ಗಳನ್ನು ಆಡಿದ್ದು ಗಮನ ಸೆಳೆಯುಂತಹದ್ದು. ಆದರೆ, ಅಕೀಲ್ ಅವರ ಸ್ಪಿನ್ ಮೋಡಿಯ ಮುಂದೆ ತಂಡವು 39 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಯುಗಾಂಡ ಅತಿ ಕಡಿಮೆ ಮೊತ್ತಕ್ಕೆ ಆಲೌಟ್ ಆದ ಎರಡನೇ ತಂಡವಾಯಿತು. 2014ರಲ್ಲಿ ನೆದರ್ಲೆಂಡ್ಸ್ ತಂಡವು ಶ್ರೀಲಂಕಾ ಎದುರು 39 ರನ್ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 173 (ಜಾನ್ಸನ್ ಚಾರ್ಲ್ಸ್ 44, ನಿಕೊಲಸ್ ಪೂರನ್ 22, ರೋವ್ಮನ್ ಪೊವೆಲ್ 23, ಶೆರ್ಫೇನ್ ರುದರ್‌ಫೋರ್ಡ್ 22, ಆ್ಯಂಡ್ರೆ ರಸೆಲ್ ಔಟಾಗದೆ 30, ಬ್ರಯನ್ ಮಸಾಬಾ 31ಕ್ಕೆ2) **ಯುಗಾಂಡ:** 12 ಓವರ್‌ಗಳಲ್ಲಿ 39 (ಜುಮಾ ಮಿಯಾಗಿ ಔಟಾಗದೆ 13, ಅಕೀಲ್ ಹುಸೇನ್ 11ಕ್ಕೆ5, ಅಲ್ಝರಿ ಜೋಸೆಫ್ 6ಕ್ಕೆ2) **ಫಲಿತಾಂಶ:** ವೆಸ್ಟ್ ಇಂಡೀಸ್‌ಗೆ 134 ರನ್ ಜಯ. **ಪಂದ್ಯದ ಆಟಗಾರ:** ಅಕೀಲ್ ಹುಸೇನ್.

ಹ್ಯಾಟ್ರಿಕ್ ಜಯದ ಮೇಲೆ ದಕ್ಷಿಣ ಆಫ್ರಿಕಾ ಕಣ್ಣು

ನ್ಯೂಯಾರ್ಕ್ (ಪಿಟಿಐ): ಏಡನ್ ಮರ್ಕರಂ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವು ಡಿ ಗುಂಪಿನಲ್ಲಿ ಹ್ಯಾಟ್ರಿಕ್ ಜಯದ ಮೇಲೆ ಕಣ್ಣಿಟ್ಟಿದೆ.

ಸೋಮವಾರ ನಾಸೌ ಕೌಂಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಬಾಂಗ್ಲಾದೇಶದ ಎದುರು ಕಣಕ್ಕಿಳಿಯಲಿದೆ.

ದಕ್ಷಿಣ ಆಫ್ರಿಕಾ ತಂಡವು ತನ್ನ ಕಳೆದೆರಡೂ ಪಂದ್ಯಗಳಲ್ಲಿ ಜಯಿಸಿದೆ. ಆದರೂ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಬ್ಯಾಟಿಂಗ್ ಮಾಡದ ಕೊರಗಿನಲ್ಲಿದೆ. ಕ್ವಿಂಟನ್ ಡಿಕಾಕ್, ಹೆನ್ರಿಚ್ ಕ್ಲಾಸೆನ್, ಮರ್ಕರಂ ಸೇರಿದಂತೆ ಅಬ್ಬರದ ಬ್ಯಾಟಿಂಗ್ ಆಡಿಲ್ಲ. ಡೇವಿಡ್ ಮಿಲ್ಲರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರು ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ತಮ್ಮ ಚೆಂದದ ಬ್ಯಾಟಿಂಗ್ ಮೂಲಕ ಗೆಲುವಿಗೆ ಕಾರಣರಾಗಿದ್ದರು.



ನಜ್ಮುಲ್ ಹುಸೇನ್ ಶಾಂತೊ

ಬೌಲಿಂಗ್‌ನಲ್ಲಿ ಓಟ್ನಿಲ್ ಬಾರ್ಥ್‌ಮ್ಯಾನ್, ಎನ್ರಿಚ್ ನಾಕಿಯಾ ಹಾಗೂ ಮಾರ್ಕೊ ಯಾನ್ಸೆನ್ ಅವರು ಉತ್ತಮ ಲಯದಲ್ಲಿದ್ದಾರೆ.

ನಜ್ಮುಲ್ ಹುಸೇನ್ ಶಾಂತೋ ನಾಯಕತ್ವದ ಬಾಂಗ್ಲಾದೇಶವು ಇದುವರೆಗೆ ಆಡಿರುವ ಒಂದು ಪಂದ್ಯದಲ್ಲಿ ಶ್ರೀಲಂಕಾ ಎದುರು ಜಯಿಸಿದೆ. ಇದರಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿದೆ. ದಕ್ಷಿಣ ಆಫ್ರಿಕಾ ತಂಡಕ್ಕೆ ದಿಟ್ಟ ಸವಾಲು ಎಸೆಯಲು ಸಿದ್ಧವಾಗಿದೆ.

ಬ್ಯಾಟರ್ ಲಿಟನ್ ದಾಸ್, ತೌಹಿದ್ ಹೃದಯ್, ಬೌಲರ್ ಮುಸ್ತಫಿಜುರ್ ರೆಹಮಾನ್ ಹಾಗೂ ರಶೀದ್ ಹುಸೇನ್ ಅವರು ಉತ್ತಮ ಲಯದಲ್ಲಿದ್ದಾರೆ. ಅವರ ಮೇಲೆ ತಂಡದ ನಿರೀಕ್ಷೆಯ ಭಾರವಿದೆ.

ಇಂದಿನ ಪಂದ್ಯ
ದಕ್ಷಿಣ ಆಫ್ರಿಕಾ Vs ಬಾಂಗ್ಲಾದೇಶ (ರಾತ್ರಿ 8)
ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್



ದಕ್ಷಿಣ ಆಫ್ರಿಕಾ ತಂಡದ ಏಡನ್ ಮರ್ಕರಂ –ಪಿಟಿಐ ಚಿತ್ರ

ಅರ್ಹತೆ ಪಡೆದವರಲ್ಲಿ ಐಐಟಿ ಮದ್ರಾಸ್ ವಲಯದವರೇ ಹೆಚ್ಚು

ಜೆಇಇ– ಅಡ್ವಾನ್ಸ್ಡ್: ವೇದ್ ಪ್ರಥಮ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜಂಟಿ ಪ್ರವೇಶ ಪರೀಕ್ಷೆ (ಜೆಇಇ)– ಅಡ್ವಾನ್ಸ್ಡ್ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಐಐಟಿ ದೆಹಲಿ ವಲಯದ ವೇದ್ ಲಹೋಟಿ 360ಕ್ಕೆ 355 ಅಂಕಗಳನ್ನು ಗಳಿಸುವ ಮೂಲಕ ಮೊದಲ ರ‍್ಯಾಂಕ್ ಪಡೆದಿದ್ದಾರೆ.

ಮಹಿಳಾ ಅಭ್ಯರ್ಥಿಗಳ ಪೈಕಿ ಐಐಟಿ ಬಾಂಬೆ ವಲಯದ ದ್ವಿಜಾ ಧರ್ಮೇಶ್‌ಕುಮಾರ್ ಪಟೇಲ್ ಟಾಪರ್ ಆಗಿದ್ದಾರೆ. ಅವರು ಒಟ್ಟು 332 ಅಂಕಗಳನ್ನು ಪಡೆದಿದ್ದು, ಅಖಿಲ ಭಾರತ ಮಟ್ಟದಲ್ಲಿ 7ನೇ ರ‍್ಯಾಂಕ್ ಗಳಿಸಿದ್ದಾರೆ. ಈ ವರ್ಷ ಜೆಇಇ–ಅಡ್ವಾನ್ಸ್ಡ್ ಅನ್ನು ಐಐಟಿ ಮದ್ರಾಸ್ ಆಯೋಜಿಸಿತ್ತು.

ಅಗ್ರ 10 ರ‍್ಯಾಂಕ್ ಪಡೆದವರಲ್ಲಿ ನಾಲ್ವರು ಐಐಟಿ ಮದ್ರಾಸ್ ವಲಯದವರು. ಅಲ್ಲದೆ ಇದೇ ವಲಯದ ಗರಿಷ್ಠ ಸಂಖ್ಯೆಯ ಅಭ್ಯರ್ಥಿಗಳು ಈ ಬಾರಿ ಅರ್ಹತೆಗಳಿಸಿದ್ದಾರೆ. ನಂತರ ಸ್ಥಾನದಲ್ಲಿ ಐಐಟಿ ದೆಹಲಿ ಮತ್ತು ಐಐಟಿ ಬಾಂಬೆ ವಲಯಗಳಿವೆ.

ದೆಹಲಿ ಐಐಟಿ ವಲಯದ ಆದಿತ್ಯ ಎರಡನೇ ರ‍್ಯಾಂಕ್, ಮದ್ರಾಸ್ ವಲಯದ ಭೋಗಲ್‌ಪಲ್ಲಿ ಸಂದೇಶ್ ಮೂರನೇ ರ‍್ಯಾಂಕ್ ಪಡೆದಿದ್ದಾರೆ. ಐಐಟಿ ರೂರ್ಕಿ ವಲಯದ ರಿದಮ್ ಕೆಡಿಯಾ, ಐಐಟಿ ಮದ್ರಾಸ್ ವಲಯದ ಪುಟ್ಟಿ ಕುಶಾಲ್ ಕುಮಾರ್, ಐಐಟಿ ಬಾಂಬೆ ವಲಯದ ರಾಜ್‌ದೀಪ್ ಮಿಶ್ರಾ, ಐಐಟಿ ಮದ್ರಾಸ್ ವಲಯದ ತೇಜೇಶ್ವರ್, ಬಾಂಬೆ ವಲಯದ ಧ್ರುವಿ ಹೇಮಂತ್ ದೋಷಿ, ಮದ್ರಾಸ್ ವಲಯದ ಅಲ್ಲದಬೋನಾ ಎಸ್‌ಎಸ್‌ಡಿಬಿ ಸಿದ್ದಿಕ್ ಸುಹಾಸ್ ನಂತರದ ಸ್ಥಾನಗಳನ್ನು ಪಡೆದಿದ್ದಾರೆ.



ಅಗ್ರ 500 ರ‍್ಯಾಂಕ್ ಒಳಗಿನ ಅಭ್ಯರ್ಥಿಗಳಲ್ಲಿ ಐಐಟಿ ಮದ್ರಾಸ್ ವಲಯದಿಂದ 145, ಬಾಂಬೆ ವಲಯದ 136 ಹಾಗೂ ದೆಹಲಿ ವಲಯದ 122 ಮಂದಿ ಇದ್ದಾರೆ. ಒಟ್ಟು ಏಳು ವಿದೇಶಿ ಅಭ್ಯರ್ಥಿಗಳು ಹಾಗೂ 179 ಸಾಗರೋತ್ತರ ಭಾರತೀಯ ನಾಗರಿಕರು (ಒಸಿಐ) ಈ ಪರೀಕ್ಷೆಯಲ್ಲಿ ಅರ್ಹತೆಗಳಿಸಿದ್ದಾರೆ.

ಮೇ 26ರಂದು ನಡೆದಿದ್ದ ಜೆಇಇ–ಅಡ್ವಾನ್ಸ್ಡ್ ಅನ್ನು ಒಟ್ಟು 1.80 ಲಕ್ಷ ಅಭ್ಯರ್ಥಿಗಳು ಬರೆದಿದ್ದರು. ಈ ಪೈಕಿ 7,964 ಮಹಿಳಾ ಅಭ್ಯರ್ಥಿಗಳು ಸೇರಿದಂತೆ ಒಟ್ಟು 48,248 ಅಭ್ಯರ್ಥಿಗಳು ಅರ್ಹತೆಗಳಿಸಿದ್ದಾರೆ.

ಅಖಿಲ ಭಾರತ ಮಟ್ಟದಲ್ಲಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಜೆಇಇ ಮೇನ್ ಪರೀಕ್ಷೆ ನಡೆಯುತ್ತದೆ. ದೇಶದ ಐಐಟಿ ಸೇರಿದಂತೆ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ಜರುಗುತ್ತದೆ. ಜೆಇಇ ಅಡ್ವಾನ್ಸ್ಡ್ ಜೆಇಇ ಮೇನ್ ಅರ್ಹತಾ ಪರೀಕ್ಷೆಯಾಗಿರುತ್ತದೆ. ಜಂಟಿ ಸೀಟು ಹಂಚಿಕೆ ಕೌನ್ಸೆಲಿಂಗ್ ಸೋಮವಾರದಿಂದ ನಡೆಯಲಿದೆ.

ಭಾರತಕ್ಕೆ ಕೆನಡಾ ಗುಪ್ತಚರ ಮುಖ್ಯಸ್ಥ ರಹಸ್ಯ ಭೇಟಿ

ನವದೆಹಲಿ (ಪಿಟಿಐ): ಖಾಲಿಸ್ತಾನಿ ಉಗ್ರ ಹರ್‌ದೀಪ್ ಸಿಂಗ್ ನಿಜ್ಜಾರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಭಾರತದ ಅಧಿಕಾರಿಗಳ ಜೊತೆ ಹಂಚಿಕೊಳ್ಳಲು ಕೆನಡಾದ ಗುಪ್ತಚರ ಏಜೆನ್ಸಿಯ ಮುಖ್ಯಸ್ಥ ಡೇವಿಡ್ ವಿಗ್ನೀಲ್ಟ್ ಅವರು ಎರಡು ಬಾರಿ ರಹಸ್ಯವಾಗಿ ಭಾರತಕ್ಕೆ ಭೇಟಿ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಇದೇ ವರ್ಷದ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಡೇವಿಡ್ ವಿಗ್ನೀಲ್ಟ್ ಅವರು ಎರಡು ಬಾರಿ ಭಾರತಕ್ಕೆ ಭೇಟಿ ನೀಡಿದ್ದರು. ಈ ವೇಳೆ ನಿಜ್ಜಾರ್ ಹತ್ಯೆ ಕುರಿತು ಕೆನಡಾ ಸರ್ಕಾರದ ತನಿಖಾ ವರದಿಯ ಮಾಹಿತಿಯನ್ನು ಭಾರತದ ಜೊತೆ ಹಂಚಿಕೊಂಡಿದ್ದಾರೆ ಎನ್ನಲಾಗಿದೆ.



ಪ್ರತಿಭಟನೆ... 2024ರ ನೀಟ್ ಪರೀಕ್ಷಾ ಫಲಿತಾಂಶದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ವಿರೋಧಿಸಿ ನವದೆಹಲಿಯಲ್ಲಿ ಭಾನುವಾರ ನಡೆಸಿದ ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರು ಘೋಷಣೆ ಕೂಗಿದರು

–ಪಿಟಿಐ ಚಿತ್ರ

ಸಕ್ರಿಯ ರಾಜಕಾರಣ ತೊರೆದ ಪಾಂಡಿಯನ್

ಭುವನೇಶ್ವರ (ಪಿಟಿಐ): ರಾಜಕೀಯ ಸೇರಿದ ಆರು ತಿಂಗಳು, 13 ದಿನಗಳ ನಂತರ ಮಾಜಿ ಐಎಎಸ್ ಅಧಿಕಾರಿ ವಿ.ಕೆ. ಪಾಂಡಿಯನ್ ಅವರು ಸಕ್ರಿಯ ರಾಜಕಾರಣದಿಂದ ಹಿಂದೆ ಸರಿಯುತ್ತಿರುವುದಾಗಿ ಭಾನುವಾರ ಪ್ರಕಟಿಸಿದ್ದಾರೆ.



ಪಾಂಡಿಯನ್

ಒಡಿಶಾ ರಾಜ್ಯವನ್ನು ತಮ್ಮ ಹೃದಯದಲ್ಲಿ, ನವೀನ್ ಪಟ್ನಾಯಕ್ ಅವರನ್ನು ಉಸಿರಿನಲ್ಲಿ ಇರಿಸಿಕೊಳ್ಳುವುದಾಗಿ ಹೇಳಿದ್ದಾರೆ. ಪಟ್ನಾಯಕ್ ಅವರಿಗೆ ನೆರವಾಗುವ ಉದ್ದೇಶದಿಂದ ಮಾತ್ರವೇ ತಾವು ರಾಜಕೀಯ ಸೇರಿದ್ದುದಾಗಿ, ಆ ಕಾರಣಕ್ಕಾಗಿಯೇ 2024ರ ಚುನಾವಣೆಯಲ್ಲಿ ಕಣಕ್ಕೆ ಇಳಿಯದೆ ಇದ್ದುದಾಗಿ ವಿಡಿಯೊ ಸಂದೇಶದಲ್ಲಿ ಅವರು ತಿಳಿಸಿದ್ದಾರೆ.

ಚುನಾವಣೆಯಲ್ಲಿ ಪಕ್ಷವು ಸೋಲು ಕಂಡಿದ್ದಕ್ಕೆ ತಾವು ಜವಾಬ್ದಾರರು ಎಂದು ಒಡಿಶಾದ ಜನ ಹಾಗೂ ಬಿಜೆಡಿ ಕಾರ್ಯಕರ್ತರು ಭಾವಿಸಿದ್ದರೆ, ಅದಕ್ಕೆ ತಾವು ಕ್ಷಮೆ ಯಾಚಿಸುವುದಾಗಿ ತಿಳಿಸಿದ್ದಾರೆ. ಪಟ್ನಾಯಕ್ ಅವರು ಸತತ ಆರನೆಯ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬರದಿದ್ದರೆ ರಾಜಕೀಯ ತೊರೆಯುವುದಾಗಿ ಅವರು ಪ್ರಚಾರದ ವೇಳೆ ಹೇಳಿದ್ದರು.

'ಐಎಎಸ್‌ನಿಂದ ನಾನು ಸ್ವಯಂ ನಿವೃತ್ತಿ ಪಡೆದೆ. ನನ್ನ ಮಾರ್ಗದರ್ಶಕ ನವೀನ್ ಪಟ್ನಾಯಕ್ ಅವರಿಗೆ ನೆರವಾಗಲು ಬಿಜೆಡಿ ಸೇರಿದೆ. ಅವರಿಗೆ ನೆರವಾಗುವುದು ಮಾತ್ರ ನನ್ನ ಉದ್ದೇಶ ಆಗಿತ್ತು. ಆದರೆ ಕೆಲವು ರಾಜಕೀಯ ಸಂಕಥನಗಳಿಗೆ ಸರಿಯಾದ ಸಂದರ್ಭದಲ್ಲಿ ಪ್ರತ್ಯುತ್ತರ ನೀಡಲು ತಮ್ಮಿಂದ ಆಗದೆ ಇದ್ದುದು ದೊಡ್ಡ ವೈಫಲ್ಯವಾಗಿ ಪರಿಣಮಿಸಿರಬಹುದು' ಎಂದು ಅವರು ಹೇಳಿದ್ದಾರೆ.

'ನನಗೆ ಯಾವುದೇ ರಾಜಕೀಯ ಹುದ್ದೆಯನ್ನು ಹೊಂದುವ ಆಸೆ ಇರಲಿಲ್ಲ. ನಾನು ಅಭ್ಯರ್ಥಿಯೂ ಆಗಿರಲಿಲ್ಲ, ಬಿಜೆಡಿಯಲ್ಲಿ ಯಾವ ಹುದ್ದೆಯನ್ನೂ ಹೊಂದಿರಲಿಲ್ಲ' ಎಂದು ತಿಳಿಸಿದ್ದಾರೆ.

ಸಂಪುಟ ದರ್ಜೆಗೆ ಎನ್‌ಸಿಪಿ ಪಟ್ಟು

ಒಂದನೇ ಪುಟದಿಂದ...

ಎನ್‌ಸಿಪಿ ನಾಯಕರು ತಮ್ಮ ಪಟ್ಟು ಬಿಗಿಗೊಳಿಸಿದಾಗ ಬಿಜೆಪಿಯು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಅವರನ್ನು ಪವಾರ್ ಹಾಗೂ ಇತರರ ಜೊತೆ ಮಾತುಕತೆಗೆ ಕಳುಹಿಸಿತು. 'ಕೆಲವು ದಿನಗಳವರೆಗೆ ಕಾಯಲು ನಾವು ಸಿದ್ಧರಿದ್ದೇವೆ ಎಂಬುದನ್ನು ಅವರಿಗೆ ತಿಳಿಸಿದ್ದೇವೆ. ನಮಗೆ ಸಂಪುಟ ದರ್ಜೆಯೇ ಬೇಕು' ಎಂದು ಪವಾರ್ ಅವರು ಸುದ್ದಿಗಾರರ ಬಳಿ ಹೇಳಿದರು.



ಅಜಿತ್ ಪವಾರ್

'ಇಂದು ನಾವು ಒಬ್ಬ ರಾಜ್ಯಸಭಾ ಸದಸ್ಯ, ಒಬ್ಬ ಲೋಕಸಭಾ ಸದಸ್ಯರನ್ನು ಹೊಂದಿದ್ದೇವೆ. ಆದರೆ ಇನ್ನು ಎರಡರಿಂದ ಮೂರು ತಿಂಗಳಲ್ಲಿ ರಾಜ್ಯಸಭೆಯಲ್ಲಿ ನಮ್ಮ ಸದಸ್ಯರ ಸಂಖ್ಯೆ ಮೂರಕ್ಕೆ ಏರಿಕೆಯಾಗಲಿದೆ. ಇದರಿಂದ, ಸಂಸತ್‌ನಲ್ಲಿ ನಮ್ಮ ಪಕ್ಷದ ಒಟ್ಟು ಸದಸ್ಯರ ಸಂಖ್ಯೆ ನಾಲ್ಕು ಆಗಲಿದೆ. ಹೀಗಾಗಿ ನಮಗೆ ಸಚಿವ ಸಂಪುಟದಲ್ಲಿ ಒಂದು ಸ್ಥಾನ ಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳಿದ್ದೇವೆ' ಎಂದರು.

ಆದರೆ, ಈ ಬಾರಿ ಮಿತ್ರಪಕ್ಷಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸಬೇಕಿರುವ ಕಾರಣ ಎನ್‌ಸಿಪಿಗೆ ಒಂದು ರಾಜ್ಯ ಖಾತೆ (ಸ್ವತಂತ್ರ ನಿರ್ವಹಣೆ) ಸ್ಥಾನವನ್ನು ಮಾತ್ರ ನೀಡಲು ಸಾಧ್ಯ ಎಂದು ಬಿಜೆಪಿ ನಾಯಕರು ಸ್ಪಷ್ಟಪಡಿಸಿದರು. ಶಿವಸೇನಾ (ಶಿಂದೆ ಬಣ) ಪಕ್ಷಕ್ಕೆ ಕೂಡ ಒಂದು ರಾಜ್ಯ ಖಾತೆ (ಸ್ವತಂತ್ರ ನಿರ್ವಹಣೆ) ಮಾತ್ರ ನೀಡಲಾಗಿದೆ. 'ರಾಜ್ಯ ಖಾತೆ ಒಪ್ಪಿಕೊಳ್ಳುವಲ್ಲಿ ನನಗೆ ಕೆಲವು ಮಿತಿಗಳಿವೆ. ನಮ್ಮ ಸಮಸ್ಯೆಯನ್ನು ಬಿಜೆಪಿಗೆ ತಿಳಿಸಲಾಗಿದೆ. ಕೆಲವು ದಿನಗಳವರೆಗೆ ಕಾಯಿರಿ, ಪರಿಹಾರ ರೂಪದಲ್ಲಿ ಏನಾದರೂ ಮಾಡೋಣ ಎಂದು ಅವರು ಹೇಳಿದ್ದಾರೆ. ಹಾಗೆ ಆಗುವುದಿದ್ದರೆ, ಸಮಸ್ಯೆ ಇದೆ ಎಂದು ಹೇಳಲು ಆಗದು' ಎಂದು ಪ್ರಫುಲ್ ಪಟೇಲ್ ತಿಳಿಸಿದರು.

'ಮೈತ್ರಿಯ ಸೂತ್ರ ಮುರಿಯಲಾಗದು'

ಮುಂಬೈ (ಪಿಟಿಐ): 'ರಾಜ್ಯಸಭಾ ಸದಸ್ಯ ಪ್ರಫುಲ್ ಪಟೇಲ್ ಅವರನ್ನೇ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಎನ್‌ಸಿಪಿ ಪಟ್ಟುಹಿಡಿದಿತ್ತು. ಪಟೇಲ್ ಅವರು ಹೊಂದಿರುವ ಅನುಭವ ಪರಿಗಣಿಸಿ, ಅವರಿಗೆ ರಾಜ್ಯ ಖಾತೆ (ಸ್ವತಂತ್ರ) ನೀಡುವುದು ಸರಿಯಲ್ಲ ಎಂಬ ನಿಲುವನ್ನು ಎನ್‌ಸಿಪಿ ಹೊಂದಿದೆ' ಎಂದು ದೇವೇಂದ್ರ ಫಡಣವೀಸ್ ಹೇಳಿದರು.

'ಮೈತ್ರಿಕೂಟದ ಸರ್ಕಾರದಲ್ಲಿ ಒಂದು ಸೂತ್ರವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅದನ್ನು ಒಂದು ಪಕ್ಷಕ್ಕಾಗಿ ಮುರಿಯಲು ಸಾಧ್ಯವಿಲ್ಲ. ಆದರೆ ಸಂಪುಟದ ವಿಸ್ತರಣೆ ಆದಾಗ, ಕೇಂದ್ರ ಸರ್ಕಾರವು ಎನ್‌ಸಿಪಿಯನ್ನು ಪರಿಗಣಿಸಲಿದೆ ಎಂಬುದನ್ನು ನಾನು ವಿಶ್ವಾಸದಿಂದ ಹೇಳಬಲ್ಲೆ. ನಾವು ಈಗಲೇ ಎನ್‌ಸಿಪಿಯನ್ನು ಸೇರಿಸಿಕೊಳ್ಳಲು ಪ್ರಯತ್ನಿಸಿದೆವು. ಆದರೆ ಅವರು ಸಂಪುಟ ದರ್ಜೆಗೆ ಪಟ್ಟುಹಿಡಿದರು' ಎಂದು ಫಡಣವೀಸ್ ವಿವರಿಸಿದರು.

'ನೀಟ್: ಸಂಸತ್ತಿನಲ್ಲಿ ನಿಮ್ಮ ಧ್ವನಿಯಾಗುವೆ'

ನವದೆಹಲಿ (ಪಿಟಿಐ): 'ನರೇಂದ್ರ ಮೋದಿ ಅವರು ಮತ್ತೊಂದು ಅವಧಿಗೆ ಪ್ರಮಾಣ ವಚನ ಸ್ವೀಕರಿಸುವ ಮುನ್ನವೇ, ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳು ದೇಶದ 24 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಮತ್ತು ಅವರ ಕುಟುಂಬಗಳನ್ನು ಧ್ವಂಸಗೊಳಿಸಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ವಾಗ್ದಾಳಿ ನಡೆಸಿದರು.

'ದೇಶದ ವಿದ್ಯಾರ್ಥಿಗಳ ಧ್ವನಿಯಾಗಿ ಸಂಸತ್ತಿನಲ್ಲಿ ನಾನು ಕಾರ್ಯನಿರ್ವಹಿಸುತ್ತೇನೆ. ಅಲ್ಲದೆ ಅವರ ಭವಿಷ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಪ್ರಬಲವಾಗಿ ಮಾತನಾಡುತ್ತೇನೆ' ಎಂದು ಅವರು 'ಎಕ್ಸ್'ನಲ್ಲಿ ಭರವಸೆ ನೀಡಿದ್ದಾರೆ.

'ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ ಅನೇಕರು ಗರಿಷ್ಠ ಅಂಕಗಳನ್ನು ಪಡೆದಿದ್ದಾರೆ. ತಾಂತ್ರಿಕವಾಗಿ ಇಷ್ಟು ಅಂಕಗಳನ್ನು ಹಲವರು ಗಳಿಸಲು ಸಾಧ್ಯವಿಲ್ಲ' ಎಂದಿರುವ ಅವರು, ಪ್ರಶ್ನೆ ಪತ್ರಿಕೆ ಸೋರಿಕೆಯ ಸಾಧ್ಯತೆಯನ್ನು ಸರ್ಕಾರ ನಿರಂತರವಾಗಿ ನಿರಾಕರಿಸುತ್ತಿದೆ' ಎಂದು ಕಿಡಿಕಾರಿದ್ದಾರೆ.

ಶಿಕ್ಷಣ ಮಾಫಿಯಾವು ಸರ್ಕಾರಿ ಯಂತ್ರದೊಂದಿಗೆ ಶಾಮೀಲಾಗಿ 'ಪ್ರಶ್ನೆ ಪತ್ರಿಕೆ ಸೋರಿಕೆ ಉದ್ಯಮ'ವನ್ನು ನಡೆಸುತ್ತಿವೆ. ಇದನ್ನು ಸಮರ್ಥವಾಗಿ ಎದುರಿಸಲು ಕಾಂಗ್ರೆಸ್ ಬಳಿ ದೃಢವಾದ ಯೋಜನೆ ಇದೆ ಎಂದು ತಿಳಿಸಿದ್ದಾರೆ.

'ಪ್ರಶ್ನೆಪತ್ರಿಕೆ ಸೋರಿಕೆಗೆ ಮುಕ್ತಿ ನೀಡುವ ಉದ್ದೇಶದಿಂದ ಕಾನೂನು ರೂಪಿಸುವ ಕುರಿತು ನಾವು ನಮ್ಮ ಪ್ರಣಾಳಿಕೆಯಲ್ಲಿ ವಾಗ್ದಾನ ಮಾಡಿದ್ದೆವು' ಎಂದು ಅವರು ನೆನಪಿಸಿದ್ದಾರೆ.

ಪರೀಕ್ಷಾ ಅಕ್ರಮಗಳು ನಡೆದಿರುವ ಸಾಧ್ಯತೆಗಳನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಈಗಾಗಲೇ ತಳ್ಳಿಹಾಕಿದೆ. ಅಲ್ಲದೆ, ಅಭ್ಯರ್ಥಿಗಳಿಗೆ ನೀಡಲಾದ ಕೃಪಾಂಕಗಳ ಪರಿಶೀಲಿಸಲು ಶಿಕ್ಷಣ ಸಚಿವಾಲಯವು ನಾಲ್ವರು ಸದಸ್ಯರ ಸಮಿತಿಯ ರಚಿಸಿದೆ.

ಉಗ್ರರ ದಾಳಿ: 10 ಯಾತ್ರಿಕರ ಸಾವು

ಒಂದನೇ ಪುಟದಿಂದ...


'53 ಆಸನದ ಬಸ್ಸಿನ ಚಾಲಕನಿಗೆ ಗುಂಡು ತಗಲಿದಾಗ, ಆತ ವಾಹನದ ಮೇಲಿನ ನಿಯಂತ್ರಣ ಕಳೆದುಕೊಂಡಿದ್ದಾನೆ. ಬಳಿಕ ಬಸ್ ಆಳದ ಕಮರಿಗೆ ಬಿದ್ದಿದ್ದು, 10 ಜನರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಮತ್ತು ಹಲವರಿಗೆ ಗಾಯಗಳಾಗಿವೆ. ಇವರ ಪೈಕಿ ಕೆಲವರು ಗುಂಡೇಟಿನಿಂದಲೂ ಗಾಯಗೊಂಡಿದ್ದಾರೆ' ಎಂದು ಎಸ್‌ಪಿ ಮೋಹಿತಾ ಶರ್ಮಾ ಮಾಹಿತಿ ನೀಡಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ, 'ಭಯೋತ್ಪಾದಕರು ಹೆದ್ದಾರಿಯಲ್ಲಿ ಬಸ್‌ಗಾಗಿ ಕಾದು, ದಾಳಿ ನಡೆಸಿದ್ದಾರೆ' ಎಂದು ಅವರು ಹೇಳಿದ್ದಾರೆ. 'ತಕ್ಷಣವೇ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ಮೃತರ ದೇಹಗಳನ್ನು ಹೊರತೆಗೆಯುವ ಮತ್ತು ಗಾಯಗೊಂಡವರಿಗೆ ಚಿಕಿತ್ಸೆ ನೀಡುವ ಕಾರ್ಯ ನಡೆಯುತ್ತಿದೆ' ಎಂದು ಅವರು ಹೇಳಿದ್ದಾರೆ. 10 ದಿನಗಳ ಹಿಂದೆಯಷ್ಟೇ ಉತ್ತರ ಪ್ರದೇಶದ ಹಾಥರಸ್‌ನಿಂದ ಬಂದಿದ್ದ ಬಸ್ಸೊಂದು ಅಖ್ನೂರ್ ಜಿಲ್ಲೆಯಲ್ಲಿ ಆಳವಾದ ಕಂದಕಕ್ಕೆ ಬಿದ್ದು, 22 ಯಾತ್ರಾರ್ಥಿಗಳು ಮೃತಪಟ್ಟಿದ್ದರು. 2023ರ ನವೆಂಬರ್‌ನಲ್ಲಿ ಬಸ್ಸೊಂದು ದೋಡಾ ಜಿಲ್ಲೆಯ ಪರ್ವತದ ರಸ್ತೆಯಿಂದ ಬಿದ್ದ ಪರಿಣಾಮ 39 ಪ್ರಯಾಣಿಕರು ಮೃತಪಟ್ಟಿದ್ದರು.

ಫ್ರೆಂಚ್ ಓಪನ್ ಟೆನಿಸ್: ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್‌ಗೆ ನಿರಾಸೆ

ಅಲ್ಕರಾಜ್ ಮುಡಿಗೆ ಮತ್ತೊಂದು ಕಿರೀಟ

ಪ್ಯಾರಿಸ್ (ಎಎಫ್‌ಪಿ): ಮೂರನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೇವ್ ಅವರನ್ನು ಮಣಿಸಿ ಕಿರೀಟ ಮುಡಿಗೇರಿಸಿಕೊಂಡರು. ಜೊತೆಗೆ ಮೂರು ಮಾದರಿಗಳ ಕೋರ್ಟ್‌ನಲ್ಲಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಹಿರಿಮೆಗೆ ಪಾತ್ರವಾದರು.

ರೋಲ್ಯಾಂಡ್ ಗ್ಯಾರೋಸ್‌ನ ಫಿಲಿಪ್ ಚೆಟ್ರಿಯರ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಸ್ಪೇನ್‌ನ 21 ವರ್ಷದ ಅಲ್ಕರಾಜ್ ಅವರು 6-3, 2-6, 5-7, 6-1, 6-2ರಿಂದ ಜರ್ಮನಿಯ 26 ವರ್ಷದ ಜ್ವೆರೇವ್ ಅವರನ್ನು ಹಿಮ್ಮೆಟ್ಟಿಸಿದರು. ನಾಲ್ಕು ಗಂಟೆ 19 ನಿಮಿಷಗಳ ಕಾಲ ನಡೆದ ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಅಲ್ಕರಾಜ್ ಮೇಲುಗೈ ಸಾಧಿಸಿದರು.



ಫ್ರೆಂಚ್ ಓಪನ್ ಪ್ರಶಸ್ತಿಯೊಂದಿಗೆ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರ

2022ರಲ್ಲಿ ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿದ್ದ ಅಲ್ಕರಾಜ್, ಕಳೆದ ವರ್ಷ ವಿಂಬಲ್ಡನ್ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ, ಕಿರೀಟವನ್ನು ಜಯಿಸಿದ್ದರು. ಅವರು ಮುಂದಿನ ವರ್ಷ ಆಸ್ಟ್ರೇಲಿಯನ್ ಓಪನ್ ಗೆದ್ದರೆ, ನಾಲ್ಕೂ ಗ್ರ್ಯಾನ್‌ಸ್ಲಾಮ್ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗುವರು.

2020ರಲ್ಲಿ ಅಮೆರಿಕ ಓಪನ್‌ನಲ್ಲಿ ಫೈನಲ್ ಪ್ರವೇಶಿಸಿದ್ದ ಜ್ವೆರೇವ್ ಅಲ್ಲೂ ಐದು ಸೆಟ್‌ಗಳ ಹೋರಾಟದಲ್ಲಿ ಡೊಮಿನಿಕ್ ಥೀಮ್ ಅವರಿಗೆ ಮಣಿದಿದ್ದರು. ಇಲ್ಲಿ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಅವಕಾಶವನ್ನು ಸ್ವಲ್ಪದರಲ್ಲಿ ಕಳೆದುಕೊಂಡರು. ಎರಡು ದಿನಗಳ ಹಿಂದೆಯಷ್ಟೇ ಜ್ವರೇವ್ ವಿರುದ್ಧದ ಹಲ್ಲೆ ಪ್ರಕರಣವನ್ನು ಜರ್ಮನಿಯ ಕೋರ್ಟ್ ಕೈಬಿಟ್ಟಿತ್ತು.

ಮೊದಲ ಸೆಟ್‌ನಲ್ಲಿ ಅಲ್ಕರಾಜ್ ಮೇಲುಗೈ ಸಾಧಿಸಿದರೆ, ಎರಡು ಮತ್ತು ಮೂರನೇ ಸೆಟ್‌ನಲ್ಲಿ ಜ್ವರೇವ್ ಹಿಡಿತ ಸಾಧಿಸಿ ಮುನ್ನಡೆ ಪಡೆದರು. ಆದರೆ, ಮತ್ತೆ ನಾಲ್ಕನೇ ಸೆಟ್‌ನಲ್ಲಿ ಅಲ್ಕರಾಜ್ ಲಯ ಕಂಡುಕೊಂಡು ಸ್ಕೋರ್ ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲಿ ಸ್ಪೇನ್ ಆಟಗಾರ ಪ್ರಾಬಲ್ಯ ಮೆರೆದರು. ಈ ಮೂಲಕ ಅಲ್ಕರಾಜ್ ಅವರು ಜ್ವೆರೇವ್ ವಿರುದ್ಧ ಗೆಲುವಿನ ದಾಖಲೆಯನ್ನು 5–5ಕ್ಕೆ ಸಮಬಲಗೊಳಿಸಿದರು.

ಕೊಕೊ–ಸಿನಿಯಾಕೋವಾಗೆ ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಕೊಕೊ ಗಾಫ್ ಅವರು ಜೆಕ್ ಗಣರಾಜ್ಯದ ಕಟೆರಿನಾ ಸಿನಿಯಾಕೋವಾ ಅವರೊಂದಿಗೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚೊಚ್ಚಲ ಡಬಲ್ಸ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಮೆರಿಕಾ ಓಪನ್ ಚಾಂಪಿಯನ್ ಆಗಿರುವ 20 ವರ್ಷದ ಕೊಕೊ, ಇಲ್ಲಿ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ವಿರುದ್ಧ ಪರಾಭವಗೊಂಡು ನಿರಾಸೆ ಅನುಭವಿಸಿದ್ದರು. ಆದರೆ, ಡಬಲ್ಸ್‌ನಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ.

ಕೊಕೊ ಮತ್ತು 28 ವರ್ಷದ ಕಟೆರಿನಾ ಜೋಡಿಯು ಭಾನುವಾರ ಫೈನಲ್ ಹಣಾಹಣಿಯಲ್ಲಿ 7-6 (5), 6-3 ಇಟಲಿಯ ಜಾಸ್ಮಿನ್ ಪಾವ್ಲೀನಿ ಮತ್ತು ಸಾರಾ ಎರಾನಿ ಅವರನ್ನು ನೇರ ಸೆಟ್‌ಗಳಲ್ಲಿ ಮಣಿಸಿತು.

ಕಟೆರಿನಾ ಅವರಿಗೆ ಡಬಲ್ಸ್‌ನಲ್ಲಿ ಇದು ಎಂಟನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ. ಈ ಹಿಂದಿನ ಏಳು ಪ್ರಶಸ್ತಿಯನ್ನು ಸ್ವದೇಶದ ಬಾರ್ಬೊರಾ ಕ್ರೆಜ್ಸಿಕೋವಾ ಅವರೊಂದಿಗೆ ಗೆದ್ದಿದ್ದಾರೆ.

ಜಾಸ್ಮಿನ್ ಅವರು ಇಲ್ಲಿ ಮಹಿಳಾ ಸಿಂಗಲ್ಸ್‌ನಲ್ಲೂ ರನ್ನರ್ ಅಪ್ ಆಗಿದ್ದಾರೆ.

ಬ್ರಿಜ್: ‘ಗೋಲ್ಡ್’, ‘ಸಿಲ್ವರ್’ ತಂಡ ವಿಭಾಗಗಳಲ್ಲಿ ಸ್ಪರ್ಧೆ

ಮೇವರಿಕ್ಸ್, ಏಸ್ ಕಾನ್ಕರರ್ಸ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಆರು ಆಟಗಾರರನ್ನು ಒಳಗೊಂಡ ಮೇವರಿಕ್ಸ್ ಮತ್ತು ನಾಲ್ವರು ಇದ್ದ ಏಸ್ ಕಾನ್ಕರರ್ಸ್, ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ತಂಡ ವಿಭಾಗದಲ್ಲಿ ಕ್ರಮವಾಗಿ ‘ಗೋಲ್ಡ್’ ಮತ್ತು ‘ಸಿಲ್ವರ್’ ವಿಭಾಗದ ಅಗ್ರ ಸ್ಥಾನ ಗಳಿಸಿದವು.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಗಳು ಕರಾವಳಿ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಮೋತಿ ಮಹಲ್ ಹೋಟೆಲ್‌ನಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಐದನೇ ದಿನವಾದ ಭಾನುವಾರ ತಂಡ ವಿಭಾಗಗಳ ಸ್ಪರ್ಧೆಯ ಆರಂಭದ ಸಂಭ್ರಮ. 28 ತಂಡಗಳನ್ನು ಒಳಗೊಂಡಿರುವ ಗೋಲ್ಡ್ ವಿಭಾಗದಲ್ಲಿ ಮೊದಲ ದಿನದ ನಾಲ್ಕು ಸುತ್ತುಗಳ ಅಂತ್ಯಕ್ಕೆ ಮೇವರಿಕ್ಸ್ 62.38 ಸ್ಕೋರು ಗಳಿಸಿತು.

24 ತಂಡಗಳು ಇರುವ ಸಿಲ್ವರ್ ವಿಭಾಗದಲ್ಲಿ ನಾಲ್ಕು ಸುತ್ತುಗಳ ಕೊನೆಯಲ್ಲಿ ಕಾನ್ಕರರ್ಸ್ ತಂಡ 67.41 ಸ್ಕೋರು ಗಳಿಸಿ ಮೊದಲ ಸ್ಥಾನಕ್ಕೇರಿತು. ಮಾವೆರಿಕ್ಸ್ ತಂಡದಲ್ಲಿ ಸುಬೋಧ್ ಮಸ್ಕರ, ಸುಭಾಷ್ ಗುಪ್ತಾ, ಕೈಜಾದ್ ಅಂಕಲೇಸೇರಿಯ, ಅನಾಲ್ ಶಾ, ಸಂದೀಪ್ ತಕ್ರಾಲ್ ಮತ್ತು ಜಗ್ಗಿ ಶಿವದಾಸಾನಿ, ಏಸ್ ಕಾನ್ಕರರ್ಸ್‌ನಲ್ಲಿ ಭಾಸ್ಕರ್ ಕುಮಾರ್ ಗಂಗೂಲಿ, ವಸಂತ ಪೈ, ಸಂಜೀಬ್ ಗಂಗೂಲಿ ಮತ್ತು ಸಂಜೀಬ್ ಭಟ್ಟಾಚಾರ್ಜೀ ಇದ್ದಾರೆ.

ಗೋಲ್ಡ್ ವಿಭಾಗದಲ್ಲಿ 56.55 ಸ್ಕೋರು ಕಲೆ ಹಾಕಿದ ಮೋನಿಕಾ ಜಾಜೂ ತಂಡ ಮತ್ತು ಸಿಲ್ವರ್ ವಿಭಾಗದಲ್ಲಿ ಅಲ್ಫಾ ಏಸ್ ತಂಡ ಎರಡನೇ ಸ್ಥಾನದಲ್ಲಿವೆ. ಅಲ್ಫಾ ಏಸ್ ಬಳಿ 62.87 ಸ್ಕೋರು ಇದೆ. ಬಿನೋದ್ ಕುಮಾರ್ ಶಾ, ಸಂಜಿತ್ ದೇ, ಮೋನಿಕಾ ಜಾಜೂ, ಸೋಮೇಶ್ವರ ಭಟ್ಟಾಚಾರ್ಯ, ವಿಕ್ರಾಂತ್ ಮೆಹ್ತಾ ಮತ್ತು ಸುಕಮಲ್ ದಾಸ್ ಅವರು ಮೋನಿಕಾ ಜಾಜೂ ತಂಡವನ್ನು ಪ್ರತಿನಿಧಿಸುತ್ತಿದ್ದು ಅಲ್ಫಾ ಏಸ್‌ನಲ್ಲಿ ರಾಜೇಂದ್ರನ್ ರಮೇಶ್, ಸುಬ್ರಹ್ಮಣ್ಯನ್ ಕರುಪ್ಪಣ್ಣನ್, ಶಂಕರ್ ಟಿ ಮತ್ತು ಪ್ರತಾಪನ್ ಎ.ಆರ್ ಇದ್ದಾರೆ.

ಮೊದಲ ದಿನ ಮೊದಲ 10 ಸ್ಥಾನ ಗಳಿಸಿದ ತಂಡಗಳು: ಗೋಲ್ಡ್ ವಿಭಾಗ: ಮೇವರಿಕ್ಸ್–1 (ಸ್ಕೋರು: 62.38), ಮೋನಿಕಾ ಜಾಜೂ–2 (56.55), ಫೆನೆಸ್ತಾ–3 (54.88), ಬೋಲ್ಡ್ ಪ್ಲೇ–4 (54.52), ಶ್ರೀ ರಾಧೇ–5 (51.80), ಫಾರ್ಮಿಡೇಬಲ್ಸ್–6 (50.77), ಡಿಯೊರಾಸ್ ಡೆಕ್‌ಹ್ಯಾಂಡ್ಸ್–7 (50.36), ಅರುಣ್ ಜೈನ್–8 (50.30), ಸಮಾಧಾನ್–9 (45.73), ಧಾಂಪುರ್ ಶುಗರ್ ಮಿಲ್ಸ್–10 (44.44); ಸಿಲ್ವರ್ ವಿಭಾಗ: ಏಸ್ ಕಾನ್ಕರರ್ಸ್–1 (67.41), ಅಲ್ಫಾ ಏಸ್–2 (62.87), ಹೆಕ್ಸಗನ್–3 (61.71), ಹಾರ್ಮನಿ–4 (57.14), ಜುತಿಕಾ–5 (51.96), ಯೂನಿಕ್ ಮಾಸ್ಟರ್ಸ್–6 (48.43), ಜೈ ಜಗನ್ನಾಥ್–7 (46.77), ಅನ್‌ಪ್ರೆಡಿಕ್ಟೇಬಲ್ಸ್–8 (46.16), ಜೈ ಗಣೇಶ್–9 (44.95), ದೀಪಾಧಾರ್–10 (44.86).



ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ನಡೆದ ಎನ್‌ಆರ್‌ಜೆ ರಾಜ್ಯ ಜೂನಿಯರ್ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಬಸವನಗುಡಿ ಈಜು ಕೇಂದ್ರದ ಬಾಲಕರ ಮತ್ತು ಬಾಲಕಿಯರ ತಂಡ.

ಹಾಕಿ: ಭಾರತ ತಂಡಗಳಿಗೆ ಸೋಲು

ಲಂಡನ್ (ಪಿಟಿಐ): ಅನುಭವಿ ಗೋಲುಕೀಪರ್ ಪಿ.ಆರ್. ಶ್ರೀಜೇಶ್ ಅವರ ಅಮೋಘ ಪ್ರದರ್ಶನ ಹೊರತಾಗಿಯೂ ಭಾರತ ಪುರುಷರ ತಂಡವು ಎಫ್‌ಐಎಚ್ ಪ್ರೊ ಹಾಕಿ ಲೀಗ್‌ನಲ್ಲಿ ಭಾನುವಾರ ಬ್ರಿಟನ್ ವಿರುದ್ಧ 2–3ರಿಂದ ಪರಾಭವಗೊಂಡಿತು.

ಭಾರತ ತಂಡದ ಪರ ಸುಖ್‌ಜೀತ್ ಸಿಂಗ್ (19ನೇ ನಿಮಿಷ) ಮತ್ತು ನಾಯಕ ಹರ್ಮನ್‌ಪ್ರೀತ್ ಸಿಂಗ್ (36ನೇ ನಿ) ಗೋಲು ಗಳಿಸಿದರು. ಆತಿಥೇಯ ತಂಡದ ಪರವಾಗಿ ರೋಪರ್ ಫಿಲ್ (1ನೇ ನಿ), ವಾಲರ್ ಜ್ಯಾಕ್ (37ನೇ ನಿ) ಮತ್ತು ಫಾರ್ಸಿತ್ ಆಲನ್ (50ನೇ ನಿ) ಗೋಲು ಗಳಿಸಿದರು. ಶ್ರೀಜೇಶ್ ಅವರು ಎದುರಾಳಿ ತಂಡದ ಪೆನಾಲ್ಟಿ ಅವಕಾಶಗಳಿಗೆ ತಡೆಯೊಡ್ಡಿ ಗಮನ ಸೆಳೆದರು.

16 ಪಂದ್ಯಗಳನ್ನು ಆಡಿರುವ ಭಾರತ ತಂಡವು ಐದರಲ್ಲಿ ಗೆಲುವು ಸಾಧಿಸಿ 24 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಮಹಿಳಾ ತಂಡಕ್ಕೂ ಸೋಲು: ಭಾರತ ಮಹಿಳಾ ತಂಡವೂ ಬ್ರಿಟನ್ ವಿರುದ್ಧದ ಪಂದ್ಯದಲ್ಲಿ 2–3ರಿಂದ ಸೋಲನ್ನು ಕಂಡಿತು. ಈ ಮೂಲಕ ಸತತ ಎಂಟು ಪಂದ್ಯಗಳ ಸೋಲಿನೊಂದಿಗೆ ಪ್ರೊ ಋತುವನ್ನು ಕೊನೆಗೊಳಿಸಿತು. 16 ಪಂದ್ಯಗಳ ಪೈಕಿ ಎರಡರಲ್ಲಿ ಮಾತ್ರ ಗೆದ್ದು 8 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನ ಪಡೆದಿದೆ.

ಕಾರ್ಟಿಂಗ್: ಅತಿಕಾಗೆ 3ನೇ ಸ್ಥಾನ

ಬೆಂಗಳೂರು: ಕಾಶ್ಮೀರದ 9 ವರ್ಷ ವಯಸ್ಸಿನ ಅತಿಕಾ ಮೀರ್, ಭಾನುವಾರ ನಡೆದ ಮೀಕೊ ಎಫ್‌ಎಂಎಸ್‌ಸಿಐ ರೋಟಾಕ್ಸ್ ರಾಷ್ಟ್ರೀಯ ಕಾರ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ರನ್ನರ್ ಅಪ್ ಪಡೆದಿದ್ದಾರೆ.

ನಗರದ ಮೀಕೋ ಕಾರ್ಟೋಪಿಯಾ ಟ್ರ್ಯಾಕ್‌ನಲ್ಲಿ ನಡೆದ ರೇಸ್‌ನಲ್ಲಿ ಅತಿಕಾ, ಮೈಕ್ರೋ ಮ್ಯಾಕ್ಸ್ ವಿಭಾಗದ (7ರಿಂದ 12 ವರ್ಷ) ಅಂತಿಮ ರೇಸ್‌ನ ಮೊದಲ ಸುತ್ತಿನಲ್ಲಿ 12 ನಿಮಿಷ 21.397 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು.

ಚೆನ್ನೈನ ರಿವಾನ್ ಪ್ರೀತಂ (12 ನಿ. 16.790 ಸೆ) ಹಾಗೂ ರೆಹಾನ್ ಖಾನ್ (12 ನಿ. 19.920 ಸೆ) ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಪಡೆದುಕೊಂಡರು. ಈ ಗೆಲುವಿನೊಂದಿಗೆ ಅತಿಕಾ, ಸತತ ಮೂರು ವಾರಾಂತ್ಯಗಳಲ್ಲಿ ಮೂರು ವಿವಿಧ ವಿಭಾಗಗಳಲ್ಲಿ ಅಗ್ರ 3ರೊಳಗೆ ಸ್ಥಾನ ಗಳಿಸಿದ ವಿಶೇಷ ಸಾಧನೆಯನ್ನು ಮಾಡಿದ್ದಾರೆ.

ಶನಿವಾರ ಅರ್ಹತಾ ಸುತ್ತಿನಲ್ಲಿ ಅತಿಕಾ 5ನೇ ಸ್ಥಾನ ಪಡೆದಿದ್ದರು. ಅತಿಕಾ ಯುರೋಪ್‌ಗೆ ತೆರಳಲಿದ್ದು, ಮುಂದಿನ ಕೆಲ ವಾರಗಳ ಕಾಲ ವಿವಿಧ ರೇಸ್‌ಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ಸ್ಕಾಟ್ ಕೋಚ್

ಚೆನ್ನೈ (ಪಿಟಿಐ): ಭಾರತ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ಮತ್ತೆ ಸ್ಕಾಟ್ ಫ್ಲೆಮಿಂಗ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ಭಾನುವಾರ ನಡೆದ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಸರ್ವಸದಸ್ಯರ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಲಾಯಿತು.

2012–2015ರ ಅವಧಿಯಲ್ಲಿ ಭಾರತ ತಂಡದ ಮುಖ್ಯ ಕೋಚ್ ಆಗಿದ್ದರು. ಅವರು ಈ ಹಿಂದೆ ಎನ್‌ಬಿಎ ಇಂಡಿಯಾ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಭಾರತದ ಕೋಚ್ ಆಗುವ ಮುನ್ನ ಅವರು 2010–12ರ ಅವಧಿಯಲ್ಲಿ ಟೆಕ್ಸಾಸ್ ಲೆಜೆಂಡ್ಸ್ ಕೋಚ್ ಆಗಿದ್ದರು.

ಅವರ ಮಾರ್ಗದರ್ಶನದಲ್ಲಿ ಭಾರತ ತಂಡವು ದಕ್ಷಿಣ ಏಷ್ಯಾ ಚಾಂಪಿಯನ್‌ಷಿಪ್ (2014 ಹಾಗೂ 2015)ಗಳಲ್ಲಿ ಚಿನ್ನ ಜಯಿಸಿತ್ತು.

ವಾಟರ್ ಪೋಲೊ: ಬಿಎಸಿ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದ (ಬಿಎಸಿ) ಬಾಲಕರ ಮತ್ತು ಬಾಲಕಿಯರ ತಂಡಗಳು ಎನ್‌ಆರ್‌ಜೆ ರಾಜ್ಯ ಜೂನಿಯರ್ ವಾಟರ್ ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ (ಎನ್‌ಎಸಿ) ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಬಿಎಸಿ ತಂಡವು 9–5ರಿಂದ ಆತಿಥೇಯ ಎನ್‌ಎಸಿ ತಂಡವನ್ನು ಮಣಿಸಿತು. ಸ್ವಿಮ್‌ಲೈಫ್ ತಂಡವು ಮೂರನೇ ಸ್ಥಾನ ಪಡೆಯಿತು.



ಬಿಎಸಿಯ ರೋಷಿನಿ ಎಸ್. ಮತ್ತು ಎನ್‌ಎಸಿಯ ಚಿನ್ಮಯ್ ಪೈ

ವಿಜೇತ ಎನ್‌ಎಸಿ ತಂಡದಲ್ಲಿ ತರುಣ್ ಆರ್, ಧ್ರುವ ಎ, ಸಾಕೇತ್ ಚಂದ್ರ ಡಿ.ಎಂ, ಎಸ್.ಎಸ್ ಅಭಯಸೂರ್ಯ, ಸೂರಜ್ ಆರ್, ರಾಘವ್ ಆರ್, ಅಮೋಘ್ ಪಿ, ಆದಿತ್ಯ ಎ, ತನ್ಮಯ್ ವಿ, ಸೂರ್ಯಚಂದ್ರ ಡಿ.ಎಂ, ದಿಶಾಂತ್ ಎಸ್, ರಿಷಭ್ ಎಂ. ರೆಡ್ಡಿ ಮತ್ತು ಲಾಲನ್ ಎಂ. ಗೌಡ ಇದ್ದರು. ರನ್ನರ್ಸ್ ಅಪ್ ಎನ್‌ಎಸಿ ತಂಡದಲ್ಲಿ ಬಿ. ಚಿನ್ಮಯ್ ಪೈ, ವತ್ಸರ್ ಶಾರದಾ, ಇನೇಶ್ ಶೆಣೈ, ಇಶಾನ್ ಶೆಣೈ, ಈರೇಶ್ ಶೆಣೈ, ಸುಹಾಸ್ ಎಸ್, ಕೇದಾರ್ ಸಂತೋಷ್ ಕುಲಕರ್ಣಿ, ಜಶ್ ಕರಿಯಾ, ಆರ್. ಎಲ್. ಹಿಮಾನೀಶ್, ಮಿಥಿಲ್ ಆರ್.ಎ, ಅಧ್ಯಯನ್ ಪಿ. ಶಿರೋಳೆ, ಸುದೀಕ್ಷ್ ದೀಪಕ್ ಮತ್ತು ಧ್ಯಾನ್ ಆರ್. ಇದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲೂ ಬಿಎಸಿ ತಂಡವು 16–3ರಿಂದ ಎನ್‌ಎಸಿ ತಂಡವನ್ನು ಸೋಲಿಸಿತು. ಇಲ್ಲೂ ಸ್ವಿಮ್ ಲೈಫ್ ತೃತೀಯ ಸ್ಥಾನ ಪಡೆಯಿತು. ಚಾಂಪಿಯನ್ ಬಿಎಸಿ ತಂಡದಲ್ಲಿ ತನ್ವಿ ಸಿ.ಎಚ್, ಲಾವಣ್ಯಾ ಯೋಗೇಶ್, ಮಾನ್ಯಾ ಆರ್, ಇಶಾನಿ ಕಿರಣ್, ದಿಶಾ ಸಂಯುಕ್ತಾ ಜಿ, ಧೃತಿ ಡಿ.ಕೆ, ರೋಷಿನಿ ಎಸ್, ನಿತ್ಯಾ ಸಿ, ಪ್ರಚೇತಾ ಆರ್. ರಾವ್, ಸಿಂಚನಾ ಸಿ.ಪಿ, ನದಿ ಬಸವರಾಜು, ಮೌಲ್ಯಾ ಎಚ್ ಮತ್ತು ಜಾಹ್ನವಿ ಎಲ್.ಗೌಡ ಇದ್ದರು. ರನ್ನರ್ಸ್ ಅಪ್ ಎನ್‌ಎಸಿ ತಂಡದಲ್ಲಿ ಅಕ್ಷಿತಾ ಪಟ್ನಾಯಕ್, ಪ್ರಣವಿ ಆರ್. ಠಂಕಿ, ತನ್ವಿ ರವಿ, ರಚನಾ ಜಯಪ್ರಕಾಶ್, ಶಿವಾಲಿ ಮಹೇಶ ಮಹಾಂತ, ಶ್ರೀಜಾ ಮಹಿಷಿ, ಮೋಹಿತಾ ಫಣಿ ತೋಟ, ದಿಯಾ ಶೆಟ್ಟಿ, ಯುಕ್ತಾ ವಿನೋದ್, ಧಾತ್ರಿ ಎಸ್.ಎಚ್, ಸುಮನಾ ಕಾರ್ತಿಕ್, ವಿಭಾ ಎಸ್. ಭಟ್ ಮತ್ತು ವೈಷ್ಣವಿ ಜಿ. ಇದ್ದರು.

ಬಾಲಕರ ವಿಭಾಗದಲ್ಲಿ ಚಿನ್ಮಯ್ ಪೈ (ಎನ್‌ಎಸಿ) ಮತ್ತು ಬಾಲಕಿಯರ ವಿಭಾಗದಲ್ಲಿ ರೋಷಿನಿ ಎಸ್. (ಬಿಎಸಿ) ಉತ್ತಮ ಆಟಗಾರರಾಗಿ ಹೊರಹೊಮ್ಮಿದರು.

ರಾಜ್ಯ ಮಹಿಳಾ ಚೆಸ್: ಮಾನಸಾಗೆ ಪ್ರಶಸ್ತಿ

ತುಮಕೂರು: ಬೆಂಗಳೂರಿನ ಮಾನಸಾ ಕೆ. ಅವರು ಭಾನುವಾರ ಮುಕ್ತಾಯಗೊಂಡ ರಾಜ್ಯ ಮಹಿಳಾ ಚೆಸ್ ಪಂದ್ಯಾವಳಿಯಲ್ಲಿ ಅಜೇಯ ಸಾಧನೆಯೊಡನೆ ಪ್ರಶಸ್ತಿ ಗೆದ್ದುಕೊಂಡರು. ಅವರು ಒಟ್ಟು 9 ಸುತ್ತುಗಳಿಂದ ಎಂಟು ಪಾಯಿಂಟ್ಸ್ ಸಂಗ್ರಹಿಸಿದರು.

ಶಿರಾ ರಸ್ತೆಯ ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ನಡೆದ ಮೂರು ದಿನಗಳ ಈ ಟೂರ್ನಿಯಲ್ಲಿ ಬೆಂಗಳೂರಿನ ಕೃಪಾ ಎಸ್. ಉಕ್ಕಲಿ ಮತ್ತು ಶ್ರೇಯಾ ರಾಜೇಶ್ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದರು. ಆದರೆ ಟೈಬ್ರೇಕ್ ಆಧಾರದ ಮೇಲೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ದಕ್ಷಿಣ ಕನ್ನಡದ ಆರುಷಿ ಸೆವೆರಿನ್ ಹೆಲೆನ್ ಡಿ ಸಿಲ್ವ (6.5) ನಾಲ್ಕನೇ ಸ್ಥಾನ ಪಡೆದರು. ಮೊದಲ ಮೂವರು ಕ್ರಮವಾಗಿ ಟ್ರೋಫಿ ಜೊತೆಗೆ ₹12,000, 10,500, 9,500 ನಗದು ಬಹುಮಾನ ಪಡೆದರು. ಆರುಷಿ ₹9,000 ನಗದು ಬಹುಮಾನ ಗಳಿಸಿದರು.

ಈ ನಾಲ್ವರೂ ಚೆನ್ನೈನಲ್ಲಿ ನಡೆಯಲಿರುವ ರಾಷ್ಟ್ರೀಯ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಅರ್ಹತೆ ಪಡೆದರು. ಉಡುಪಿಯ ಆರಾಧ್ಯ ಎಸ್.ಶೆಟ್ಟಿ, ಮಂಡ್ಯದ ಎ.ಎನ್.ಶೆಫಾಲಿ ಮತ್ತು ಮೈಸೂರಿನ ಗಂಗಮ್ಮ ಬಿ.ಎನ್., ಬೆಂಗಳೂರಿನ ವೇದಾಂಶಿ ಪಾಂಡೆ (ಎಲ್ಲರೂ ತಲಾ 6.5) ಐದರಿಂದ ಎಂಟರವರೆಗಿನ ಸ್ಥಾನಗಳನ್ನು ಪಡೆದರು. ನ್ಯೂ ತುಮಕೂರು ಜಿಲ್ಲಾ ಚೆಸ್ ಸಂಸ್ಥೆ ಹಾಗೂ ತುಮಕೂರು ಚೆಸ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಈ ಪಂದ್ಯಾವಳಿ ನಡೆಯಿತು.



ಟ್ರೋಫಿಯೊಂದಿಗೆ ಮಾನಸಾ